ಕರ್ನಾಟಕ ಸರ್ಕಾರ

ನುಡಿ ಕನ್ನಡ

ತೃತೀಯ ಭಾಷಾ ಕನ್ನಡ ಪಠ್ಯಪುಸ್ತಕ

(ಪರಿಷ್ಕೃತ)

೮

ಎಂಟನೆಯ ತರಗತಿ

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ನಂ. 4, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೆಯ ಹಂತ
ಬೆಂಗಳೂರು – 560 085

ಪಠ್ಯಪುಸ್ತಕ ರಚನಾ ಸಮಿತಿ

ಅಧ್ಯಕ್ಷರು

ಡಾ. ಎ. ಶಶಿಕಲ, ಕನ್ನಡ ಪ್ರಾಧ್ಯಾಪಕರು, ಸೇಂಟ್‌ಆನ್ಸ್ ಶಿಕ್ಷಣಮಹಾವಿದ್ಯಾಲಯ, ಮಂಗಳೂರು,

ಸದಸ್ಯರು

೧. **ಶ್ರೀ ಎ. ಭುಜಂಗಾಚಾರ್,** ಸಶಿ ಜ್ವಾಲಾಮಾಲಿನಿ ಬಾಲಿಕಾಪ್ರೌಢಶಾಲೆ,ಸಿಂಹನಗದ್ದೆ, ನರಸಿಂಹರಾಜಪುರ ತಾ, ಚಿಕ್ಕಮಗಳೂರು,ಜಿ

೨. **ಶ್ರೀ ಕಾಳಪ್ಪ ಪತ್ತಾರ್,** ಸಹ ಶಿಕ್ಷಕರು ಎಮ್. ಬಿ. ಎಸ್. ಎಲ್. ಪ್ರೌಢಶಾಲೆ, ಗಾಂಧಿನಗರ, ಬಳ್ಳಾರಿ,

೩. **ಡಾ. ಸಾಸ್ವೆಹಳ್ಳಿ ಸತೀಶ್,** ಸಹ ಶಿಕ್ಷಕರು, ಸರ್ಕಾರಿ ಪ ಪೂ ಕಾಲೇಜು, ಶಿವಮೊಗ್ಗ,

೪. **ಶ್ರೀಮತಿ ವಾಣಿ ಜಿ ಗಟ್ಟಿ,** ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಬಿ.ಎಂ ರೋಡ್, ಸಕಲೇಶಪುರ, ಹಾಸನ ಜಿಲ್ಲೆ.

೫. **ಶ್ರೀ ಸಿ.ಕೆ ಪ್ರಹ್ಲಾದ್,** ಉಪನ್ಯಾಸಕರು, ಸ ಪ ಪೂ ಕಾಲೇಜು, ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

೬. **ಶ್ರೀ ವಿ.ಕೆ ವಿಟ್ಲ ,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಗುರುವಾಯನಕೆರೆ ಬೆಳ್ತಂಗಡಿ ತಾ, ದಕ್ಷಿಣ ಕನ್ನಡ ಜಿಲ್ಲೆ.

ಪರಿಶೀಲಕರು

ಶ್ರೀ ಎ. ಬಿ. ಚಂದ್ರಶೇಖರ, ಪ್ರಾಧ್ಯಾಪಕರು, ಶ್ರೀ ಆದಿಚುಂಚನಗಿರಿ ಶಿಕ್ಷಣಮಹಾವಿದ್ಯಾಲಯ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.

ಸಂಪಾದಕೀಯ ಮಂಡಳಿ ಸದಸ್ಯರು

೧. **ಪ್ರೊ. ಸಾ.ಶಿ. ಮರುಳಯ್ಯ,** ಸಾಹಿತಿಗಳು, 'ರಾಗಿಣಿ', ಹಂಪಿನಗರ, ಬೆಂಗಳೂರು.

೨. **ಪ್ರೊ. ಅ.ರಾ.ಮಿತ್ರ,** ಸಾಹಿತಿಗಳು, ಕೆ.ಎಚ್. ಬಿ. ಕಾಲೋನಿ, ಯಲಹಂಕ, ಬೆಂಗಳೂರು.

೩. **ಡಾ. ವಿಷ್ಣು ಎಂ. ಶಿಂದೆ,** ಪ್ರಾಧ್ಯಾಪಕರು, ಶಿಕ್ಷಣವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

ಮುಖ್ಯ ಸಂಯೋಜಕರು

ಪ್ರೊ. ಜಿ. ಎಸ್. ಮುಡಂಬಡಿತ್ತಾಯ, ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ. ಕರ್ನಾಟಕ ಪಠ್ಯಪುಸ್ತಕ ಸಂಘ, ಬನಶಂಕರಿ ೩ನೇ ಹಂತ, ಬೆಂಗಳೂರು–೮೫.

ಸಲಹೆ ಮತ್ತು ಮಾರ್ಗದರ್ಶನ

೧. **ಶ್ರೀ ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫.

೨. **ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೫೬೦೦೮೫.

ಕಾರ್ಯಕ್ರಮ ಸಂಯೋಜಕರು

ಶ್ರೀ ಪಾಂಡುರಂಗ, ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಮುನ್ನುಡಿ

೨೦೦೫ನೆಯ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೆಯ ಸಾಲಿನಿಂದ ಒಂದನೆಯ ತರಗತಿಯಿಂದ ಹತ್ತನೆಯ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. ೧ ರಿಂದ ೫ ನೆಯ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು ೬ ರಿಂದ ೧೦ ನೆಯ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

೨೦೦೫ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ..

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮುರಿದು ಅವುಗಳ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳನ್ನು ಕೆಳಗಿನ ಮೂಲಭೂತ ವಿಧಾನಗಳ ಆಧಾರದ ಮೇಲೆ ರಚಿಸಲಾಗಿದೆ. ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach).

ಪಠ್ಯಪುಸ್ತಕಗಳಲ್ಲಿರುವ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಭಾರತೀಯ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾಪೂರಕ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ,

ಮೌಲ್ಯಗಳ ಸಂವರ್ಧನೆ ಹಾಗೂ ಮಕ್ಕಳ ಅಭ್ಯಾಸ ಪುಸ್ತಕಗಳಲ್ಲಿ ಅನೇಕ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸಿ ಅವರಲ್ಲಿ ಸಂಬಂಧಪಟ್ಟ ಸಾಮರ್ಥ್ಯ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲಗಳ ಸಂವರ್ಧನೆಯೇ ಕಲಿಕೆಯ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ(learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ವೃದ್ಧಿಮಾಡುತ್ತದೆ. ಪ್ರತಿ ಘಟಕದಲ್ಲಿಯೂ ಕೆಲವು ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಜೋಡಿಸಲಾಗಿದೆ. ಅವುಗಳನ್ನು ಮಕ್ಕಳೇ ಕಂಡುಹಿಡಿದು, ಚರ್ಚಿಸಿ ಜೀವನದಲ್ಲಿ ಅವುಗಳ ಅರಿವನ್ನುಂಟುಮಾಡಿಕೊಳ್ಳುವಂತೆ ಮಾಡಬೇಕು.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ ಮತ್ತು ಸಂಪಾದಕ ಮಂಡಳಿಯ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕವಿಗಳ ಹಾಗೂ ಸಾಹಿತಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಇದಕ್ಕೆ ತಮ್ಮ ಒಪ್ಪಿಗೆಯನ್ನು ನೀಡಿರುವ ಕವಿಗಳಿಗೆ ಹಾಗೂ ಸಾಹಿತಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

ಪ್ರೊ. ಜಿ.ಎಸ್. ಮುಡಂಬಡಿತ್ತಾಯ
ಮುಖ್ಯ ಸಂಯೋಜಕರು
ಪಠ್ಯಕ್ರಮ ಪರಿಷ್ಕರಣೆ ಹಾಗೂ
ಪಠ್ಯಪುಸ್ತಕ ರಚನೆ ಕ.ಪ.ಪು. ಸಂಘ
ಬೆಂಗಳೂರು.

ನಾಗೇಂದ್ರ ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ
ಬೆಂಗಳೂರು

ಸಮಕ್ಷಮ

ಭಾಷೆ ಮಾನವನ ಜೀವನಕ್ಕೆ ಅತ್ಯವಶ್ಯಕವಾದ ಒಂದು ಸಾಧನ. 'ಬಾಯಿದ್ದವರು ಬರದಲ್ಲೂ ಬದುಕಿದರು' ಎಂಬ ಮಾತನ್ನು ನೀವು ಕೇಳಿರಬಹುದು. ಭಾಷೆಯನ್ನು ಚೆನ್ನಾಗಿ ಬಲ್ಲವನು ಎಂತಹ ಕಷ್ಟಕರ ಪರಿಸ್ಥಿತಿಯಲ್ಲೂ ಸಮರ್ಥವಾಗಿ ಬಾಳಬಲ್ಲ. ಹಾಗಾಗಿ ಇಂದಿನ ನಮ್ಮ ಮಕ್ಕಳಲ್ಲಿ ಭಾಷೆಯ ಬಗೆಗಿನ ಸಾಮರ್ಥ್ಯವನ್ನು ನಮ್ಮ ಮಿತಿಯಲ್ಲಿ ಗರಿಷ್ಠ ಮಟ್ಟದಲ್ಲಿ ಬೆಳೆಸುವುದು ಕೇವಲ ಭಾಷಾಅಧ್ಯಾಪಕರ ಗುರಿ ಮಾತ್ರವಲ್ಲ; ಎಲ್ಲ ಅಧ್ಯಾಪಕರ ಗುರಿಯೂ ಹೌದು.

ಭಾರತಸರ್ಕಾರ ದೇಶದ ಎಲ್ಲ ಅಧ್ಯಾಪಕರಿಗೆ, ಶಾಲೆಗಳಿಗೆ ಕೊಡಮಾಡಿರುವ 'ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005' ಭಾಷಾ ಕಲಿಕೆ ಮತ್ತು ಬೋಧನೆಯನ್ನು ಕುರಿತಂತ ಗಮನಾರ್ಹವಾದ ಅಂಶಗಳನ್ನು ದಾಖಲಿಸಿದೆ. "ಭಾರತದಲ್ಲಿ ಇತರ ದೇಶಗಳಂತಲ್ಲದೆ ಶಾಲಾ ಹಂತದಲ್ಲೇ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಮಕ್ಕಳು ಕಲಿಯುತ್ತಾರೆ. ಈ ಭಾಷಿಕ ವೈವಿಧ್ಯ ಅನೇಕ ಕ್ಲಿಷ್ಟ ಸವಾಲುಗಳನ್ನು ಮುಂದಿಡುವಂತೆಯೇ ಅನೇಕ ಅವಕಾಶಗಳನ್ನೂ ತೆರೆದಿಡುತ್ತದೆ. ದ್ವಿಭಾಷಿಕ ಪ್ರೌಢಿಮೆ, ಅರಿವಿನ ಸಂವರ್ಧನೆ, ಸಾಮಾಜಿಕ ಸಹನೆ, ವೈವಿಧ್ಯಮಯ ಚಿಂತನೆ ಮತ್ತು ವಿದ್ಯಾರ್ಜನೆಯಲ್ಲಿ ಅಪ್ರತಿಮ ಸಾಧನೆ ಇವುಗಳ ಮಟ್ಟವನ್ನು ಗಣನೀಯವಾಗಿ ಹೆಚ್ಚಿಸುತ್ತವೆ ಎಂಬುದನ್ನು ಅನೇಕ ಅಧ್ಯಯನಗಳು ತೋರಿಸಿಕೊಟ್ಟಿವೆ" ಎಂಬ ಈ ದಾಖಲೆಯ ಮಾತು ಕನ್ನಡವನ್ನು ತೃತೀಯ ಭಾಷೆಯಾಗಿ ಕಲಿಸುವ ಸಂದರ್ಭದಲ್ಲಿ ಅತ್ಯಂತ ಔಚಿತ್ಯಪೂರ್ಣವೆನಿಸುತ್ತದೆ. ಕನ್ನಡವನ್ನು ತೃತೀಯ ಭಾಷೆಯಾಗಿ ಕಲಿಸುವ ಅಗತ್ಯವನ್ನೂ ದಾಖಲೆ ಸ್ಪಷ್ಟಪಡಿಸುತ್ತದೆ. "ದ್ವಿಭಾಷಿಕತೆ ಅಥವಾ ಬಹುಭಾಷಿಕತೆ ಜ್ಞಾನವರ್ಧನೆಗೆ ಸಹಕಾರಿ ಎಂಬ ಅಂಶವನ್ನು ನಾವಿಂದು ಖಚಿತವಾಗಿ ಬಲ್ಲೆವು. ಭಾರತದ ಭಾಷಿಕ ಪರಿಸ್ಥಿತಿಯು ಒಡ್ಡುವ ಸವಾಲುಗಳನ್ನು ಎದುರಿಸಲು ಮತ್ತು ಅದು ಒದಗಿಸುವ ಅವಕಾಶಗಳನ್ನು ಬಳಸಿಕೊಳ್ಳಲು ರೂಪಿಸಿದ ಪ್ರಯತ್ನಗಳಲ್ಲಿ ತ್ರಿಭಾಷಾ ಸೂತ್ರವೂ ಒಂದು. ಅದು ಅನೇಕ ಭಾಷೆಗಳನ್ನು ಕಲಿಯಲು ಚಿಮ್ಮುಹಲಗೆಯಾಗಿ ಬಳಸಿಕೊಳ್ಳಬಹುದಾದ ಒಂದು ತಂತ್ರ. ಅದನ್ನು ಅಕ್ಷರಶಃ ಪಾಲಿಸಬೇಕಾದ ಅಗತ್ಯವಿದೆ. ಬಹುಭಾಷಿಕತೆ ಮತ್ತು ರಾಷ್ಟ್ರೀಯ ಸಾಮರಸ್ಯವನ್ನು ಪ್ರೋತ್ಸಾಹಿಸುವುದೇ ಅದರ ಆದ್ಯ ಉದ್ದೇಶ".

ಭಾಷಾಶಿಕ್ಷಣದಲ್ಲಿ ಬಹು ಭಾಷೆಗಳನ್ನು ಅಳವಡಿಸುವುದು ಕೇವಲ ಮಕ್ಕಳ ಕಲಿಕೆಗೆ ಒದಗಿಸುವ ಭಾಷೆಗಳ ಸಂಖ್ಯೆಯ ದೃಷ್ಟಿಯಿಂದ ಮಾತ್ರವಲ್ಲ, ಬಹುಭಾಷಿಕ ತರಗತಿಯನ್ನು ಒಂದು ಸಂಪನ್ಮೂಲದ ರೂಪದಲ್ಲಿ ಬಳಸಿಕೊಳ್ಳಲು ಅಗತ್ಯವಾದ ತಂತ್ರಗಳನ್ನು ರೂಪಿಸಲೂ ಇದರಿಂದ ಸಾಧ್ಯವಾಗಬೇಕು.

ಕನ್ನಡ, ಕರ್ನಾಟಕದ ಭಾಷೆ; ಅನೇಕರ ಮಾತೃಭಾಷೆಯೂ ಹೌದು. ನಾಡಿನ ಸಾಂಸ್ಕೃತಿಕ ಸ್ವರೂಪವೇ ಕನ್ನಡ. ಇಲ್ಲಿ ನೆಲೆಸಿರುವ ಜನರೆಲ್ಲ ಕನ್ನಡ ಭಾಷೆಯನ್ನು ಬಲ್ಲವರಾದರೆ, ಇಡೀ ರಾಜ್ಯದ ಜನತೆ ಪರಸ್ಪರ ಹೊಂದಾಣಿಕೆ ಮತ್ತು ಸಾಮರಸ್ಯದಿಂದ ಬಾಳಲು ಅನುಕೂಲವಾಗುತ್ತದೆ. ಆದುದರಿಂದ ಕನ್ನಡ ಮಾತೃಭಾಷೆ ಅಲ್ಲದವರು ಸಹ, ಕನ್ನಡವನ್ನು ಕಲಿಯುವುದು ಅನಿವಾರ್ಯ ಹಾಗೂ ಅತ್ಯಗತ್ಯ. ಇಂಥವರು ಕನ್ನಡವನ್ನು ಪ್ರಥಮ ಭಾಷೆಯಾಗಿ ಅಧ್ಯಯನ ಮಾಡುವುದಾದರೆ ರಾಜ್ಯಭಾಷಾ ವಾಹಿನಿಗೆ ಬರುವುದರಲ್ಲಿ ಸಂದೇಹವಿಲ್ಲ. ಕಾರಣಾಂತರದಿಂದ ಅದು ಸಾಧ್ಯವಾಗದಿದ್ದಾಗ ಸರಳ, ಸುಲಭವಾಗಿ ತೃತೀಯ ಭಾಷೆಯನ್ನಾದರೂ ಅಭ್ಯಸಿಸಬೇಕು.

ಕನ್ನಡವನ್ನು ತೃತೀಯ ಭಾಷೆಯಾಗಿ ಬೋಧಿಸುವಾಗ ಭಾಷೆಗೆ ಸಂಬಂಧಿಸಿದ ಕೆಲವು ಸಾಮರ್ಥ್ಯಗಳನ್ನು ಬೆಳೆಸಲು ಗಮನಕೊಡಬೇಕಾಗುತ್ತದೆ. ಈ ಸಾಮರ್ಥ್ಯಗಳಿಗನುಗುಣವಾಗಿ ಈ ಹಂತದಲ್ಲಿ ಕನ್ನಡವನ್ನು ಮೂರನೆಯ ಭಾಷೆಯಾಗಿ ಬೋಧಿಸುವಾಗಿನ ಆಶಯ ಮತ್ತು ಉದ್ದೇಶಗಳನ್ನು ಮೂರು ವರ್ಷಗಳಿಗೆ (8, 9 ಮತ್ತು 10ನೇ ತರಗತಿ) ಕೆಳಕಂಡಂತೆ ಗುರುತಿಸಿಕೊಳ್ಳಲಾಗಿದೆ:

ಆಶಯ:

ಪಠ್ಯದ ಮೂಲಕ ಮಕ್ಕಳು

- ನಾಡು ನುಡಿಯ ಹಿರಿಮೆಯನ್ನು ಅರಿಯಬೇಕು.
- ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಅಭಿರುಚಿಯನ್ನು ಬೆಳೆಸಿಕೊಳ್ಳಬೇಕು.
- ಸಾಮಾಜಿಕ, ಸಾಂಸ್ಕೃತಿಕ, ವ್ಯಾವಹಾರಿಕ, ವೈಜ್ಞಾನಿಕ ಪರಿಸರಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು.
- ಕನ್ನಡದ ಸರಳ ರಚನೆಗಳನ್ನು ಓದಿ ಅರ್ಥೈಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು.
- ಕನ್ನಡ ಭಾಷೆಯಲ್ಲಿ ದೋಷರಹಿತ, ಕ್ರಮಬದ್ಧ ಹಾಗೂ ಆತ್ಮವಿಶ್ವಾಸದಿಂದ ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು.
- ಕನ್ನಡದ ನುಡಿಗಟ್ಟು, ಗಾದೆ ಹಾಗೂ ಪರಿಕಲ್ಪನೆಗಳನ್ನು ಸಂದರ್ಭಾನುಸಾರ ಅರ್ಥವತ್ತಾಗಿ ಪ್ರಯೋಗಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು.

- ಸಾಹಿತ್ಯದ ವಿವಿಧ ಪ್ರಕಾರಗಳ ಪರಿಚಯದೊಂದಿಗೆ ರಸಾಸ್ವಾದನೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕು.
- ಕನ್ನಡ ಭಾಷೆಯ ಭಾಷಾಂಶಗಳನ್ನು ಕಲಿತು ಬಳಸುವುದನ್ನು ಕಲಿಯಬೇಕು.

ಉದ್ದೇಶಗಳು: (8,9 ಮತ್ತು 10ನೇ ತರಗತಿಗಳಿಗೆ ಒಟ್ಟಾಗಿ)

೧. ಆಲಿಸುವ, ಗ್ರಹಿಸುವ, ನಿರರ್ಗಳ ಹಾಗೂ ಸ್ಪಷ್ಟವಾಗಿ ಸ್ವರಭಾರದೊಂದಿಗೆ, ಓದುವ ಸಾಮರ್ಥ್ಯವನ್ನು ಬೆಳೆಸುವುದು.

೨. ಜ್ಞಾನಾರ್ಜನೆ, ಸಾಹಿತ್ಯಾಭಿರುಚಿ, ಚಿಂತನೆ ಮತ್ತು ಆನಂದಕ್ಕಾಗಿ ಸ್ವತಂತ್ರವಾಗಿ ಓದಲು ಸಮರ್ಥರಾಗುವಂತೆ ಮಾಡುವುದು.

೩. ಪದಭಂಡಾರವನ್ನು ಹೆಚ್ಚಿಸಿಕೊಂಡು, ಸ್ಪಷ್ಟ ಉಚ್ಚಾರಣೆಯೊಂದಿಗೆ ವಾಕ್ಯಬಂಧಗಳನ್ನು ಅರ್ಥಮಾಡಿಕೊಳ್ಳುವುದು.

೪. ಭಾಷೆಯನ್ನು ದೋಷರಹಿತ ಹಾಗೂ ಪರಿಣಾಮಕಾರಿಯಾಗಿ ಬಳಸುವ ಪ್ರೌಢಿಮೆಯನ್ನು ಬೆಳೆಸುವುದು.

೫. ಸೌಂದರ್ಯಪ್ರಜ್ಞೆ, ಕಲ್ಪನೆ ಮತ್ತು ಸೃಜನಾತ್ಮಕ ಭಾವನೆಗಳನ್ನು ಜೀವಂತವಾಗಿರಿಸುವುದು.

೬. ನಾಡು, ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಆತ್ಮೀಯ ಅಭಿಮಾನವನ್ನು ಅಭಿವೃದ್ಧಿಗೊಳಿಸುವುದು.

೭. ನಾಡು, ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಆತ್ಮೀಯ ಅಭಿಮಾನವನ್ನು ವೃದ್ಧಿಗೊಳಿಸುವುದು.

೮. ರಾಷ್ಟ್ರೀಯ ಪ್ರಜ್ಞೆ, ಪ್ರಜಾಪ್ರಭುತ್ವ ಹಾಗೂ ಜೀವನ ಮೌಲ್ಯಗಳನ್ನು ಮುಖ್ಯವಾಗಿ ಗಮನಿಸುವುದು.

೯. ಲಿಂಗ ಸಮಾನತೆ, ಜಾತ್ಯತೀತತೆ, ವಿಶ್ವಶಾಂತಿ, ಸಹಬಾಳ್ವೆ, ಸ್ವಾವಲಂಬನೆ, ಆತ್ಮಗೌರವ ಮೊದಲಾದ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಲು ಪ್ರೇರೇಪಿಸುವುದು.

೧೦. ಪರಿಸರ ಸಂರಕ್ಷಣೆ, ರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆ ಮತ್ತು ವೈಜ್ಞಾನಿಕ ಮನೋಭಾವವನ್ನು ಸಾಹಿತ್ಯದ ಮೂಲಕ ಪರಿಚಯಿಸುವುದು.

೧೧. ಛಂದಸ್ಸು, ಅಲಂಕಾರಗಳನ್ನು ಆಯಾ ಪಾಠದ ಬೋಧನಾ ಸಂದರ್ಭದಲ್ಲಿ ಕ್ರಿಯಾತ್ಮಕವಾಗಿ ಕಲಿಸುವುದು.

ಪ್ರಸ್ತುತ ಪಠ್ಯವನ್ನು ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿ ರೂಪಿಸಲು ಪ್ರಯತ್ನ ಮಾಡಲಾಗಿದೆ. ಈ ಎಲ್ಲ ಸಾಮರ್ಥ್ಯಗಳನ್ನು ಬೆಳೆಸಲು ಅಗತ್ಯವಾದ ಗರಿಷ್ಠಮಟ್ಟದ ಅಭ್ಯಾಸಗಳನ್ನು ಕೊಡುವುದು ಒಂದು ಪಠ್ಯದ ದೃಷ್ಟಿಯಿಂದ ಅಸಾಧ್ಯ. ಹಾಗಾಗಿ ಸಾಧ್ಯವಾದಷ್ಟೂ ಮಟ್ಟಿಗೆ ಅಭ್ಯಾಸಗಳನ್ನು ಉದಾಹರಣೆಯ ರೂಪದಲ್ಲಿ ಕೊಡಲಾಗಿದೆ.

ಮಕ್ಕಳನ್ನು ಭಾಷಾಕೌಶಲಗಳ ಪ್ರಕ್ರಿಯೆಗೆ ಒಳಗುಮಾಡುವುದರಿಂದ ಮಾತ್ರ ಅವರಲ್ಲಿ ಭಾಷೆಯನ್ನು ಬೆಳೆಸಬಹುದು. ಓದುವುದನ್ನು ಓದುವುದರಿಂದ, ಬರೆಯುವುದನ್ನು ಬರೆಯುವುದರಿಂದ, ಮಾತನಾಡುವುದನ್ನು ಮಾತನಾಡುವುದರಿಂದ ಮಾತ್ರ ಗಳಿಸಿಕೊಳ್ಳಲು ಸಾಧ್ಯ. ಇಡೀ ತರಗತಿಯ ಸನ್ನಿವೇಶದಲ್ಲಿ ಈ ಕೌಶಲಗಳಿಗೆ ಮಹತ್ವ ಕೊಟ್ಟು ಬೋಧಿಸಬೇಕಾಗುತ್ತದೆ.

ಈ ಪಠ್ಯದ ಸನ್ನಿವೇಶದಲ್ಲಿ ಮತ್ತೊಂದು ಅಂಶ ಗಮನಾರ್ಹ. ಮೂರನೇ ಭಾಷೆಯಾಗಿ ಕನ್ನಡವನ್ನು ಆಯ್ಕೆಮಾಡಿಕೊಂಡ ಎಲ್ಲ ಮಕ್ಕಳ ಭಾಷಾಜ್ಞಾನ ಒಂದೇ ಮಟ್ಟದಲ್ಲಿರುವುದಿಲ್ಲ. ಆಯಾ ಮಟ್ಟದ ಮಕ್ಕಳಿಗೆ ಅಗತ್ಯವಾದ ಕಲಿಕೆಯ ಅನುಭವಗಳನ್ನು ಅಧ್ಯಾಪಕರು ಔಚಿತ್ಯಪೂರ್ಣವಾಗಿ ಆಯ್ಕೆ ಮಾಡಿಕೊಳ್ಳಬೇಕು. ಇಲ್ಲಿ ಕೊಟ್ಟಿರುವ ಎಲ್ಲ ಅಭ್ಯಾಸಗಳನ್ನೂ ಎಲ್ಲ ಶಾಲೆಗಳಲ್ಲೂ ಕಡ್ಡಾಯವಾಗಿ ಕಲಿಸಲೇಬೇಕೆಂದಲ್ಲ. ಅಧ್ಯಾಪಕರಿಗೆ ಸುಲಭವಾಗಲಿ ಎಂಬ ದೃಷ್ಟಿಯಿಂದ ಹಲವಾರು ಅಭ್ಯಾಸಗಳನ್ನು ಕೊಡಲಾಗಿದೆ. ಈ ತರಗತಿಗೆ ಪ್ರವೇಶಿಸುವ ವಿದ್ಯಾರ್ಥಿಗಳು ಈಗಾಗಲೇ ಎರಡು ವರ್ಷಗಳ ಕಾಲ ಕನ್ನಡವನ್ನು ಕಲಿತಿರುತ್ತಾರೆ ಎಂಬ ಅಂಶವನ್ನೂ ಅವರೆಲ್ಲರೂ ಕನ್ನಡ ಪ್ರಾದೇಶಿಕ ಭಾಷೆಯಾಗಿ ಹೊಂದಿದ ವಾತಾವರಣವನ್ನು ಹೊಂದಿರುತ್ತಾರೆ ಎಂಬ ವಿಷಯವನ್ನೂ ಇಲ್ಲಿ ಗಮನಕ್ಕೆ ತೆಗೆದುಕೊಳ್ಳಲಾಗಿದೆ. ಹಾಗಾಗಿ ಕ್ಲಿಷ್ಟಪದಗಳಿಲ್ಲದ, ಹೆಚ್ಚು ವಿಜಾತೀಯ ಒತ್ತಕ್ಷರಗಳಿಲ್ಲದ ಪದಗಳನ್ನುಳ್ಳ ಪಾಠಗಳನ್ನು ಆರಿಸಲು ಗಮನಕೊಡಲಾಗಿದೆ. ವ್ಯಾಕರಣವನ್ನು ನಿಯಮಬದ್ಧತೆಗಿಂತ ಬಳಕೆಗೆ ಹೆಚ್ಚು ಒತ್ತುಕೊಟ್ಟು ಹೇಳಿಕೊಡುವುದರಿಂದ ಮೂರನೇ ಭಾಷೆಯಾಗಿ ಕಲಿಯುವವರಿಗೆ ಹೆಚ್ಚು ಸುಲಭವೂ ಉಪಯುಕ್ತವೂ ಆಗುತ್ತದೆ.

ನಮ್ಮ ಪಠ್ಯಪುಸ್ತಕ ರಚನಾ ಸಮಿತಿಯ ಸದಸ್ಯರಿಗೆ ಈ ಒಂದು ಅವಕಾಶವನ್ನು ಮಾಡಿಕೊಟ್ಟ ಕರ್ನಾಟಕ ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿಕಾರಿವರ್ಗದವರಿಗೆ, ವಿಶೇಷವಾಗಿ, ಈ ಕಾರ್ಯದ ಸಂಯೋಜಕರಾದ ಶ್ರೀ ಮೂಡಂಬಡಿತ್ತಾಯ ಹಾಗೂ ಶ್ರೀ ಪಾಂಡುರಂಗ ಅವರಿಗೆ ಕೃತಜ್ಞತೆಗಳು. ನನ್ನ ಜೊತೆಗೆ ಅತ್ಯಂತ ಶ್ರದ್ಧೆ, ಆಸಕ್ತಿಗಳಿಂದ ಕಾಳಜಿ ವಹಿಸಿ ಈ ಪಠ್ಯಪುಸ್ತಕ ರಚನೆಯಲ್ಲಿ ಸಹಕರಿಸಿದ ಎಲ್ಲ ಸದಸ್ಯರಿಗೂ ಪರಿಶೀಲಕರಿಗೂ ಹಾಗೂ ಕಲಾವಿದರಿಗೂ ನನ್ನ ವೈಯಕ್ತಿಕ ಧನ್ಯವಾದಗಳು.

ಡಾ|| ಎ. ಶಶಿಕಲ
ಅಧ್ಯಕ್ಷರು
ಪಠ್ಯಪುಸ್ತಕ ರಚನಾ ಸಮಿತಿ

ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

ಸರ್ವಾಧ್ಯಕ್ಷರು :

ಪ್ರೊ. ಬರಗೂರು ರಾಮಚಂದ್ರಪ್ಪ, ರಾಜ್ಯಪಠ್ಯಪುಸ್ತಕ ಪರಿಷ್ಕರಣಸಮಿತಿ, ಕರ್ನಾಟಕ ಪಠ್ಯಪುಸ್ತಕಸಂಘ(ರಿ) ಬೆಂಗಳೂರು–೮೫

ಪರಿಷ್ಕರಣ ಸಮಿತಿ

ಅಧ್ಯಕ್ಷರು :

ಪ್ರೊ. ರಹಮತ್ ತರೀಕೆರೆ, ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ

ಸದಸ್ಯರು :

ಪ್ರೊ. ರುದ್ರಮುನಿ ಹಿರೇಮಠ, ಸಹಪ್ರಾಧ್ಯಾಪಕರು, ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸರಸ್ವತಿ ಬಡಾವಣೆ, ದಾವಣಗೆರೆ.

ಶ್ರೀ ಮಹದೇವಸ್ವಾಮಿ.ಬಿ, ಕನ್ನಡ ಅಧ್ಯಾಪಕರು, ಎ.ಪಿ.ಎಸ್. ಗ್ರಾಮಾಂತರ ಪ್ರೌಢಶಾಲೆ, ಸೋಮನಹಳ್ಳಿ, ಬೆಂಗಳೂರು–೮೨

ಶ್ರೀಮತಿ ಪದ್ಮ, ಎ, ಕನ್ನಡ ಅಧ್ಯಾಪಕಿ, ಎಂ.ಎಲ್.ಎ ಪ್ರೌಢಶಾಲೆ, ೧೫ನೇ ಕ್ರಾಸ್, ಮಲ್ಲೇಶ್ವರಂ ಬೆಂಗಳೂರು–೦೩

ಶ್ರೀ ರಾಜುಶೆಟ್ಟಿ, ಕನ್ನಡ ಅಧ್ಯಾಪಕರು, ಸರ್ಕಾರಿ ಪ.ಪೂ.ಕಾಲೇಜು, (ಪ್ರೌಢಶಾಲೆ ವಿಭಾಗ)ಹೊಮ್ಮರಹಳ್ಳಿ, ಹೆಚ್.ಡಿ.ಕೋಟೆ, ತಾ,

ಶ್ರೀ ಜವರೇಗೌಡ, ಕನ್ನಡ ಅಧ್ಯಾಪಕರು, ಶ್ರೀ ವಿದ್ಯಾಗಣಪತಿ ಪ್ರೌಢಶಾಲೆ, ಬಿದರಕೋಟೆ, ಮದ್ದೂರು ತಾ, ಮಂಡ್ಯ ಜಿಲ್ಲೆ.

ಕಲಾವಿದರು:

ಶ್ರೀ ಡಿ.ಎನ್. ವೆಂಕಟೇಶ್, ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕಸಲಗೆರೆ, ಮಂಡ್ಯ ದಕ್ಷಿಣ ತಾಲ್ಲೂಕು,

ಉನ್ನತ ಪರಿಶೀಲನ ಸಮಿತಿ

ಡಾ. ಎಚ್.ಎಸ್. ರಾಘವೇಂದ್ರರಾವ್, ನಿವೃತ್ತ ಪ್ರಾಧ್ಯಾಪಕರು, ನಂ.೭, ೧೫ನೇ ಕ್ರಾಸ್, ಜೆ.ಪಿ.ನಗರ, ಬೆಂಗಳೂರು–೭೮

ಡಾ. ಜಿ.ಆರ್. ತಿಪ್ಪೇಸ್ವಾಮಿ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ , ಮೈಸೂರು–೬

ಡಾ. ಸೈಯದ್ ಜಮೀರ್‌ಉಲ್ಲಾಷರೀಫ್, ನಿವೃತ್ತ ಪ್ರಾಂಶುಪಾಲರು, ಭಟ್ಕಳ, ಉತ್ತರ ಕನ್ನಡ ಜಿಲ್ಲೆ

ಡಾ. ಯಲ್ಲಪ್ಪ ಹಿಮ್ಮಡಿ, ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು, ರಾಯಬಾಗ, ಬೆಳಗಾವಿ ಜಿಲ್ಲೆ

ಡಾ. ಕಲಾವತಿ, ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ

ಡಾ. ಪ್ರಶಾಂತ್ ನಾಯಕ್, ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ, ಶಿವಮೊಗ್ಗ.

ಡಾ. ಗೀತಾವಸಂತ, ಸಹಪ್ರಾಧ್ಯಾಪಕರು, ಕನ್ನಡ ವಿಭಾಗ ತುಮಕೂರು ವಿಶ್ವವಿದ್ಯಾಲಯ ತುಮಕೂರು.

ಡಾ. ಸತ್ಯನಾರಾಯಣ, ಎಚ್.ಎಸ್. ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವಕಾಲೇಜು, ಬಸವನಗುಡಿ, ಬೆಂಗಳೂರು.

ಸಲಹೆ ಮತ್ತು ಮಾರ್ಗದರ್ಶನ :

ಶ್ರೀ ಎಂ.ಪಿ. ಮಾದೇಗೌಡ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು–೮೫

ಶ್ರೀ ಕೆ.ಜಿ. ರಂಗಯ್ಯ, ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು–೮೫

ಕಾರ್ಯಕ್ರಮ ಸಂಯೋಜಕರು :

ಶ್ರೀಮತಿ ಎಂ.ಡಿ ಉಷಾ, ಹಿರಿಯ ಸಹಾಯಕ ನಿರ್ದೇಶಕರು ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು–೮೫

ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪-೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬-೧೭ ರ ಬದಲು ೨೦೧೭-೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು

ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇವೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

(ಎಂ.ಪಿ. ಮಾದೇಗೌಡ)
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–೮೫

(ಪ್ರೊ. ಬರಗೂರು ರಾಮಚಂದ್ರಪ್ಪ)
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–೮೫

ಪರಿವಿಡಿ

೧. ಕಾಮನ ಬಿಲ್ಲು ಕಮಾನು ಕಟ್ಟಿದೆ

– ಕುವೆಂಪು

ಪ್ರವೇಶ: ನಿಸರ್ಗ ಕವಿಗಳಿಗೆ ಸ್ಫೂರ್ತಿಯ ಆಗರ. ಪ್ರಕೃತಿಯ ಅನೇಕ ಅಂಶಗಳನ್ನು ತಮ್ಮ ಕವಿತೆಗಳಲ್ಲಿ ಕವಿಗಳು ಬಿಚ್ಚಿಟ್ಟಿದ್ದಾರೆ. ಆಕಾಶ, ಸೂರ್ಯ, ನದಿ, ಸಮುದ್ರ, ಕೆರೆ, ತೋಟ, ಬೆಟ್ಟ–ಗುಡ್ಡ, ಕಾಡು–ಮೇಡು ಮುಂತಾದವನ್ನು ಕಂಡ ಕವಿಯ ಮನಸ್ಸು ಗರಿಗೆದರುತ್ತದೆ. ಇದೇ ರೀತಿ ಪ್ರಕೃತಿಯ ಒಂದು ಅಚ್ಚರಿಯೆಂದರೆ ಮಳೆಗಾಲದಲ್ಲಿ ಆಕಸ್ಮಿಕವಾಗಿ ಹುಟ್ಟುವ ಕಾಮನಬಿಲ್ಲು. ಏಳುಬಣ್ಣಗಳಿಂದ ಕೂಡಿದ ಇದು ಭೂಮಿಗೂ ಆಕಾಶಕ್ಕೂ ಸೇತುವೆ ನಿರ್ಮಿಸುವ ರೀತಿ ಆಕರ್ಷಕವಾದುದು. ಈ ನೋಟವು ಯಾರನ್ನೇ ಆದರೂ ಕುಣಿದು ಕುಪ್ಪಳಿಸುವಂತೆ ಮಾಡುತ್ತದೆ. ಬಿಲ್ಲಿನಾಕಾರದ ಈ ಮಳೆಬಿಲ್ಲಿನ ಮನಮೋಹಕ ವೈಚಿತ್ರ್ಯಗಳನ್ನು ಪ್ರಸ್ತುತ ಕವನ ತೆರೆದಿಡುತ್ತದೆ.

ಕಾಮನ ಬಿಲ್ಲು ಕಮಾನು ಕಟ್ಟಿದೆ;
ಮೋಡದ ನಾಡಿನ ಬಾಗಿಲಿಗೆ!

ಬಣ್ಣಗಳೇಳನು ತೋರಣ ಮಾಡಿದೆ;
ಕಂದನ ಕಣ್ಣಿಗೆ ಚಂದವನೂಡಿದೆ.


ಹಣ್ಣಿನ ಹೂವಿನ ಹೊನ್ನನು ಕೂಡಿದೆ;
ಮಕ್ಕಳಿಗೋಕುಳಿಯಾಟವನಾಡಿದೆ.



ತೆಂಗಿನ ತೋಟದ ಬುಡದಲಿ ಮೂಡಿದೆ;
ಭೂಮಿಗೆ ಬಾನಿಗೆ ಸೇತುವೆ ಹೂಡಿದೆ.

ಕಾಮನ ಬಿಲ್ಲು ಕಮಾನು ಕಟ್ಟಿದೆ;
ಮೋಡದ ನಾಡಿನ ಬಾಗಿಲಿಗೆ!

ಕೃತಿಕಾರರ ಪರಿಚಯ



ಕುವೆಂಪು ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪನವರ ಮಗ ಪುಟ್ಟಪ್ಪನವರು, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯಲ್ಲಿ ೨೯ನೇ ಡಿಸೆಂಬರ್ ೧೯೦೪ರಂದು ಜನಿಸಿದರು. ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಸಂಸ್ಥಾಪಕರಾಗಿ, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿದರು. ಇವರು ರಚಿಸಿರುವ 'ಶ್ರೀರಾಮಾಯಣ ದರ್ಶನಂ' ಒಂದು ಮಹಾಕಾವ್ಯವಾಗಿದೆ. ಇವರು ರಚಿಸಿರುವ 'ಕಾನೂರು ಹೆಗ್ಗಡಿತಿ', 'ಮಲೆಗಳಲ್ಲಿ ಮದುಮಗಳು' ಎಂಬ ಬೃಹತ್ ಕಾದಂಬರಿಗಳು, 'ನೆನಪಿನ ದೋಣಿಯಲ್ಲಿ' ಎಂಬ ಆತ್ಮಕಥನ, 'ನನ್ನ ಮನೆ', 'ಕೊಳಲು', 'ನವಿಲು', 'ಪ್ರೇಮಕಾಶ್ಮೀರ' ಮುಂತಾದ ಕವನ ಸಂಕಲನಗಳು, 'ಮಹಾರಾತ್ರಿ', 'ಬೆರಳ್ಗೆ ಕೊರಳ್', 'ರಕ್ತಾಕ್ಷಿ' 'ಶೂದ್ರ ತಪಸ್ವಿ' ಮೊದಲಾದ ನಾಟಕಗಳು ಸಾಹಿತ್ಯಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದಿವೆ.

ಕುವೆಂಪು ಇವರಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿ, ಪದ್ಮಭೂಷಣ, ಪದ್ಮವಿಭೂಷಣ ಹಾಗೂ ರಾಷ್ಟ್ರಕವಿ ಪ್ರಶಸ್ತಿಗಳು ದೊರೆತಿವೆ. ಇವರು ೧೯-೧೧-೧೯೯೪ರಲ್ಲಿ ನಿಧನರಾದರು.

'ಕಾಮನ ಬಿಲ್ಲು ಕಮಾನು ಕಟ್ಟಿದೆ' ಎಂಬ ಕವನವನ್ನು ಕುವೆಂಪು ಅವರ ***'ನನ್ನ ಮನೆ'*** *ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.*

ಪದಗಳ ಅರ್ಥ

ಊಡು-ಉಣಿಸು;
ಓಕುಳಿ-ಉತ್ಸವಕಾಲದಲ್ಲಿ ಸಂತೋಷದಿಂದ ಪರಸ್ಪರ ಮೈಮೇಲೆ ಎರಚುವ ಬಣ್ಣದ ನೀರು;
ಕಮಾನು-ಅರ್ಧ ಚಂದ್ರಾಕೃತಿಯ ರಚನೆ;
ತೋರಣ-ಅಲಂಕಾರಕ್ಕಾಗಿ ಬಾಗಿಲು ಮೊದಲಾದವುಗಳಿಗೆ ಕಟ್ಟುವ ಚಿಗುರು;
ಬಾನು-ಆಕಾಶ;
ಬಿಲ್ಲು-ಬಾಣವನ್ನು ಬಿಡಲು ಬಳಸುವ ಸಲಕರಣೆ;
ಬುಡ-ಮರದ ತಳಭಾಗ, ಮರದ ಬೊಡ್ಡೆ;
ಸೇತುವೆ-ನದಿ ಮೊದಲಾದವುಗಳನ್ನು ದಾಟಲು ಕಟ್ಟಿರುವ ರಚನೆ;
ಹೊನ್ನು-ಚಿನ್ನ, ಸಂಪತ್ತು.

ಟಿಪ್ಪಣಿ

ಕಾಮನಬಿಲ್ಲು :

ಏಳು ಬಣ್ಣಗಳಿಂದ ಕೂಡಿದ್ದು, ಮಳೆಗಾಲದಲ್ಲಿ ಬಾನಿನಲ್ಲಿ ಕಂಡುಬರುವ ಅಪೂರ್ವ ಪ್ರಕೃತಿ ವೈಚಿತ್ರ್ಯ. ನೇರಳೆ, ಕಡುನೀಲಿ, ನೀಲಿ, ಹಸಿರು, ಹಳದಿ, ಕಿತ್ತಳೆ ಮತ್ತು ಕೆಂಪು ಇವೇ ಆ ಏಳು ಬಣ್ಣಗಳು.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ:

೧. ಕಾಮನ ಬಿಲ್ಲು ಯಾವುದನ್ನು ತೋರಣವನ್ನಾಗಿ ಮಾಡಿದೆ?

೨. ಮಕ್ಕಳಿಗೆ ಕಾಮನ ಬಿಲ್ಲು ಯಾವ ಆಟವನ್ನು ಆಡಿಸಿದೆ?

೩. ಕಾಮನ ಬಿಲ್ಲು ಎಲ್ಲಿ ಮೂಡಿದೆ ಎಂದು ಕುವೆಂಪು ಹೇಳಿದ್ದಾರೆ?

೪. ಕುವೆಂಪುರವರು ವರ್ಣಿಸಿರುವಂತೆ ಭೂಮಿಗೆ ಬಾನಿಗೆ ಸೇತುವೆಯನ್ನು ನಿರ್ಮಿಸಿರುವುದು ಯಾವುದು?

೫. ಕಾಮನ ಬಿಲ್ಲಿನಲ್ಲಿರುವ ಬಣ್ಣಗಳಾವುವು?

ಆ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಕಾಮನ ಬಿಲ್ಲು ಕಂದಮ್ಮಗಳಿಗೆ ಹೇಗೆ ಸಂತಸವನ್ನು ಉಂಟುಮಾಡಿದೆ?

೨. ಕುವೆಂಪುರವರು ಕಾಮನ ಬಿಲ್ಲಿನ ಸೊಬಗನ್ನು ಹೇಗೆ ವರ್ಣಿಸಿದ್ದಾರೆ?

ಭಾಷಾಭ್ಯಾಸ

ಅ) ಕೆಳಗಿನ ಪದಗಳಿಗೆ 'ಕಾಮನ ಬಿಲ್ಲು ಕಮಾನು ಕಟ್ಟಿದೆ' ಪದ್ಯದಲ್ಲಿ ಇರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.

ಮಾಡಿದೆ, ಕೂಡಿದೆ, ಮೂಡಿದೆ.

ಆ. ಕೆಳಗಿನ ಪದಗಳಿಗೆ ಪ್ರಾಸಪದಗಳನ್ನು ಆಲೋಚಿಸಿ ಬರೆಯಿರಿ.

ಉದಾ: ತೋರಣ–ಹೂರಣ

ಹಣ್ಣಿನ, ತೋಟ, ಮೋಡ, ನಾಡು.

ಆ) ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಓದಿಕೊಂಡು ಅದೇ ಅರ್ಥವನ್ನು ಕೊಡುವ 'ಕಾಮನ ಬಿಲ್ಲು ಕಮಾನು ಕಟ್ಟಿದೆ' ಪದ್ಯದ ಸಾಲುಗಳನ್ನು ಬರೆಯಿರಿ.

ಹಣ್ಣು, ಹೂವು, ಹೊನ್ನಿನಿಂದ ಕೂಡಿರುವ ಕಾಮನ ಬಿಲ್ಲು,

ಏಳು ಬಣ್ಣಗಳಿಂದ ಕೂಡಿರುವ ತೋರಣವನ್ನು ಕಟ್ಟಿ,

ಮಕ್ಕಳ ಕಣ್ಣಿಗೆ ಅಂದವನ್ನುಂಟು ಮಾಡಿ, ಬಣ್ಣದ ನೀರಿನ ಆಟವನ್ನು ಆಡಿಸಿದೆ.

ಇ) ಬಿಡಿಸಿ ಬರೆದಿರುವ ಪದಗಳನ್ನು ಕೂಡಿಸಿ ಬರೆಯಿರಿ.

ಉದಾ: ಬಣ್ಣಗಳು + ಏಳನು – ಬಣ್ಣಗಳೇಳನು

ಚಂದವನು+ಊಡಿದೆ, ಹೊನ್ನು+ಅನ್ನು, ಮಕ್ಕಳಿಗೆ+ಓಕುಳಿ, ಆಟವನು+ಆಡಿದೆ.

ಈ) ಕೆಳಗಿನ ಪದಗಳನ್ನು ಓದಿಕೊಂಡು ಬರೆಯಿರಿ.

ಕಾಮನ ಬಿಲ್ಲು, ಬಣ್ಣಗಳೇಳು, ಓಕುಳಿಯಾಟ, ತೆಂಗಿನ ತೋಟ, ಮೋಡದ ನಾಡು.

ಭಾಷಾ ಚಟುವಟಿಕೆ

ಅ) ಕಾಮನ ಬಿಲ್ಲಿನ ಸೌಂದರ್ಯವನ್ನು ಕುರಿತು ತರಗತಿಯಲ್ಲಿ ಚರ್ಚಿಸಿ, ಅದನ್ನು ಕುರಿತು ಐದಾರು ವಾಕ್ಯಗಳನ್ನು ಬರೆಯಿರಿ.

ಆ) ಕುವೆಂಪುರವರ ಕವನ ಸಂಗ್ರಹ, ನಾಟಕ ಮತ್ತು ಮಕ್ಕಳ ಪುಸ್ತಕದ ಒಂದೊಂದು ಹೆಸರನ್ನು ಬರೆಯಿರಿ.

ಇ) 'ಕಾಮನ ಬಿಲ್ಲು ಕಮಾನು ಕಟ್ಟಿದೆ' ಪದ್ಯವನ್ನು ಕಂಠಪಾಠಮಾಡಿ ಸಾಮೂಹಿಕವಾಗಿ ಹಾಡಿರಿ.

ಈ) ಚಿತ್ರದಲ್ಲಿರುವ ಪ್ರಕೃತಿಯ ಸೌಂದರ್ಯ ಕುರಿತು ಐದಾರು ವಾಕ್ಯಗಳನ್ನು ಬರೆಯಿರಿ.



ಛಂದಸ್ಸು

ಪದ್ಯ ರಚನೆಯ ನಿಯಮಗಳನ್ನು ವಿವರಿಸುವ ಶಾಸ್ತ್ರವೇ ಛಂದಶ್ಶಾಸ್ತ್ರ. ಛಂದಶ್ಶಾಸ್ತ್ರದ ಪ್ರಕಾರ ರಚಿತವಾದ ಪದ್ಯವನ್ನು ಛಂದೋಬದ್ಧ ಪದ್ಯ ಎನ್ನುವರು.

ಛಂದಸ್ಸಿನಲ್ಲಿ ಮುಖ್ಯವಾಗಿ ಮೂರು ವಿಭಾಗಗಳಿವೆ

೧. ಪ್ರಾಸ

೨. ಯತಿ

೩. ಗಣ

ಪ್ರಕೃತಿಯ ತೋರಣ-ಸಂತಸಕೆ ಕಾರಣ

*****

೨. ಮರದ ಧ್ಯಾನದಲ್ಲಿ

– ಆರ್. ಕುಮಾರ್

ಪ್ರವೇಶ: ಮರಗಳು ಸಕಲ ಜೀವಿಗಳ ಆಶ್ರಯ ತಾಣ. ಇವು ಆಹಾರ, ನೆರಳು, ಗಾಳಿಯನ್ನಷ್ಟೇ ಕೊಡುವುದಿಲ್ಲ. ಮನುಷ್ಯರಿಗೆ ಪ್ರೀತಿ, ತ್ಯಾಗ, ಕರುಣೆಯ ಸಂದೇಶವನ್ನೂ ಕೊಡುತ್ತವೆ. ಜನ ತಮ್ಮನ್ನು ಕಡಿದರೂ ಮತ್ತೆ ಮತ್ತೆ ಚಿಗುರಿ ತಮ್ಮ ಇರುವಿಕೆಯನ್ನು ಸಾರುವ ಮರಗಳು, ಸಮಾಜದಲ್ಲಿ ಹೇಗೆ ಬಾಳಬೇಕು ಎಂಬುದನ್ನು ಸಾರಿಹೇಳುತ್ತವೆ. ಹೆತ್ತವರು ಮುಪ್ಪಾದಾಗ ವೃದ್ಧಾಶ್ರಮಕ್ಕೆ ನೂಕುವ ಮಕ್ಕಳನ್ನು ಕಂಡು ಮಾತನಾಡದ ಈ ಮರಗಳು ನಗುತ್ತವೆ. ಮನುಷ್ಯರ ನಿಷ್ಕರುಣ ಆಲೋಚನೆ ಮತ್ತು ಭಾವನೆಗಳು ಪರಿಸರಕ್ಕೂ ಮಾನವ ಜನಾಂಗಕ್ಕೂ ಹೇಗೆ ಮಾರಕವಾಗಿವೆ ಎಂಬುದು ಈ ಲೇಖನದಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

ಮರಗಳು ಸೃಷ್ಟಿಯ ಒಂದು ಚಿತ್ತಾರ; ಅವು ಭೂಮಿಯ ಹೊದಿಕೆ; ಹಾಗೆಂದೇ ಮಣ್ಣು ಮರಗಳ ಬೇರನ್ನು ಅಪ್ಪಿಕೊಂಡೇ ಇರುತ್ತದೆ. ಮರಗಳಿಂದ ನಾವು ಕಲಿಯಬೇಕು. ಒಂದೊಂದು ಎಲೆಯೂ ವಿಶ್ವವಿದ್ಯಾನಿಲಯವೇ! ಮರಗಳು ನಿತ್ಯವೂ ಆಶ್ಚರ್ಯಸೂಚಕ ಚಿಹ್ನೆಗಳೇ.

ಇದನ್ನರಿಯದ ಜನ ಮರಗಳನ್ನು ಮನುಷ್ಯರಿಗೆ ಹೋಲಿಸಿ ನಿಂದಿಸುತ್ತಾರೆ. 'ಮರದ ದಿಮ್ಮಿ ಇದ್ದ ಹಾಗೆ ಇದ್ದಿಯಲ್ಲೋ', 'ನಿನ್ನ ಬುದ್ಧಿ ಕೊರಡಾಗಿದೆ' ಎನ್ನುವರು. ನಮ್ಮ ಜನಪದರು ಸಹ 'ಜಾಲೀಯ ಮರವು ನೆರಳಲ್ಲ ಮಗಳೆ, ತಾಯೀಯ ಮನೆಯು ಸ್ಥಿರವಲ್ಲ' ಎಂದಿದ್ದಾರೆ. 'ಒಣಮರಕ್ಕೆ ಗಿಳಿಕಾದು ಕುಳಿತಂತೆ', 'ಜಾಲಿಯ ಹಾಕಿದರೆ ಕಾಲಿಗೆ ಮೂಲ' ಎಂಬ ನುಡಿಗಟ್ಟು ಮತ್ತು ಗಾದೆ ಮಾತುಗಳಿಂದಲೂ ಮರಗಳನ್ನು ಹೀಯಾಳಿಸುವರು. 'ಕಷ್ಟ ಮನುಷ್ಯನಿಗೆ ಬಾರದೆ ಮರಕ್ಕೆ ಬರುತ್ತದೆಯೇ' ಎಂಬ ಅರ್ಥಹೀನ ಮಾತುಗಳನ್ನು ಕೇಳುತ್ತಿರುತ್ತೇವೆ. ಈ ರೀತಿಯ ಸಾಲುಗಳು ನನ್ನನ್ನು ಬಹಳ ನೋಯಿಸುತ್ತವೆ. ಆಗೆಲ್ಲ ಮರಗಳನ್ನು ನೆನೆಯುತ್ತೇನೆ. ನನ್ನ ಹೃದಯ ತಣಿಯುತ್ತದೆ.



ಮರಗಳು ಪಕ್ಷಿ ಸಂಕುಲಕ್ಕೆ ಆಲಯವಾಗಿವೆ. ರಮ್ಯ ಜಗತ್ತಿಗೆ ತೋರಣವಾಗಿವೆ. ಸೌಂದರ್ಯಕ್ಕೆ ಆಗರವಾಗಿವೆ. ಹೂಗಳಿಗೆ ಜನ್ಮಕೊಡುವ ತಾಯಿಯಾಗಿವೆ. ಆ ಹೂಗಳ ರಸವನ್ನು ಉಣ್ಣಲು ಬರುವ ಪತಂಗ ಪಾತರಗಿತ್ತಿಗಳು ಸಂಭ್ರಮಿಸುತ್ತವೆ. ವಿಜ್ಞಾನಿಗಳ ಪ್ರಕಾರ, ಒಂದು ಮರ ಹತ್ತು ಸಾವಿರ ಜನಕ್ಕೆ ಆಮ್ಲಜನಕ ನೀಡುವ ಜೀವದಾಯಕ ಕೆಲಸ ಮಾಡುತ್ತದೆ. ಮರವು ಮೋಡಗಳನ್ನು ತಡೆದು ಮಳೆ ತರಿಸುವ ವ್ಯವಸ್ಥಾಪಕನಾಗುತ್ತದೆ.

ಮನುಷ್ಯನಿಗೂ ಮರವೇ ಗುರುವಾಗಿ ಪ್ರೀತಿ, ದಾನ, ಸಹಾಯ ಮಾಡುವುದನ್ನು ಕಲಿಸುತ್ತದೆ. ಕಹಿಯನ್ನು ಸಹಿಸಿ ಸಹನೆ ಬೆಳೆಸಿಕೊಳ್ಳುವುದನ್ನು ರೂಢಿಸುತ್ತದೆ.

ಮರವು ತನಗೆ ಕಲ್ಲಿನಿಂದ ಹೊಡೆದವನಿಗೂ ಹಣ್ಣನ್ನು ಕೊಡುತ್ತದೆ; ಕಡಿಯುವ ಕೊಡಲಿಗೂ ಕಾವು ಕೊಡುತ್ತದೆ. ಕಡಿದು ಉರಿಸುವವರಿಗೆ ಅಡುಗೆ ತಯಾರಿಸುವುದಕ್ಕೆ ನೆರವಾಗುತ್ತದೆ. ಹೀಗೆ ತನ್ನ ದೇಹವನ್ನೇ ಮನುಷ್ಯನ ಉಪಯೋಗಕ್ಕಾಗಿ ಮೀಸಲಿಡುವ ಉದಾರಗುಣಕ್ಕೆ ಉದಾಹರಣೆಯಾಗಿ ಅದು ಬದುಕುತ್ತದೆ. ಕಡಿಕಡಿದಷ್ಟೂ ಅಡೆತಡೆಗಳ ಬದಿಗೊತ್ತಿ ಮುನ್ನುಗ್ಗಿ ಬೆಳೆಯುತ್ತದೆ. ಬಾಳಲು ಉತ್ಸಾಹ ತುಂಬುವಂತೆ ಪ್ರೇರೇಪಿಸುತ್ತದೆ. ಬಿಳಲು ಬಿಟ್ಟು ಜಗದಗಲ ಹರಡಿನಿಂತ ಆಲದಮರವು ಹೆತ್ತವರನ್ನು ವೃದ್ಧಾಶ್ರಮಕ್ಕೆ ಬಿಟ್ಟುಬರುವ ಮಕ್ಕಳನ್ನು ಕಂಡು ನಗುತ್ತದೆ. ಯಾರ ಸಹಾಯವೂ ಇಲ್ಲದೆ ತನ್ನಿಂದ ತಾನೇ ಬೆಳೆದ ತಾಳೆಮರ, ಉರಿಬಿಸಿಲಲ್ಲೂ ಹಣ್ಣನಿತ್ತು ತಂಪು ನೀಡುತ್ತದೆ. ತೆಂಗು ಮತ್ತೊಬ್ಬರಿಗೆ ತಲೆಬಾಗಿ ಜೀತದಾಳಾಗದೆ ಎದೆಗಾರಿಕೆಯಿಂದ ಬಾಳುವುದನ್ನು ಕಲಿಸುತ್ತದೆ. ಉಪಕಾರ ಮಾಡದವನಿಗೂ ಎಳೆನೀರು ಕೊಟ್ಟು ಸೌಜನ್ಯ ತೋರುತ್ತದೆ.

ಹೀಗೆ ಒಂದೊಂದು ಮರವೂ ಮನುಷ್ಯರಿಗೆ ತೊಟ್ಟಿಲಿನಿಂದ ಚಟ್ಟದವರೆಗೂ ಜೊತೆಗಿದ್ದು ಕಲಿಸುತ್ತದೆ. ಪ್ರತಿ ಮರವೂ ಮಣ್ಣಿಗೆ ಋಣಿಯಾಗಿರುತ್ತದೆ. ಪ್ರಕೃತಿಯ ಅಂದವನ್ನು ಹೆಚ್ಚಿಸುತ್ತದೆ. ಶಾಂತಿ ಪ್ರೀತಿಗಳಲ್ಲದೆ, ಮೌನವನ್ನೂ ಕಲಿಸುತ್ತದೆ. ಅದು ಭೂಮಿಯಲ್ಲಿ ಹುದುಗಿಕೊಂಡಿದ್ದಾಗ ಕಲ್ಲಿದ್ದಲ ಕಪ್ಪಾಗಿ ಮೌನವಹಿಸಿ ಕೊನೆಗೆ ಹೊಳಪಿನ ವಜ್ರವಾಗುತ್ತದೆ. ಹೀಗೆ ಮೌನಿಯಾದ ಮರವು ಮಾತು ಆರಂಭಿಸಿ ಮನುಷ್ಯರಿಗೆ ಪ್ರಶ್ನೆ ಕೇಳುತ್ತದೆ."ಮನುಷ್ಯರೇ ನಮ್ಮನ್ನು ಬಳಸಿ ಅದೆಷ್ಟು ಶಿಲುಬೆಗಳನ್ನು ತಯಾರಿಸಿದ್ದೀರಿ? ಆದರೆ ಮತ್ತೊಬ್ಬ ಏಸುವನ್ನು ಕಾಣಲು ಇಲ್ಲಿಯವರೆಗೂ ಸಾಧ್ಯವಾಗಲಿಲ್ಲ ಏಕೆ? ಹೋಗಲಿ ಬಿಡಿ, ನಿಮ್ಮನ್ನೇ ಬಳಸಿ ಒಂದು ಶಿಲುಬೆಯನ್ನಾದರೂ ತಯಾರಿಸಲು ಸಾಧ್ಯವಾಗುವುದಾದರೆ ಪ್ರಯತ್ನಿಸಿ. ಏಕೆಂದರೆ ಶಿಲುಬೆ ಬರಿ ಚಿಹ್ನೆಯಷ್ಟೇ ಅಲ್ಲ. ಅದು ಪ್ರೀತಿ, ತ್ಯಾಗ, ಕರುಣೆ ಮತ್ತು ಮನುಷ್ಯತ್ವದ ಸಂಕೇತ. ತಿನ್ನಲು ಹಣ್ಣು ಹಂಪಲು, ತಂಪಿಗೆ ನೆರಳು, ದೇಹಕ್ಕೆ ಉಡುಪು, ಆರೋಗ್ಯಕ್ಕೆ ಔಷಧ, ಆಸರೆಗೆ ಗೂಡು, ಭದ್ರತೆಗೆ ಬಾಗಿಲು, ಸುರಕ್ಷತೆಗೆ ಬೇಲಿ, ಸೌಂದರ್ಯಕ್ಕೆ ಮುಲಾಮು, ಒಗ್ಗರಣೆಗೆ ಎಣ್ಣೆ, ಬರೆಯಲು ಕಾಗದ-ಪೆನ್ಸಿಲ್, ಹುಟ್ಟಿದಾಗ ತೊಟ್ಟಿಲು, ನಡೆದಾಡಲು ಕಲಿಕೆಗಾಡಿ, ವಿಶ್ರಮಿಸಲು ಮಂಚ, ಓಡಾಡಲು ಪಾದರಕ್ಷೆ, ರಬ್ಬರ್, ಕಡೆಗೆ ಸುಡಲು ಚಿತೆಯಾಗಿಯೂ ನಾವು ಉಪಯೋಗಕ್ಕೆ ಬರುತ್ತೇವೆ. ನೀವು?"

ಮರದ ಈ ಪ್ರಶ್ನೆಗೆ ಉತ್ತರಿಸಲು ಮನುಷ್ಯರಿಗೆ ಕಷ್ಟವಾಗುತ್ತದೆ. ಮನುಷ್ಯರಿಗೆ ಮೊದಲ ಗೆಳೆಯನೆಂದರೆ ಮರವೆ. ಆದರೆ ಅವರು ಮರಗಳ ಮೊದಲ ವೈರಿಯಾಗಿ ತಮ್ಮೆಲ್ಲ ಆಯುಧಗಳನ್ನು ಅದರ ಮೇಲೆ ಪ್ರಯೋಗಿಸುತ್ತಾರೆ. ಹಿಂದೆ ಮರದಡಿಯಲ್ಲಿ ಕುಳಿತು ಪಾಠ ಕಲಿತ ಅನೇಕರು ದೇಶವನ್ನು ಕಟ್ಟಿದರು. ಇಂದು ಕಟ್ಟಡಗಳಲ್ಲಿ ಪಾಠ ಕಲಿಯುತ್ತ ಹಲವರು ದೇಶವನ್ನೇ ಕೆಡವಲು ಹೊರಟಂತೆ ಕಾಣುತ್ತಿದ್ದಾರೆ. ನಾವು ಆಧುನಿಕ ಸಮಾಜ ನಿರ್ಮಾಣದ ಹಾದಿಯಲ್ಲಿ, ಅಭಿವೃದ್ಧಿಯ ಆಡಂಬರದಲ್ಲಿ, ಸಹಜತೆಯ ಬದುಕು ಮರೆತು, ಉಸಿರು ನಿಂತೇ ಹೋಯಿತು ಎಂಬ ಆತಂಕದಲ್ಲಿ ಇದ್ದಾಗ, ಎತ್ತಲಿಂದಲೋ ತಂಗಾಳಿ ಬೀಸುತ್ತ ಮರವು, ಸಾಲುಮರದ ತಿಮ್ಮಕ್ಕನನ್ನು ನೆನಪಿಸುತ್ತದೆ.

ಕೃತಿಕಾರರ ಪರಿಚಯ



೭.೮.೧೯೬೬ರಲ್ಲಿ ಹುಟ್ಟಿದ ಆರ್. ಕುಮಾರ್ ಅವರು ಶಿವಮೊಗ್ಗದವರು. ತಮಿಳು ಮಾತೃಭಾಷೆಯ ಕುಮಾರ್ ಅವರು ಕನ್ನಡ ಕಲಿತು ಬರಹಗಾರರಾದವರು. ಶ್ರೀಯುತರು ಪರಿಸರ ಹಾಗೂ ಕನ್ನಡ ಪರ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಅವರ ಕೃತಿಗಳೆಂದರೆ 'ಕನಸುಗಳಲ್ಲಿ ಬಿಕ್ಕಳಿಕೆ' (ಕವನ ಸಂಗ್ರಹ) ಹಾಗೂ 'ಅಕ್ಷರ ಸಂಭ್ರಮ' (ಅಂಕಣ ಬರಹ).

'ಮರದ ಧ್ಯಾನದಲ್ಲಿ' ಪಾಠವನ್ನು 'ಅಕ್ಷರ ಸಂಭ್ರಮ' ಕೃತಿಯಿಂದ ಆರಿಸಿಕೊಳ್ಳಲಾಗಿದೆ.

ಪದಗಳ ಅರ್ಥ

ಕೊರಡು–ಮರದ ತುಂಡು; ಚಿತೆ–ಶವವನ್ನು ಸುಡುವ ಕಟ್ಟಿಗೆರಾಶಿ; ಪತಂಗ–ದೀಪದ ಹುಳು, ಪಾತರಗಿತ್ತಿ ಚಿಟ್ಟೆ; ಬಿಳಲು–ಕೊಂಬೆಯಿಂದ ಇಳಿದ ಬೇರು; ಹುದುಗಿ–ಮರೆಯಾಗಿ.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ:

೧. ನಿತ್ಯ ಆಶ್ಚರ್ಯಸೂಚಕ ಚಿಹ್ನೆಯಂತಿರುವುದು ಯಾವುದೆಂದು ಕುಮಾರ್ ಹೇಳಿದ್ದಾರೆ?

೨. ಜನಪದರು ಯಾವ ಮರವು ನೆರಳು ನೀಡದು ಎಂದಿದ್ದಾರೆ?

೩. ಮರಗಳು ಮನುಷ್ಯನಿಗೆ ಏನನ್ನು ಕಲಿಸುತ್ತವೆ ಎಂದು ಲೇಖಕರು ಹೇಳಿದ್ದಾರೆ?

೪. 'ಮರದ ಧ್ಯಾನದಲ್ಲಿ' ಲೇಖನದಲ್ಲಿ ಹೇಳಿರುವಂತೆ ಆಲದ ಮರ ಏಕೆ ನಗುತ್ತದೆ?

೫. ಲೇಖಕರು 'ಶಿಲುಬೆ ಬರಿ ಚಿಹ್ನೆಯಷ್ಟೇ ಅಲ್ಲ' ಎಂದಿದ್ದಾರೆ ಏಕೆ?

೬. ಮರಗಳ ಮೊದಲ ವೈರಿ ಯಾರು ಎಂದು ಕುಮಾರ್ ಅವರು ತಿಳಿಸಿದ್ದಾರೆ?

೭. ಎತ್ತಲಿಂದಲೋ ಬೀಸುವ ತಂಗಾಳಿ ಲೇಖಕರಿಗೆ ಯಾರನ್ನು ನೆನಪಿಸುತ್ತದೆ?

ಆ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಮರಗಳನ್ನು ಹೀಯಾಳಿಸಲು ಬಳಕೆಯಾಗಿರುವ ಗಾದೆಗಳು ಯಾವುವು?

೨. ಮರಗಳು ಮನುಷ್ಯನಿಗೆ ಬಹೂಪಯೋಗಿ ಆಗಿವೆ ಹೇಗೆ?

೩. ತನಗೆ ಕೆಡಕು ಬಯಸುವವರಿಗೂ ಮರವು ಉಪಕಾರಿಯಾಗಿದೆ ಹೇಗೆ? ವಿವರಿಸಿರಿ.

೪. ಕುಮಾರ್‌ರವರು ಮರವು ಮನುಷ್ಯರನ್ನು ಏನೆಂದು ಪ್ರಶ್ನಿಸುತ್ತಿದೆ ಎಂದಿದ್ದಾರೆ?

೫. 'ಮರಗಳು ಮನುಷ್ಯನಿಗೆ ಆದರ್ಶವಾಗಿವೆ'–ಈ ಹೇಳಿಕೆಯನ್ನು ಸಮರ್ಥಿಸಿರಿ.

ಭಾಷಾಭ್ಯಾಸ

ಅ) ಕೆಲವು ಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸಲಾಗಿದೆ. ಅವೇ ಪದಗಳನ್ನು ನೀವು ಬಳಸಿ ಅರ್ಥಪೂರ್ಣವಾದ ಸ್ವಂತ ವಾಕ್ಯಗಳನ್ನು ರಚಿಸಿರಿ.

೧. ಅಪ್ಪಿಕೊಳ್ಳು: ಮಗುವನ್ನು ತಾಯಿ ಪ್ರೀತಿಯಿಂದ ಅಪ್ಪಿಕೊಳ್ಳುವಳು.

೨. ಚಿತ್ತಾರ: ಮಳೆಗಾಲದ ಸಮಯದಲ್ಲಿ ಆಕಾಶದಲ್ಲಿ ಸುಂದರ ಕಾಮನಬಿಲ್ಲಿನ ಚಿತ್ತಾರ ಮೂಡಿತು.

೩. ತೋರಣ: ಶುಭ ಸಮಾರಂಭಗಳಲ್ಲಿ ಮನೆಯ ಮುಂದೆ ತೋರಣ ಕಟ್ಟುತ್ತಾರೆ.

೪. ಸಹನೆ: ಜನರ ಸಮಸ್ಯೆಗಳನ್ನು ಅಧಿಕಾರಿಗಳು ಸಹನೆಯಿಂದ ಆಲಿಸಿದರು.

೫. ತ್ಯಾಗ: ಮಕ್ಕಳ ಏಳ್ಗೆಗಾಗಿಯೇ ತಾಯಿ ತನ್ನ ಸಂತೋಷವನ್ನೂ ತ್ಯಾಗ ಮಾಡುವಳು.

ಆ) ಕೆಳಗಿನ ವಾಕ್ಯಗಳಲ್ಲಿ ಪದಗಳ ಸ್ಥಾನ ಬದಲಾಗಿದೆ. ಅದನ್ನು ಸರಿಪಡಿಸಿ ಅರ್ಥಪೂರ್ಣವಾಗಿ ಜೋಡಿಸಿ ಬರೆಯಿರಿ.

ಉದಾ: ಮಗಳೆ ನೆರಳಲ್ಲ ಮರವು ಜಾಲೀಯ

ಜಾಲೀಯ ಮರವು ನೆರಳಲ್ಲ ಮಗಳೆ.

೧. ನೆನೆನೆನೆದಂತೆ ಹೃದಯ ಹಾಗೆಲ್ಲ ಮರಗಳನ್ನೇ ತಣಿಯುತ್ತದೆ.

೨. ಹಣ್ಣನ್ನು ಕಲ್ಲಿನಿಂದ ಹೊಡೆದವನಿಗೆ ಮರ ಕೊಡುತ್ತದೆ.

೩. ಮಕ್ಕಳನ್ನು ವೃದ್ಧಾಶ್ರಮಕ್ಕೆ ಬಿಟ್ಟು ಮರ ಹೆತ್ತವರನ್ನು ಕಂಡು ಬರುವ ಬಿಳಲು ಜಗದಗಲ ಬಿಟ್ಟು ಹರಡಿನಿಂದ ನಗುತ್ತದೆ ಆಲದ

೪. ಗೆಳೆಯನೆಂದರೆ ಮರವೆ ಮೊದಲ ಮನುಷ್ಯನಿಗೆ.

ಇ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಉದಾ: ಒಂದೊಂದು = ಒಂದು + ಒಂದು

೧. ಇದನ್ನರಿಯದ =

೨. ಕೊರಡಾಗಿದೆ =

೩. ನೆರಳಲ್ಲ =

೪. ಆಲಯವಾಗಿದೆ =

೫. ಸಾಧ್ಯವಾಗಲಿಲ್ಲ =

ಈ) ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ.

ಉದಾ: ಸಹನೆ + ಅನ್ನು = ಸಹನೆಯನ್ನು

೧. ಮೀಸಲು + ಇಟ್ಟಂತೆ =

೨. ತನ್ನ + ಇಂದ =

೩. ಬದಿಗೆ + ಒತ್ತಿ =

೪. ಮತ್ತು + ಒಬ್ಬ =

೫. ಸಾಲು + ಕಟ್ಟಿ =

ಉ) ಕೆಳಗಿನ ಪದಗಳನ್ನು ಒಮ್ಮೆ ಓದಿಕೊಂಡು ಬರೆಯಿರಿ.

ಚಿತ್ತಾರ, ನೆನೆನೆನೆದಂತೆ, ವೃದ್ಧಾಶ್ರಮ, ಹುದುಗಿಕೊಂಡಿದ್ದಾಗ, ಸವಾಲೊಡ್ಡು.

ಊ) ಕೆಳಗೆ ಕೊಟ್ಟಿರುವ ಪದಗಳಿಗೆ ನಿಘಂಟು ನೋಡಿ ಸಮಾನಾರ್ಥಕ ಪದಗಳನ್ನು ಬರೆಯಿರಿ.

ತಣಿ, ಋಣಿ, ಕುರುಹು, ರಕ್ಷೆ, ಪಾತರಗಿತ್ತಿ.

ಋ) ಕೆಳಗೆ ಕೊಟ್ಟಿರುವ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಸ್ಥಿರ, ಕಹಿ, ಉತ್ಸಾಹ, ಶಾಂತಿ, ಕರುಣೆ.

ಭಾಷಾ ಚಟುವಟಿಕೆ

ಅ) ಕೆಳಗಿನ ಪದ್ಯವನ್ನು ತರಗತಿಯಲ್ಲಿ ಒಟ್ಟಾಗಿ ಗಟ್ಟಿಯಾಗಿ ಓದಿರಿ, ಸಾರಾಂಶವನ್ನು ಬರೆಯಿರಿ.

ಸುತ್ತಮುತ್ತ
ಬೆಳೆಯಬೇಕು
ತಂಪು ಹಸಿರು ಕಾನನ
ನೋಡಿ ಖುಷಿಯ
ಪಡೆಯ ಬೇಕು
ಬಿಡದೆ ನಮ್ಮ ಮೈಮನ.

ಮರವು ಇರದೆ
ಮಳೆಯು ಬರದು
ಎಂಬ ಮಾತು ಮರೆಯದೆ
ನೆಟ್ಟಗಿಡವ
ಉಳಿಸಬೇಕು
ಇದ್ದ ಮರವ ಕಡಿಯದೆ.


ತಂಪುಗಾಳಿ
ಬೀಸುತಿರಲು
ಒಳಿತು ನಮ್ಮ ಪರಿಸರ
ತಿಳಿದು ನಿತ್ಯ
ಉಳಿಸಿ ನಿಮ್ಮ
ಸುತ್ತಮುತ್ತ ಗಿಡಮರ.

ಅರಿತು ನಾವು
ಬಿಡದೆ ಬೆಳೆಸಿ
ಬರಲು ಒಳಿತು ಕಾಡು
ಇಂಥ ಗುಣವು
ಇರಲು ಕೆಡದು
ನಿತ್ಯ ನಮ್ಮ ನಾಡು.

– ಡಾ॥ ಕೆ. ಎಂ. ಶೆಟ್ಟಿ. ಬಳ್ಳಮಂಜ

ಆ) ನೀವು ನೋಡಿರುವ ಮರಗಳ ಹೆಸರನ್ನು ಪಟ್ಟಿಮಾಡಿರಿ ಹಾಗೂ ಚಿತ್ರಗಳನ್ನು ಸಂಗ್ರಹಿಸಿರಿ.

ಇ) ಕೆಳಗಿನ ಚಿತ್ರದಲ್ಲಿರುವ ಮರಗಳನ್ನು ಹೆಸರಿಸಿ. ಆ ಮರಗಳನ್ನು ಕುರಿತು ನಾಲ್ಕು ಸಾಲುಗಳನ್ನು ಬರೆಯಿರಿ.



ಈ) ಕೆಳಗೆ ನಾಲ್ಕು ಅಕ್ಷರಗಳನ್ನು ಕೊಡಲಾಗಿದೆ. ಆ ಅಕ್ಷರಗಳಿಂದ ಪ್ರಾರಂಭವಾಗುವ ಪದಗಳನ್ನು ಬರೆಯಿರಿ.

ಉದಾ: ಗ: ಗರಿ, ಗಗನ, ಗರಗಸ, ಗಣಿ, ಗಮನ.

ಗಾ, ಗಿ, ಗು, ಗೂ.

ವ್ಯಾಕರಣ

ಭಾಗ 'ಅ'

ಭಾಷೆ ಒಂದು ಸಂವಹನ ಮಾಧ್ಯಮ. ಅದು ಮಾತು ಮತ್ತು ಬರಹ ರೂಪದಲ್ಲಿ ಅಭಿವ್ಯಕ್ತವಾಗುತ್ತದೆ. ಮಾತು ಅಮೂರ್ತ ರೂಪ, ಬರಹ ಮೂರ್ತರೂಪ. ಇದನ್ನು ಶ್ರವಣ, ಚಾಕ್ಷುಷ ಎಂದು ಪರಿಗಣಿಸಲಾಗಿದೆ. ಮಾತಿನ ಸಾಂಕೇತಿಕ ರೂಪವೇ ಬರಹ.

ಭಾಷೆ ನಮ್ಮ ಸುತ್ತಮುತ್ತಲಿನವರೊಡನೆ ವ್ಯವಹರಿಸುವುದಕ್ಕೆ ಮತ್ತು ವಿಚಾರ ವಿನಿಮಯ ಮಾಡುವುದಕ್ಕೆ ಒಂದು ಅಮೂಲ್ಯ ಸಾಧನ. ಪ್ರಪಂಚದಲ್ಲಿ ಸಾವಿರಾರು ಭಾಷೆಗಳು ಇವೆ ಎಂದು ತಿಳಿದು ಬಂದಿದೆ. ಇವುಗಳಲ್ಲಿ ಕನ್ನಡವೂ ಒಂದು ಪ್ರಮುಖ ಭಾಷೆಯಾಗಿದ್ದು, ಕರ್ನಾಟಕದ ಮಾತೃಭಾಷೆಯಾಗಿದೆ. ಕರ್ನಾಟಕ ರಾಜ್ಯದ ಜನರ ವ್ಯವಹಾರ ಭಾಷೆಯೂ ಆಗಿದೆ.

ನಾವು ಬರಹದ ಮೂಲಕ ಕನ್ನಡ ಭಾಷೆಯನ್ನು ತಿಳಿಯಬೇಕಾದರೆ. ಲಿಪಿಯ ರೂಪದಲ್ಲಿರುವ ವರ್ಣಮಾಲೆಯನ್ನು ತಿಳಿಯಬೇಕಾಗುತ್ತದೆ.

ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳು

ಕನ್ನಡ ವರ್ಣಮಾಲೆಯಲ್ಲಿ ಒಟ್ಟು ೪೯ ಅಕ್ಷರಗಳಿವೆ. ಅವು ಸ್ವರಗಳು, ಯೋಗವಾಹಗಳು, ವ್ಯಂಜನಗಳು.

ಕನ್ನಡ ವರ್ಣಮಾಲೆ

ಸ್ವರಗಳು	ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ	೧೩
ಯೋಗವಾಹಗಳು	(ಅ)ಂ (ಅ)ಃ	೨
ವರ್ಗೀಯ ವ್ಯಂಜನಗಳು	ಕ್ ಖ್ ಗ್ ಘ್ ಙ್ ಚ್ ಛ್ ಜ್ ಝ್ ಞ್ ಟ್ ಠ್ ಡ್ ಢ್ ಣ್ ತ್ ಥ್ ದ್ ಧ್ ನ್ ಪ್ ಫ್ ಬ್ ಭ್ ಮ್	೨೫
ಅವರ್ಗೀಯ ವ್ಯಂಜನಗಳು	ಯ್ ರ್ ಲ್ ವ್ ಶ್ ಷ್ ಸ್ ಹ್ ಳ್	೯
	ವರ್ಣಮಾಲೆಯ ಒಟ್ಟು ಅಕ್ಷರಗಳು	**49**

ಸ್ವರಗಳ ವಿಚಾರ

ಒಂದು ಮಾತ್ರೆಯ ಕಾಲದಲ್ಲಿ ಉಚ್ಚರಿಸುವ 'ಅ, ಇ, ಉ, ಋ, ಎ, ಒ' –ಈ ಆರು ಸ್ವರಗಳಿಗೆ **ಹ್ರಸ್ವಸ್ವರ**ಗಳೆನ್ನುವರು.

ಎರಡು ಮಾತ್ರೆಗಳ ಕಾಲದಲ್ಲಿ ಉಚ್ಚರಿಸುವ 'ಆ, ಈ, ಊ, ಏ, ಐ, ಓ, ಔ'– ಈ ಏಳು ಸ್ವರಗಳಿಗೆ **ದೀರ್ಘಸ್ವರ**ಗಳೆನ್ನುವರು.

ಎರಡು ಮಾತ್ರೆಗಳ ಕಾಲಕ್ಕಿಂತಲೂ ಹೆಚ್ಚುಕಾಲ ಎಳೆದು ಉಚ್ಚರಿಸಲ್ಪಡುವ ಸ್ವರಗಳೆಲ್ಲ **ಪ್ಲುತ ಸ್ವರ**ಗಳೆನಿಸುವುವು. ಸಂಬೋಧನೆ, ನಿರ್ದೇಶನ, ತೀವ್ರ ಭಾವನೆಗಳನ್ನು ವ್ಯಕ್ತಪಡಿಸುವಾಗ ಹಾಗೂ ಸಂಗೀತದದಲ್ಲಿ ಸ್ವರಗಳನ್ನು ಎಳೆದು ಹಾಡುವಾಗ ಪ್ಲುತ ಸ್ವರಗಳನ್ನು ಬಳಸುತ್ತಾರೆ. ಉದಾಹರಣೆಗೆ ನೀನೇs ಬಾs ಅಯ್ಯೋs ಓಹೋs ಸಾs ಮುಂತಾದವು.

ಯೋಗವಾಹಗಳ ವಿಚಾರ

'ಯೋಗವಾಹ' ಎಂದರೆ ಕೂಡಿಹೋಗು ಎಂದರ್ಥ. ಯಾವುದಾದರೊಂದು ಅಕ್ಷರದ ಸಂಬಂಧದಿಂದ ಮಾತ್ರವೇ ಉಚ್ಚರಿಸಲಾಗುವ ಅನುಸ್ವಾರ–(ಂ) ಮತ್ತು ವಿಸರ್ಗ–(ಃ)ಗಳೇ ಯೋಗವಾಹಗಳು.

ಉದಾಹರಣೆ: ಅನುಸ್ವಾರ–(ಂ) ಚಂದ್ರ, ಮಂತ್ರ ವಿಸರ್ಗ–(ಃ) ನಮಃ, ದುಃಖ.

ಅನುಸ್ವಾರ ವಿಸರ್ಗಗಳೆರಡೂ ಇರುವ ಪದಕ್ಕೆ ಉದಾಹರಣೆ: ತೇಜಃಪುಂಜ, ಅಂತಃಕರಣ.

ವ್ಯಂಜನಗಳ ವಿಚಾರ

ವರ್ಗೀಯ ವ್ಯಂಜನ:

'ಕ್'ಕಾರದಿಂದ 'ಳ್'ಕಾರದವರೆಗಿನ 34 ವ್ಯಂಜನಗಳಲ್ಲಿ ಮೊದಲಿನ 25 ವ್ಯಂಜನಗಳನ್ನು ('ಕ್'ಕಾರದಿಂದ ಮ್‌ಕಾರದವರೆಗೆ) ಐದೈದರ ಐದು ವರ್ಗಗಳನ್ನಾಗಿ ಬರೆಯುತ್ತೇವೆ. ಆದ್ದರಿಂದ ಇವನ್ನು 'ವರ್ಗೀಯ ವ್ಯಂಜನಗಳು' ಎಂದು ಕರೆಯುತ್ತೇವೆ. ಈ ವರ್ಗೀಯ ವ್ಯಂಜನಗಳಲ್ಲಿ 'ಅಲ್ಪಪ್ರಾಣ', 'ಮಹಾಪ್ರಾಣ' ಮತ್ತು 'ಅನುನಾಸಿಕ' ಎಂಬ ಮೂರು ರೀತಿಯ ಅಕ್ಷರಗಳಿವೆ.

ವರ್ಗಗಳು	೧ ನೆಯ ವ್ಯಂಜನಗಳು	೨ ನೆಯ ವ್ಯಂಜನಗಳು	೩ ನೆಯ ವ್ಯಂಜನಗಳು	೪ ನೆಯ ವ್ಯಂಜನಗಳು	೫ ನೆಯ ವ್ಯಂಜನಗಳು	ಒಟ್ಟು ವ್ಯಂಜನಗಳು
	ಅಲ್ಪಪ್ರಾಣ	**ಮಹಾಪ್ರಾಣ**	**ಅಲ್ಪಪ್ರಾಣ**	**ಮಹಾಪ್ರಾಣ**	**ಅನುನಾಸಿಕ**	
'ಕ' ವರ್ಗ	ಕ್	ಖ್	ಗ್	ಘ್	ಙ್	೫
'ಚ' ವರ್ಗ	ಚ್	ಛ್	ಜ್	ಝ್	ಞ್	೫
'ಟ' ವರ್ಗ	ಟ್	ಠ್	ಡ್	ಢ್	ಣ್	೫
'ತ' ವರ್ಗ	ತ್	ಥ್	ದ್	ಧ್	ನ್	೫
'ಪ' ವರ್ಗ	ಪ್	ಫ್	ಬ್	ಭ್	ಮ್	೫
ಒಟ್ಟು	೫	೫	೫	೫	೫	೨೫

ಅಲ್ಪಪ್ರಾಣ :– ಕಡಿಮೆ ಉಸಿರಿನ ಸಹಾಯದಿಂದ ಉಚ್ಚರಿಸುವ ಪ್ರತಿಯೊಂದು ವರ್ಗದ ೧ ಮತ್ತು ೩ ನೆಯ ವ್ಯಂಜನಗಳೇ ಅಲ್ಪಪ್ರಾಣಗಳು.

ಮಹಾಪ್ರಾಣ:– ಹೆಚ್ಚು ಉಸಿರಿನಿಂದ ಉಚ್ಚರಿಸುವ ಪ್ರತಿಯೊಂದು ವರ್ಗದ ೨ ಮತ್ತು ೪ನೆಯ ವ್ಯಂಜನಗಳು ಮಹಾಪ್ರಾಣಗಳು.

ಅನುನಾಸಿಕ :– ಮೂಗಿನ ಸಹಾಯದಿಂದ ಉಚ್ಚರಿಸುವ ಪ್ರತಿಯೊಂದು ವರ್ಗದ ೫ನೆಯ ವ್ಯಂಜನವು ಅನುನಾಸಿಕ ಎನಿಸುವುದು.

ಅಲ್ಪ=ಕಡಿಮೆ, ಮಹಾ=ಹೆಚ್ಚು, ಪ್ರಾಣ=ಉಸಿರು, ನಾಸಿಕ=ಮೂಗು.

ಅವರ್ಗೀಯ ವ್ಯಂಜನ:

'ಯ್'ಕಾರ ದಿಂದ 'ಳ್'ಕಾರದವರೆಗಿರುವ ೯ ವ್ಯಂಜನಗಳನ್ನು ಯಾವುದೇ, ರೀತಿ ವರ್ಗೀಕರಿಸಲು ಆಗುವುದಿಲ್ಲವಾದ್ದರಿಂದ ಅವುಗಳನ್ನು ಅವರ್ಗೀಯ ವ್ಯಂಜನಗಳು ಎನ್ನುವರು.

ಯ್, ರ್, ಲ್, ವ್, ಶ್, ಷ್, ಸ್, ಹ್, ಳ್ ಇವು ಒಂಬತ್ತು 'ಅವರ್ಗೀಯ' ವ್ಯಂಜನಗಳಾಗಿವೆ.

ಭಾಗ 'ಆ'

ಅ) ಕೆಳಗಿನ ಪದಗಳಲ್ಲಿನ ಅಕ್ಷರಗಳನ್ನು ಬಿಡಿಸಿ ಸ್ವರ ಮತ್ತು ವ್ಯಂಜನಗಳನ್ನು ಗುರುತಿಸಿ.

ಉದಾ: ಮರಗಳು:ಮ್+ಅ+ರ್+ಅ+ಗ್+ಅ+ಳ್+ಉ

ಸ್ವರ: ಅ, ಉ. ವ್ಯಂಜನ: ಮ್,ರ್,ಗ್,ಳ್.

ಪಕ್ಷಿ, ಹಣ್ಣು, ಕರುಣೆ.

ಆ) ಕೆಳಗಿನ ಪದಗಳಲ್ಲಿ ವರ್ಗೀಯ ಮತ್ತು ಅವರ್ಗೀಯ ವ್ಯಂಜನಗಳನ್ನು ಗುರುತಿಸಿ.

ಉದಾ: ಕುರುಹು

ವರ್ಗೀಯ = ಕ್,

ಅವರ್ಗೀಯ = ರ್ ಮತ್ತು ಹ್.

ಜಾಲಿಯ, ನವಿಲಗರಿ, ಕಾವು, ತಂಗಾಳಿ.

ಕಾಡು ಬೆಳೆಸಿ ನಾಡು ಉಳಿಸಿ

*****

೩. ಕನ್ನಡದ ಕಹಳೆ ಮೊಳಗಲಿ

– ಬಸವರಾಜ ಸಬರದ

ಪ್ರವೇಶ: ಆದಿಕವಿ ಪಂಪನಿಂದ ಹಿಡಿದು ಇಲ್ಲಿಯವರೆಗೂ ಅನೇಕಾನೇಕ ಕವಿಗಳು ನಮ್ಮ ಕನ್ನಡ ನಾಡುನುಡಿಯ ಬಗ್ಗೆ ಹೆಮ್ಮೆಯಿಂದ ಕಾವ್ಯರಚನೆ ಮಾಡಿದ್ದಾರೆ, ರಚಿಸುತ್ತಲೂ ಇದ್ದಾರೆ. ಕೆಲವು ಕವಿಗಳಿಗೆ ಈ ನಾಡು ನುಡಿ ಸಂಸ್ಕೃತಿಗಳು ಕವನ ರಚನೆಗೆ ಸ್ಫೂರ್ತಿ ನೀಡಿದ್ದರೆ, ಮತ್ತೆ ಕೆಲವು ಕವಿಗಳಿಗೆ ಇವು ಹೊಸ ಆಶಯಗಳನ್ನು, ಕನಸುಗಳನ್ನು ಮೂಡಿಸಿಕೊಳ್ಳಲು ಪ್ರೇರಣೆ ನೀಡಿವೆ. ಈ ಕವನದಲ್ಲಿ ಕನ್ನಡ ನಾಡು ನುಡಿಯ, ಸೊಬಗು, ಭಾಷಾಸೊಗಡು ಇವುಗಳನ್ನು ಕುರಿತ ಕವಿಯ ಸುಂದರ ಕನಸು, ಅಭಿಮಾನ, ಅಪೇಕ್ಷೆಗಳು ಮನೋಜ್ಞವಾಗಿ ಮೂಡಿಬಂದಿವೆ.



ಕನ್ನಡದ ನಾಡೊಳಗ ಕೋಗಿಲೆಯ ಹಾಡಿರಲಿ
ಕಲ್ಲುಮುಳ್ಳಿದ್ದರೂ ಹಾದ್ಯಾಗ । ನನ ಗೆಳೆಯ
ಕನ್ನಡದ ಕೆಚ್ಚು ತುಂಬಿರಲಿ. ॥೧॥

ಕೆಳಗಡೆ ಕಾವೇರಿ ಮೇಲೆ ಗೋದಾವರಿ
ನಡುವೆ ಹರಿದಾವ ಎಡೆದೊರಿ । ನಾಡೊಳಗ
ನಗಿಮುಖದ ಕ್ಯಾದಗಿ ಅರಳಲಿ. ॥೨॥


ಹೊರನಾಡೆ ಆಗಿರಲಿ ಗಡಿನಾಡೆ ಆಗಿರಲಿ
ಚೆಲುವ ಕನ್ನಡ ನಾಡು ನಗುತಿರಲಿ । ನನ್ನಣ್ಣ
ಬಯಲ ನಾಡಿನ ತುಂಬ ಬೆಳಕಿರಲಿ. ॥೩॥

ಮಳೆಗಾಲ ಹೋಗಿರಲಿ ಬರಗಾಲ ಬಂದಿರಲಿ
ಮಲ್ಲಾಡ ಹಸಿರೆಲ್ಲ ಒಣಗಿದರೂ । ನನತಮ್ಮ
ಕನ್ನಡದ ನಾಡೇ ನನಗಿರಲಿ. ॥೪॥

ಹೊರಗಿನವರೇ ಬರಲಿ ಒಳಗಿನವರೇ ಇರಲಿ
ಎಲ್ಲರೂ ಕನ್ನಡವ ನುಡಿಯಲಿ। ನಾಡೊಳಗ
ನಗಿನವಿಲು ಗರಿಬಿಚ್ಚಿ ಕುಣಿಯಲಿ. ॥೫॥

ನೆಲವೆಲ್ಲ ಬಿರಿಯಲಿ ಮುಗಿಲೆಲ್ಲ ಹರಿಯಲಿ
ಬೆಂಕಿಯ ಮಳೆಯೇ ಸುರಿದರೂ । ನಾಡೊಳಗ
ಕನ್ನಡದ ಕಹಳೆ ಮೊಳಗಲಿ. ॥೬॥

ಕೃತಿಕಾರರ ಪರಿಚಯ



ಬಸವರಾಜ ಸಬರದ ಅವರು ಕೊಪ್ಪಳ ಜಿಲ್ಲೆಯ ಕುಕನೂರಿನಲ್ಲಿ ೧೯೫೪ರಲ್ಲಿ ಹುಟ್ಟಿದರು. ಇವರು ಕವಿ, ಚಿಂತಕ, ನಾಟಕಕಾರ ಹಾಗೂ ಸಾಮಾಜಿಕ ಹೋರಾಟಗಾರರಾಗಿ ಪ್ರಸಿದ್ಧರು. ಇವರು 'ನನ್ನವರ ಹಾಡು', 'ಹೋರಾಟ', 'ನೂರುಹನಿಗಳು', 'ಬೆಳದಿಂಗಳು ಬಿಸಿಲಾತು', 'ನರಬಲಿ', 'ಬೆಳ್ಳಕ್ಕಿಸಾಲು', 'ಹೊಸದಿಕ್ಕು', 'ವಿಚಾರ ಸಂಪದ', ಮುಂತಾದ ಕವನ ಸಂಕಲನಗಳನ್ನು, ನಾಟಕಗಳು ಹಾಗೂ ಬೀದಿನಾಟಕಗಳನ್ನು ರಚಿಸಿದ್ದಾರೆ. ಇವರಿಗೆ 'ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಯನ್ನೊಳಗೊಂಡಂತೆ ಹಲವಾರು ಪ್ರಶಸ್ತಿಗಳು ದೊರಕಿವೆ.

'ಕನ್ನಡದ ಕಹಳೆ' ಮೊಳಗಲಿ ಕವನವನ್ನು ಬಸವರಾಜ ಸಬರದ ಅವರ ***'ಸಮಗ್ರ ಕಾವ್ಯ'****ದಿಂದ ಆರಿಸಿಕೊಳ್ಳಲಾಗಿದೆ.*

ಪದಗಳ ಅರ್ಥ:

ಎಡೆದೊರಿ–ಎರಡು ತೊರೆಗಳ ನಡುವಿನ ರಾಯಚೂರು ಪ್ರದೇಶ;
ಕಹಳೆ – ಒಂದು ವಾದ್ಯ;
ಕೆಚ್ಚು – ಧೈರ್ಯ, ಸಾಹಸ;
ಕ್ಯಾದಗಿ – ಕೇದಗೆ, ತಾಳೆಹೂವು;
ನಗಿಮುಖದ – ನಗೆಮುಖದ;
ನುಡಿಯಲಿ – ಮಾತನಾಡಲಿ;
ಬರಗಾಲ – ಕ್ಷಾಮ; ಮಳೆ ಬರದೆ ಬೆಳೆಗಳು ಬೆಳೆಯದ ಕಾಲ;
ಹಾದ್ಯಾಗ – ಹಾದಿಯಲ್ಲಿ, ದಾರಿಯಲ್ಲಿ.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಕನ್ನಡನಾಡಿನಲ್ಲಿ ಯಾವ ಹಾಡಿರಲೆಂದು ಕವಿ ಸಬರದ ಅವರು ಬಯಸುತ್ತಾರೆ?

೨. ಬಯಲನಾಡಿನ ತುಂಬ ಏನಿರಬೇಕೆಂದು ಬಸವರಾಜ ಸಬರದ ಅವರು ಬಯಸಿದ್ದಾರೆ?

೩. ಬಸವರಾಜ ಸಬರದ ಅವರು ಕನ್ನಡನಾಡಿನಲ್ಲಿ ಹೇಗೆ ನವಿಲು ಕುಣಿಯಲಿ ಎಂದಿದ್ದಾರೆ?

೪. 'ಕನ್ನಡದ ಕಹಳೆ ಮೊಳಗಲಿ' ಪದ್ಯದಲ್ಲಿ ಕವಿಯು ಹೆಸರಿಸಿರುವ ನದಿಗಳಾವುವು?

ಆ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಕನ್ನಡನಾಡಿನಲ್ಲಿ ಕನ್ನಡದ ಕೆಚ್ಚು ತುಂಬಿರಲಿ ಎಂಬ ಹಂಬಲವು 'ಕನ್ನಡದ ಕಹಳೆ ಮೊಳಗಲಿ' ಪದ್ಯದಲ್ಲಿ ಹೇಗೆ ವ್ಯಕ್ತವಾಗಿದೆ?

೨. 'ಕನ್ನಡ ನಾಡೇ ನನಗಿರಲಿ' ಎಂಬ ಅಪೇಕ್ಷೆ ಕವಿ ಸಬರದರವರ ಕವನದಲ್ಲಿ ಹೇಗೆ ಮೂಡಿಬಂದಿದೆ?

ಇ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಐದು ಆರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಕನ್ನಡದ ಕಹಳೆ ಎಂತಹ ಸಂದರ್ಭದಲ್ಲೂ ಮೊಳಗುತ್ತಿರಬೇಕೆಂಬ ಕವಿಯ ಹಂಬಲವು 'ಕನ್ನಡದ ಕಹಳೆ ಮೊಳಗಲಿ' ಕವನದಲ್ಲಿ ಹೇಗೆ ವ್ಯಕ್ತವಾಗಿದೆ?

ಭಾಷಾಭ್ಯಾಸ

ಅ) ಕೆಳಗಿನ ಪದಗಳ ಗ್ರಾಂಥಿಕ ರೂಪವನ್ನು ಬರೆಯಿರಿ.

ನಾಡೊಳಗ, ಹಾದ್ಯಾಗ, ಹರಿದಾವ, ಕ್ಯಾದಗಿ, ಮಲ್ಲಾಡ, ನನತಮ್ಮ.

ಆ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಹಾಡಿರಲಿ, ತುಂಬಿರಲಿ, ನನ್ನಣ್ಣ, ಮಳೆಗಾಲ, ಬರಗಾಲ, ಹಸಿರೆಲ್ಲ, ನೆಲವೆಲ್ಲ.

ಇ) ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ.

ಮುಗಿಲು+ಎಲ್ಲ, ಆಗಿ+ಇರಲಿ, ಹೋಗಿ+ಇರಲಿ, ನಾಡು+ಒಳಗೆ.

ಈ) ಕನ್ನಡದ ಕಹಳೆ ಪದ್ಯದಲ್ಲಿ ಬಳಸಿರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.

ಉ) ಕನ್ನಡದ ಕಹಳೆ ಪದ್ಯದಲ್ಲಿ ಬಂದಿರುವ ಅಲಂಕಾರ ವಾಕ್ಯಗಳನ್ನು ಗುರುತಿಸಿ ಬರೆಯಿರಿ.

ಭಾಷಾ ಚಟುವಟಿಕೆ

ಅ) 'ಕನ್ನಡದ ಕಹಳೆ ಮೊಳಗಲಿ' ಪದ್ಯವನ್ನು ಕಂಠಪಾಠ ಮಾಡಿರಿ.

ಆ) ನಿಮ್ಮ ಅಪೇಕ್ಷೆಯ ಕನ್ನಡನಾಡು ಹೇಗಿರಬೇಕೆಂದು ತರಗತಿಯಲ್ಲಿ ಚರ್ಚಿಸಿ, ಐದಾರು ವಾಕ್ಯಗಳನ್ನು ಬರೆಯಿರಿ.

ಇ) ಕನ್ನಡ ನಾಡು ನುಡಿಯನ್ನು ಬಿಂಬಿಸುವ ಕವಿತೆಗಳನ್ನು ಸಂಗ್ರಹಿಸಿ ಹಾಡಿರಿ.

ಈ) ಚೆನ್ನವೀರ ಕಣವಿಯವರ ಈ ಕೆಳಗಿನ ಕವನವನ್ನು ತರಗತಿಯಲ್ಲಿ ಸಾಮೂಹಿಕವಾಗಿ ಹಾಡಿರಿ.


"ಹೆಸರಾಯಿತು ಕರ್ನಾಟಕ

ಉಸಿರಾಗಲಿ ಕನ್ನಡ


ಹಸಿಗೋಡೆಯ ಹರಳಿನಂತೆ

ಹುಸಿಹೋಗದ ಕನ್ನಡ."

ಉ) ಕನ್ನಡದಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದ ಎಂಟು ಕವಿ, ಲೇಖಕರ ಚಿತ್ರಗಳನ್ನು ಕೆಳಗೆ ಕೊಡಲಾಗಿದೆ. ಅವರುಗಳನ್ನು ಗುರುತಿಸಿ. ಅವರ ಹೆಸರುಗಳನ್ನು ಅವರ ಚಿತ್ರದ ಕೆಳಗೆ ಬರೆಯಿರಿ.








....







....





....

ಛಂದಸ್ಸು

ಪ್ರಾಸ: ಒಂದು ನಿರ್ದಿಷ್ಟ ವ್ಯಂಜನವು ಪದ್ಯದ ಪ್ರತಿ ಸಾಲಿನ ಆದಿ, ಮಧ್ಯ, ಅಥವಾ ಅಂತ್ಯದಲ್ಲಿ ನಿಯತವಾಗಿ ಬರುವುದೇ ಪ್ರಾಸ.

ಆದಿ ಪ್ರಾಸ: ಕಾವ್ಯದ ಪ್ರತಿಸಾಲಿನ ಒಂದು ಮತ್ತು ಎರಡನೆಯ ಸ್ವರಗಳ ನಡುವೆ ಬರುವ ಪ್ರಾಸ ಆದಿ ಪ್ರಾಸ.

ಮಧ್ಯ ಪ್ರಾಸ: ಪ್ರತಿಸಾಲಿನ ಮಧ್ಯದಲ್ಲಿ ಬರುವ ಪ್ರಾಸವು ಮಧ್ಯ ಪ್ರಾಸ.

ಅಂತ್ಯ ಪ್ರಾಸ: ಪ್ರತಿಸಾಲಿನ ಅಂತ್ಯದಲ್ಲಿ ಬರುವ ಪ್ರಾಸವೇ ಅಂತ್ಯ ಪ್ರಾಸ.

ಕನ್ನಡವೇ ಸತ್ಯ ಕನ್ನಡವೇ ನಿತ್ಯ

*****

೪. ಭಲೇ ಬಿಂದು

– ಬಿ. ಬೋರೇಗೌಡ

ಪ್ರವೇಶ: "ತಾಯಿ ಮತ್ತು ತಾಯಿನಾಡು ಇವು ಸ್ವರ್ಗಕ್ಕಿಂತಲೂ ಮಿಗಿಲು" ಎಂಬ ಮಾತಿದೆ. ಆದುದರಿಂದಲೇ ಅವೆರಡನ್ನು ಉಳಿಸಿಕೊಳ್ಳಲು ಎಂತಹ ಕಷ್ಟಬಂದರೂ ಲೆಕ್ಕಿಸದೆ ಹೋರಾಡುವುದು ನಮಗೆ ತಿಳಿದಿದೆ. ತಾಯಿ ಮತ್ತು ತಾಯಿನಾಡಿಗಾಗಿನ ಈ ಹೋರಾಟ ವಯಸ್ಕರಿಗೆ ಮಾತ್ರ ಸೀಮಿತವಲ್ಲ. ಮಕ್ಕಳೂ ಈ ದಿಸೆಯಲ್ಲಿ ವಿಶೇಷ ಸಾಹಸ ಪ್ರದರ್ಶಿಸಿರುವ ಅನೇಕ ಉದಾಹರಣೆಗಳು ಇವೆ. ಭಾರತ ಸರ್ಕಾರ ಅಂತಹ ಮಕ್ಕಳನ್ನು ಪುರಸ್ಕರಿಸಿ ಗೌರವಿಸುತ್ತದೆ. ಈ ರೀತಿ ಅನೇಕ ಭಿನ್ನ ಸಂದರ್ಭಗಳಲ್ಲಿ ಸಾಹಸ ಮೆರೆದ ಅನೇಕ ಮಕ್ಕಳನ್ನು ನಾವಿಂದು ಕಾಣುತ್ತೇವೆ. ಅಂತಹವರ ಸಾಲಿನಲ್ಲಿ ತನ್ನ ವಿಶೇಷ ಧೈರ್ಯ ಮತ್ತು ಮಾತೃಪ್ರೀತಿಯನ್ನು ಮೆರೆದ ಬಿಂದು ಎಂಬ ಬಾಲಕಿಯ ಸಾಹಸದ ವರ್ಣನೆಯೇ ಈ ಗದ್ಯಭಾಗ.

ಕೇರಳ ಪಶ್ಚಿಮ ಕರಾವಳಿಯಲ್ಲಿರುವ ನಮ್ಮ ನೆರೆಯ ರಾಜ್ಯ. ಈ ರಾಜ್ಯದ ತ್ರಿಚೂರು ಜಿಲ್ಲೆಯ ಹಳ್ಳಿಯ ಬಾಲಕಿ ಬಿಂದು. ಈಕೆ ನಡಕಲ್‌ಚೆರಿಯಲ್ಲಿರುವ ಪ್ರೌಢಶಾಲೆಯ ವಿದ್ಯಾರ್ಥಿನಿಯಾಗಿದ್ದಳು. ಇವಳ ತಂದೆಯ ಹೆಸರು ಅಯ್ಯಪ್ಪನ್. ತಾಯಿ ದಾಕ್ಷಾಯಿಣಿ. ಇವರ ಮನೆಯವರು ಒಂದು ಹಸುವನ್ನು ಸಾಕಿದ್ದರು.

ಒಂದು ದಿನ ಮಧ್ಯಾಹ್ನ ಬಿಂದುವಿನ ತಾಯಿ ತನ್ನ ಅಕ್ಕರೆಯ ಹಸುವನ್ನು ಹಿಡಿದು ಮನೆಯ ಹಿಂದಿನ ಮೈದಾನದಲ್ಲಿ ಮೇಯಿಸಲು ನಿಂತರು. ಬೆಳೆದ ಹುಲ್ಲನ್ನು ಮೇಯುತ್ತಾ ಹಸು ಮುಂದೆ ಮುಂದೆ ಹೋದರೆ ಅದರ ಹಗ್ಗ ಹಿಡಿದ ಅವರು ಹಿಂದೆ ಹಿಂದೆ ಹೋಗುತ್ತಿದ್ದರು. ಸ್ವಲ್ಪ ಹೊತ್ತು ಮೇಯ್ದ ನಂತರ ಹಸುವಿಗೆ ತೊಣಚಿ ಹಿಂಸೆ ಕೊಡಲು ಪ್ರಾರಂಭಿಸಿತು. ಹಿಂಸೆ ತಪ್ಪಿಸಿಕೊಳ್ಳಲು ಹಸು, ಬಾಯಿ ಹಾಗೂ ಕಾಲುಗಳಿಂದ ಬಡಿದು, ಬಾಲ ಬೀಸಿ, ತೊಣಚಿಯನ್ನು ಓಡಿಸಲು ಪ್ರಾರಂಭಿಸಿತು. ಓಡಿದರೆ ಅದರಿಂದ ತಪ್ಪಿಸಿಕೊಳ್ಳಬಹುದೆಂದು ಹಸು ಓಟ ಕಿತ್ತಿತು. ಇದ್ದಕ್ಕಿದ್ದಂತೆ ಓಟ ಕಿತ್ತ ಹಸುವನ್ನು ತಡೆಯಲು ಬಿಂದುವಿನ ತಾಯಿ ತಾವು ಹಿಡಿದ ಹಗ್ಗವನ್ನು ಜಗ್ಗಿಸಿ ಎಳೆದರು. ಓಡುವಾಗ ಹಸು ತನ್ನ ಮುಂದೆ ಸಿಕ್ಕಿದ ಬಾವಿಯನ್ನು ದಾಟಿ ನೆಗೆದು ಮುಂದೆ ಓಡಿತು. ಹಸುವೇನೋ ನೆಗೆದು ಓಡಿತು. ಆದರೆ ಆ ತಾಯಿ ಅದರ ಹಿಂದೆ ಓಡುತ್ತಿದ್ದು ಬಾವಿಯನ್ನು ದಾಟಲಾರದೆ ಓಡಿಬಂದ ರಭಸದಲ್ಲಿ ಬಾವಿಯಲ್ಲಿ ಬಿದ್ದರು. ಹಗ್ಗ ಅವರ ಕೈಯಿಂದ ಕಳಚಿಕೊಂಡಿತು. ಹಗ್ಗ ಬಿಡಿಸಿಕೊಂಡು ಹಸು ಎತ್ತಲೋ ಓಡಿತು.

ಅದೇ ವೇಳೆಗೆ ಶಾಲೆಯಿಂದ ಮನೆಗೆ ಬಂದ ಬಿಂದು ಮನೆಯಲ್ಲಿ ತಾಯಿಯನ್ನು ಕಾಣದೆ ಅವರನ್ನು ಕರೆಯುತ್ತಲೇ ಹೊರಬಂದಳು. ಅವಳ ತಾಯಿ ಆಗತಾನೇ ನೀರಿನೊಳಕ್ಕೆ ಬಿದ್ದಿದ್ದರು. ನೀರಿನಲ್ಲಿ ಒಮ್ಮೆ ಮುಳುಗಿ ಏಳುವಾಗ ಆಗುವ ಶಬ್ದವನ್ನು ಬಿಂದು ಗಮನಿಸಿದಳು. ನೀರಿನ ಸದ್ದು ಬಾವಿಯೊಳಗಿನಿಂದ ಕೇಳಿಬಂದುದನ್ನು ಅವಳು ಗುರುತಿಸಿದಳು. ಬಾವಿಯಲ್ಲಿ ಬಗ್ಗಿ ನೋಡಿದಳು. ಅತ್ಯಂತ ಗಾಬರಿಗೊಂಡಳು. 'ಅಯ್ಯೋ! ಅಮ್ಮ ಬಾವಿಯಲ್ಲಿ ಬಿದ್ದಿದ್ದಾಳೆ ಬನ್ನಿ, ಕಾಪಾಡಿ' ಎಂದು ಬೊಬ್ಬೆ ಹಾಕಿದಳು. ಕೂಡಲೇ ಬಾವಿಗೆ ಧುಮುಕಿಯೇ ಬಿಟ್ಟಳು.

ಬಿಂದು ಬಾವಿಯ ನೀರಿನಲ್ಲಿ ಮುಳುಗಿ ಮೇಲೆದ್ದು ಒಂದು ಕೈಯಿಂದ ಬಾವಿಯ ದಡವನ್ನು ಹಿಡಿದಳು. ಅಷ್ಟರಲ್ಲಿ ಮತ್ತೊಮ್ಮೆ ಮೇಲೆದ್ದ ತಾಯಿಯ ಸೀರೆಯ ಸೆರಗನ್ನು ಕೈಯಿಂದ ಹಿಡಿದಳು. ದಡವನ್ನು ಹಿಡಿದ ಕೈ ಜಾರುತ್ತಿತ್ತು. ತಕ್ಷಣವೇ ಸೀರೆಯ ಸೆರಗನ್ನು ಬಾಯಲ್ಲಿ ಕಚ್ಚಿ ಮತ್ತೊಂದು ಕೈಯಿಂದ ದಡ ಹಿಡಿದಳು. ತೇವವಿದ್ದುದರಿಂದ ಗುಳಿ ಮಾಡಿ ದಡವು ಹಿಡಿತಕ್ಕೆ ಸಿಗುವಂತೆ ಬಲಗೈಯಿಂದ ಹಿಡಿದಳು. ಬಾಯಿ ಹಾಗೂ ಎಡಗೈ ಉಪಯೋಗಿಸಿ ಸೀರೆಯ ಸೆರಗನ್ನು ಎಳೆದೆಳೆದು ತಾಯಿಯ ಶರೀರ ಮೇಲೆ ಬರುವಂತೆ ಮಾಡಿದಳು.

ಕೊನೆಗೆ ಮೇಲೆದ್ದ ತಾಯಿಯ ತಲೆಗೂದಲನ್ನು ಹಿಡಿದುಬಿಟ್ಟಳು. ಮೇಲೆ ಏರಲು ಯಾರಾದರೊಬ್ಬರ ಸಹಾಯ ಬೇಕೇಬೇಕೆಂದು ಸಹಾಯಕ್ಕಾಗಿ ಮತ್ತೆ ಮತ್ತೆ 'ಕಾಪಾಡಿ ಕಾಪಾಡಿ' ಎಂದು ಬೊಬ್ಬೆ ಹಾಕಿದಳು.



ಅಷ್ಟರಲ್ಲಿ ಈಗಾಗಲೇ ಬಿಂದು ಬೊಬ್ಬೆ ಹಾಕಿದುದನ್ನು ಕೇಳಿದ ನೆರೆಮನೆಯವರು ಬಾವಿಯ ಬಳಿ ಓಡೋಡಿ ಬಂದರು. ಬಿಂದುವಿಗೆ ಧೈರ್ಯ ಹೇಳಿ ಏಣಿಯನ್ನೂ ಹಗ್ಗವನ್ನೂ ಕುರ್ಚಿಯನ್ನೂ ತಂದರು. ಆತುರಾತುರವಾಗಿ ಏಣಿಗೆ ಹಗ್ಗ ಕಟ್ಟಿ ಬಾವಿಗಿಳಿಸಿದರು. ಏಣಿಯನ್ನು ನಿಲ್ಲಲು ಆಧಾರಮಾಡಿಕೊಳ್ಳುವಂತೆ ಬಿಂದುವಿಗೆ ಗಟ್ಟಿಸ್ವರದಲ್ಲಿ ಹೇಳಿದರು. ಬಾವಿಯ ಮೇಲ್ಗಡೆ ಅಡ್ಡಲಾಗಿ ಮರವೊಂದನ್ನಿಟ್ಟು ಅದರ ಮೇಲೆ ಹಗ್ಗ ಹಾಕಿ, ಹಗ್ಗದ ತುದಿಗೆ ಕುರ್ಚಿ ಕಟ್ಟಿ ಬಾವಿಗೆ ಇಳಿಸಿದರು. ತಾವೂ ಬಾವಿಗಿಳಿದು ಕುರ್ಚಿ ಮತ್ತು ಹಗ್ಗದ ಸಹಾಯದಿಂದ ಬಿಂದು ಮತ್ತು ಅವಳ ತಾಯಿಯನ್ನು ಮೇಲೆಳೆದುಕೊಂಡರು.

ಸುಕುಮಾರಿಯಾದ ಬಿಂದು ತಾಯಿಯನ್ನು ರಕ್ಷಿಸುವ ಕಾರ್ಯದಲ್ಲಿ ಬಹಳ ಆಯಾಸಗೊಂಡಿದ್ದಳು. ಆದರೂ ತನ್ನ ತಾಯಿ ಬದುಕಿದಳಲ್ಲ ಎಂಬ ಸಂತೋಷದಲ್ಲಿ ಆಯಾಸವನ್ನು ಮರೆತು ತಾಯಿಯನ್ನು ಉಪಚರಿಸಿದಳು.

ಕೇರಳದ ಪತ್ರಿಕೆಗಳು ಬಿಂದುವಿನ ಸಾಹಸವನ್ನು ಪ್ರಕಟಿಸಿದವು. ಅನೇಕ ಸಂಸ್ಥೆಗಳವರು ಬಿಂದುವಿಗೆ ನಗದು ಬಹುಮಾನವಿತ್ತು ಸನ್ಮಾನಿಸಿದರು. ಭಾರತದ ಮಕ್ಕಳ ಕಲ್ಯಾಣ ಮಂಡಳಿಯವರು ಅವಳನ್ನು ಆ ವರ್ಷದ ಸಾಹಸಿ ಪ್ರಶಸ್ತಿಗೆ ಆಯ್ಕೆ ಮಾಡಿದರು.

ಕೃತಿಕಾರರ ಪರಿಚಯ



ಬಿ. ಬೋರೇಗೌಡ ಅವರು ಮೈಸೂರು ಜಿಲ್ಲೆಯ ಕೃಷ್ಣರಾಜನಗರದ ಬೆಣಗನಹಳ್ಳಿ ಎಂಬ ಗ್ರಾಮದಲ್ಲಿ ೧೯೨೫ರಲ್ಲಿ ಹುಟ್ಟಿದರು. ಇವರು **'ಸಾಹಸಿ ಯಾತ್ರಿಕರು'**, **'ಇಚ್ಛಾಸಂತಾನ'**, **'ಫಜೀತಿ ಪಾಪಣ್ಣ'**, (ಸಾಹಸಿ ಮಕ್ಕಳು) ಮುಂತಾಗಿ ಕನ್ನಡದಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಮೂರು ದಶಕಗಳಿಗೂ ಹೆಚ್ಚು ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

*'ಭಲೆ ಬಿಂದು' ಪಾಠವನ್ನು ಇವರ **'ಸಾಹಸಿ ಮಕ್ಕಳು'** ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ.*

ಪದಗಳ ಅರ್ಥ

ಓಟಕೀಳು – ಜೋರಾಗಿ ಓಡು;

ತೊಣಚಿ – ಪ್ರಾಣಿಗಳ ಮೈಮೇಲೆ ಕುಳಿತು ತೊಂದರೆ ಕೊಡುವ ಒಂದು ಜಾತಿಯ ನೊಣ;

ನೆರೆ – ಪಕ್ಕ;

ಸನ್ಮಾನಿಸು – ಗೌರವಿಸು.

ಅಭ್ಯಾಸ

ಅ) ಕೆಳಗೆ ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಬಿಂದುವಿನ ತಂದೆ ತಾಯಿಯರ ಹೆಸರೇನು?

೨. ಬಿಂದುವಿನ ತಾಯಿ ಮನೆಯ ಹಿಂದಿನ ಮೈದಾನಕ್ಕೆ ಹೋದುದು ಏಕೆ?

೩. ಶಾಲೆಯಿಂದ ಮನೆಗೆ ಬಂದ ಬಿಂದು ತಾಯಿಯನ್ನು ಕಾಣದೆ ಏನು ಮಾಡಿದಳು?

೪. ತಾಯಿ ಬಾವಿಗೆ ಬಿದ್ದಿರುವುದು ತಿಳಿದ ಕೂಡಲೆ ಬಿಂದು ಏನು ಮಾಡಿದಳು?

೫. ಬಿಂದು ಬೊಬ್ಬೆ ಹಾಕಿದುದು ಏಕೆ?

೬. ಬಿಂದು ಬೊಬ್ಬೆ ಹಾಕಿದುದನ್ನು ಕೇಳಿ ನೆರೆಮನೆಯವರು ಏನು ಮಾಡಿದರು?

ಆ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಬಿಂದುವಿನ ತಾಯಿ ಹಸುವನ್ನು ಮೇಯಿಸುತ್ತಿರುವಾಗ ಏನಾಯಿತು?

೨. ತಾಯಿಯು ಬಾವಿಯಲ್ಲಿ ಬಿದ್ದಿರುವುದು ಬಿಂದುವಿಗೆ ಹೇಗೆ ತಿಳಿಯಿತು?

೩. ಬಿಂದು ಏಕೆ ಆಯಾಸಗೊಂಡಳು?

೪. ತಾಯಿಯನ್ನು ಉಳಿಸಿದ ಬಿಂದುವಿನ ಸಾಹಸಕ್ಕೆ ಸಿಕ್ಕ ಪ್ರತಿಫಲವೇನು?

ಭಾಷಾಭ್ಯಾಸ

ಅ) ಕೆಳಗೆ ಕೊಟ್ಟಿರುವ ಸನ್ನಿವೇಶಗಳ ಹಿಂದೆ ಭಲೇ ಬಿಂದು ಪಾಠಕ್ಕೆ ಸಂಬಂಧಿಸಿದಂತೆ ನಡೆದಿರುವ ಘಟನೆಯನ್ನು ತರಗತಿಯಲ್ಲಿ ಚರ್ಚೆ ನಂತರ ಬರೆಯಿರಿ.

'ತೊಣಚಿ ಹಿಂಸೆ ಕೊಡಲು ಪ್ರಾರಂಭಿಸಿತು'.

'ಅಯ್ಯೋ ಅಮ್ಮ ಬಾವಿಯಲ್ಲಿ ಬಿದ್ದಿದ್ದಾಳೆ, ಬನ್ನಿ ಕಾಪಾಡಿ ಎಂದು ಬೊಬ್ಬೆ ಹಾಕಿದಳು'.

'ಕೊನೆಗೆ ಮೇಲೆದ್ದ ತಾಯಿಯ ತಲೆಗೂದಲನ್ನು ಹಿಡಿದುಬಿಟ್ಟಳು'.

'ಹಗ್ಗದ ತುದಿಗೆ ಕುರ್ಚಿ ಕಟ್ಟಿ ಬಾವಿಗಿಳಿಸಿದರು'.

ಆ) ಕೆಳಗೆ ಗೆರೆ ಎಳೆದಿರುವ ಪದಗಳ ಅರ್ಥವನ್ನು ಗಮನಿಸಿ. ಅರ್ಥಕ್ಕೆ ಅನುಗುಣವಾದ ವಾಕ್ಯಗಳನ್ನು ಗಮನಿಸಿ. ನೀವೂ ಇದೇ ಪದಗಳನ್ನು ಬಳಸಿ ಅರ್ಥಪೂರ್ಣವಾದ ವಾಕ್ಯಗಳನ್ನು ರಚಿಸಿರಿ.

ನೆರೆ: ನಮ್ಮ ನೆರೆಯವರೊಂದಿಗೆ ನಾವು ಕೂಡಿ ಬಾಳಬೇಕು.

ತೊಣಚಿ: ತೊಣಚಿ ಮೈಮೇಲೆ ಕೂತರೆ ಹಸುಗಳಿಗೆ ಕಸಿವಿಸಿಯಾಗುತ್ತದೆ.

ದಕ್ಕು: ಬಿದ್ದು ಹೋಗುತ್ತಿರುವ ತಲೆಯ ಮೇಲಿನ ಕಂತೆ ಬೀಳಬಾರದೆಂದು ರವಿ ಎಷ್ಟು ಕಷ್ಟಪಟ್ಟರೂ ಅದು ದಕ್ಕಲಿಲ್ಲ.

ರಭಸ: ಧುಮುಕುವ ಜಲಪಾತದ ರಭಸಕ್ಕೆ ಮಕ್ಕಳು ಆಶ್ಚರ್ಯಪಟ್ಟರು.

ಸದ್ದು: ಬೆಕ್ಕು ಸದ್ದು ಮಾಡದೆ ಹಾಲು ಕುಡಿದು ಹೋಗಿಬಿಡುತ್ತದೆ.

ಬೊಬ್ಬೆ ಹಾಕು: ನೆರೆ ಬಂದ ಪರಿಣಾಮ ಮನೆ ಬಿಟ್ಟುಬಂದ ಜನರು ಎರಡು ದಿನಗಳಿಂದ ತಿನ್ನಲು ಏನೂ ಇಲ್ಲದೆ ಬೊಬ್ಬೆ ಹಾಕಿದರು.

ಧುಮುಕು: ಜೋಗ ಎಂಬ ಸ್ಥಳದಲ್ಲಿ ಜಲಪಾತದ ನೀರು ಅತಿ ಎತ್ತರದಿಂದ ಧುಮುಕುತ್ತದೆ.

ನೆರೆಮನೆ: ನನಗೆ ನೆರೆಮನೆಯಲ್ಲಿ ಆಡುವ ಅನೇಕ ಗೆಳೆಯ ಗೆಳತಿಯರಿದ್ದಾರೆ.

ಅಸ್ವಸ್ಥ: ಅಸ್ವಸ್ಥರಾದವರನ್ನು ನಗುಮುಖದಿಂದ ಮಾತನಾಡಿಸಬೇಕು.

ಸನ್ಮಾನಿಸು: ಜನಸೇವೆ ಮಾಡಿದ ಮದರ್ ತೆರೆಸಾ ಅವರನ್ನು ಅನೇಕ ಸಂಸ್ಥೆಗಳು ಸನ್ಮಾನಿಸಿದವು.

ಭಾಷಾ ಚಟುವಟಿಕೆ

ಅ) ಭಲೇ ಬಿಂದು ಪಾಠದಲ್ಲಿ ಬರುವ 'ಓಟ ಕೀಳು' ಎಂಬ ಮಾತನ್ನು ಗಮನಿಸಿ. ನಾವು ಅನೇಕ ಬಾರಿ ಇಂತಹ ಮಾತುಗಳನ್ನು ಬಳಸುತ್ತೇವೆ. ಇವುಗಳು ಮೇಲುನೋಟಕ್ಕೆ ಕೊಡುವ ಅರ್ಥವನ್ನಲ್ಲದೆ ಅದಕ್ಕಿಂತ ಬೇರೆಯದೇ ಅರ್ಥವನ್ನು ಕೊಡುತ್ತವೆ. 'ಓಟ'ಎಂದರೆ ಓಡುವುದು ಎಂಬುದೇನೋ ನಿಜ. ಅದನ್ನು ಕೀಳುವುದು ಹೇಗೆ ಎಂದು ಭಾಷೆಯನ್ನು ಕಲಿಯುವ ಹಂತದಲ್ಲಿರುವವರಿಗೆ ಅನ್ನಿಸುವುದು ಸಹಜ. ಅತಿ ಜೋರಾಗಿ ಓಡಿದ್ದನ್ನು ತಿಳಿಸಲು ಈ ಮಾತನ್ನು ಬಳಸುತ್ತೇವೆ. ಇಂತಹ ಮಾತುಗಳು ಹೇಳಬೇಕಾದುದನ್ನು ಮನಮುಟ್ಟುವಂತೆ ಹೇಳುತ್ತವೆ. ನೀವು ಕನ್ನಡ ಭಾಷೆಯನ್ನು ಬಹಳ ಚೆನ್ನಾಗಿ ಕಲಿಯಬೇಕಾದರೆ ಇಂತಹ ಮಾತುಗಳನ್ನು ಗಮನಿಸುತ್ತಿರಬೇಕು. ನಿಮಗೆ ಈಗಾಗಲೇ ಇಂತಹ ಮಾತುಗಳು ಕಿವಿಗೆ ಬಿದ್ದಿರುತ್ತವೆ.

ನೆನಪಿಸಿಕೊಳ್ಳಲು ಪ್ರಯತ್ನಿಸಿ. ಇವುಗಳನ್ನು 'ನುಡಿಗಟ್ಟು' ಎಂದು ಕರೆಯುತ್ತಾರೆ. ಕೆಳಗಿನ ನುಡಿಗಟ್ಟುಗಳನ್ನು ಗಮನಿಸಿ.

- ಅವನು ಇವತ್ತು ನನ್ನ **'ತಲೆ ತಿಂದುಬಿಟ್ಟ'**.
- ಈ ಕಷ್ಟದಿಂದ ನನಗೆ **'ತಲೆಬಿಸಿಯಾಗಿದೆ'**.

ಮೊದಲೇ ಕಷ್ಟ, ಮತ್ತೂ ಕಷ್ಟ ಬಂದಿದೆ ಎಂದು ಹೇಳಬೇಕು ಎಂದಿಟ್ಟುಕೊಳ್ಳೋಣ. ಆಗ ಏನು ಹೇಳುತ್ತಾರೆ ಗೊತ್ತೇ? – 'ಬಾಣಲೆಯಿಂದ ಬೆಂಕಿಗೆ ಹಾಕಿದಂತೆ' – ಇಂತಹ ಮಾತುಗಳನ್ನು ಬಳಸಲು, ಅಭ್ಯಾಸಮಾಡಲು ಖುಷಿಯಾಗುತ್ತದೆ. ಪ್ರಯತ್ನಿಸಿ. ಇಂತಹ ಮಾತುಗಳನ್ನು ದಿನಕ್ಕೆ ಒಂದರಂತೆ ನಿಮ್ಮ ಅಪ್ಪ, ಅಮ್ಮ ಅಧ್ಯಾಪಕರಿಂದ ಕೇಳಿ ತಿಳಿದುಕೊಂಡು ಬರವಣಿಗೆಯಲ್ಲಿ ಬಳಸಿರಿ.

ಆ) ಮಧ್ಯಾಹ್ನ ಎಂಬುದು ದಿನದ ಒಂದು ಕಾಲವನ್ನು ಸೂಚಿಸುವ ಪದ. ದಿನದ ಇತರ ಕಾಲಗಳನ್ನು ಸೂಚಿಸುವ ಪದಗಳನ್ನು ಬರೆಯಿರಿ.

ಇ) 'ಸೈಕಲ್' ಎಂಬ ಇಂಗ್ಲಿಷ್ ಪದವನ್ನು ನಾವು ಕನ್ನಡದಲ್ಲೂ ಹಾಗೆಯೇ ಬಳಸುತ್ತೇವೆ. ನಾವು ಕನ್ನಡ ಮಾತನಾಡುವಾಗ ಇಂತಹ ಅನೇಕ ಪದಗಳನ್ನು ಬಳಸುತ್ತೇವೆ. ಉದಾಹರಣೆಗೆ, ಪೆನ್ನು, ಬುಕ್ಕು ಇತ್ಯಾದಿ. ನಿಮ್ಮ ಗಮನಕ್ಕೆ ಬಂದಿರುವಂತೆ ಕನ್ನಡದಲ್ಲಿ ಬಳಸುವ ಇಂಗ್ಲಿಷ್ ಪದಗಳನ್ನು ಗುರುತಿಸಿ. ಪಟ್ಟಿ ಮಾಡಿ.

ಈ) 'ಅವರು ಏಣಿಯನ್ನೂ, ಹಗ್ಗವನ್ನೂ, ಕುರ್ಚಿಯನ್ನೂ ತಂದರು' ಎಂಬಮಾತನ್ನು ಅವರು ಏಣಿ, ಹಗ್ಗ, ಕುರ್ಚಿಗಳನ್ನು ತಂದರು ಎಂದು ಹೇಳಬಹುದಲ್ಲವೇ? ಈ ರೀತಿ ಮಾತನಾಡುವುದು ಹೆಚ್ಚು ಸುಲಭ. ಕೆಳಗಿನ ವಾಕ್ಯಗಳನ್ನು ಈ ರೀತಿಯಲ್ಲಿ ಚಿಕ್ಕದಾಗಿ ಹೇಳಿ.

ರಾಣಿ ಬಿಸ್ಕತ್ತನ್ನೂ, ಚಾಕ್ಲೆಟನ್ನೂ, ಹಣ್ಣುಗಳನ್ನೂ ತಿಂದಳು.

ಗುಂಡ ರವೆಉಂಡೆಗಳನ್ನೂ, ಚಕ್ಕುಲಿಗಳನ್ನೂ, ಒಬ್ಬಟ್ಟನ್ನೂ ತಿಂದನು.

ಇಂತಹ ಐದು ನುಡಿಗಳನ್ನು ಬರೆಯಿರಿ.

ವ್ಯಾಕರಣ

ಗುಣಿತಾಕ್ಷರಗಳು

ವ್ಯಂಜನಗಳನ್ನು ಸ್ವತಂತ್ರವಾಗಿ ಉಚ್ಚರಿಸಲು ಸಾಧ್ಯವಿಲ್ಲ, ಸ್ವರದ ಸಹಾಯ ಬೇಕಾಗುತ್ತದೆ. ಮೂಲವ್ಯಂಜನಗಳಿಗೆ ಸ್ವರಗಳು ಸೇರಿ ಆಗುವ ಅಕ್ಷರಗಳೇ ಗುಣಿತಾಕ್ಷರಗಳು. ವ್ಯಂಜನದ ಮೊದಲ ಅಕ್ಷರ 'ಕ್'ಗೆ ಸ್ವರಗಳನ್ನು ಸೇರಿಸಿ ಗುಣಿತಾಕ್ಷರದ ಅಭ್ಯಾಸವನ್ನು ಪ್ರಾರಂಭಿಸುವುದರಿಂದ **'ಕಾಗುಣಿತ'** ಎಂದು ಹೇಳುವುದು ರೂಢಿಯಲ್ಲಿದೆ. ಗುಣಿತಾಕ್ಷರಗಳನ್ನು 'ಬಳ್ಳಿ' ಎಂದೂ ಕರೆಯುತ್ತಾರೆ.

ವ್ಯಂಜನ	ಸ್ವರ	ಸ್ವರ ಸಂಜ್ಞೆ (ಚಿಹ್ನೆ)	ಸ್ವರ ಸಂಜ್ಞೆ (ಚಿಹ್ನೆ) ಹೆಸರು	ಗುಣಿತಾಕ್ಷರ
ಕ್	ಅ	ˊ	ತಲೆಕಟ್ಟು	ಕ
ಕ್	ಆ	ಾ	ಇಳಿ/ದೀರ್ಘ	ಕಾ
ಕ್	ಇ	ಿ	ಗುಡಿಸು/ಗುಣಿಸು	ಕಿ
ಕ್	ಈ	ೀ	ಗುಡಿಸಿನ/ಗುಣಿತನ ದೀರ್ಘ	ಕೀ
ಕ್	ಉ	ು	ಕೊಂಬು	ಕು
ಕ್	ಊ	ೂ	ಕೊಂಬಿನ ಇಳಿ/ದೀರ್ಘ	ಕೂ
ಕ್	ಋ	ೃ	ವಟ್ರಸುಳಿ	ಕೃ
ಕ್	ಎ	ೆ	ಎತ್ವ	ಕೆ
ಕ್	ಏ	ೇ	ಎತ್ವನ ದೀರ್ಘ/ಏತ್ವ	ಕೇ
ಕ್	ಐ	ೈ	ಐತ್ವ	ಕೈ
ಕ್	ಒ	ೊ	ಒತ್ವ	ಕೊ
ಕ್	ಓ	ೋ	ಒತ್ವನ ದೀರ್ಘ/ಓತ್ವ	ಕೋ
ಕ್	ಔ	ೌ	ಔತ್ವ	ಕೌ
ಕ್	ಅಂ	ಂ	ಅ ಒಂದು ಸೊನ್ನೆ	ಕಂ
ಕ್	ಅಃ	ಃ	ಅ ಎರಡು ಸೊನ್ನೆ	ಕಃ

ಸಂಯುಕ್ತಾಕ್ಷರಗಳು (ಒತ್ತಕ್ಷರಗಳು)

'ಸಂಯುಕ್ತ' ಎಂದರೆ ಚೆನ್ನಾಗಿ ಸೇರಿಸಿದ ಎಂದು ಅರ್ಥ. ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳು ಕಾಲ ವಿಳಂಬವಿಲ್ಲದೆ ಒಂದು ಸ್ವರದ ಜೊತೆ ಸೇರಿ ಆಗುವುದೇ ಸಂಯುಕ್ತಾಕ್ಷರ. (ಸಂ=ಚೆನ್ನಾಗಿ), (ಯುಕ್ತ=ಸೇರಿದ) ಎರಡನೆಯ ಮತ್ತು ಮೂರನೆಯ ವ್ಯಂಜನಗಳನ್ನು ಒತ್ತುಗಳಾಗಿ (ವ್ಯಂಜನ ಸಂಜ್ಞೆ) ಬರೆಯುತ್ತೇವೆ. ಸಂಯುಕ್ತಾಕ್ಷರಗಳನ್ನು ಒತ್ತಕ್ಷರಗಳೆಂದೂ ಕರೆಯುತ್ತಾರೆ.

ಒತ್ತುಗಳು (ವ್ಯಂಜನ ಸಂಜ್ಞೆಗಳು)

್ಕ ್ಖ ್ಗ ್ಘ ್ಙ

್ಚ ್ಛ ್ಜ ್ಝ ್ಞ

್ಟ ್ಠ ್ಡ ್ಢ ್ಣ

್ತ ್ಥ ್ದ ್ಧ ್ನ

್ಪ ್ಫ ್ಬ ್ಭ ್ಮ

್ಯ ್ರ ್ಲ ್ವ ್ಶ ್ಷ ್ಸ ್ಹ ್ಳ

ಸಂಯುಕ್ತಾಕ್ಷರಗಳಲ್ಲಿ ಸಜಾತೀಯ ಸಂಯುಕ್ತಾಕ್ಷರ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳೆಂದು ಎರಡು ವಿಧ.

ಸಜಾತೀಯ ಸಂಯುಕ್ತಾಕ್ಷರ:

ಸಜಾತೀಯ ಎಂದರೆ ಒಂದೇ ಜಾತಿಯ ವ್ಯಂಜನಗಳು. ಒಂದೇ ವ್ಯಂಜನ ಎರಡು ಬಾರಿ ಒಂದು ಸ್ವರದ ಜೊತೆ ಸೇರಿ ಆಗುವ ಅಕ್ಷರವೇ ಸಜಾತೀಯ ಸಂಯುಕ್ತಾಕ್ಷರ. ಉದಾಹರಣೆ: ಕ್ಕ, ಗ್ಗೆ, ಯ್ಯೋ, ಮ್ಮಿ, ಲ್ಲಿ, ರ್ರ ಮುಂತಾದವು.

ಕ್+ಕ್+ಅ, ಗ್+ಗ್+ಎ, ಯ್+ಯ್+ಓ, ಮ್+ಮ್+ಇ, ಲ್+ಲ್+ಇ, ರ್+ರ್+ಅ ಮುಂತಾದವು

ವಿಜಾತೀಯ ಸಂಯುಕ್ತಾಕ್ಷರ:

ವಿಜಾತೀಯ ಎಂದರೆ ಬೇರೆಬೇರೆ ಜಾತಿಯ ವ್ಯಂಜನಗಳು. ಬೇರೆಬೇರೆ ಎರಡು ಅಥವಾ ಹೆಚ್ಚು ವ್ಯಂಜನಗಳು ಒಂದು ಸ್ವರದ ಜೊತೆ ಸೇರಿ ಆಗುವ ಅಕ್ಷರವೇ ವಿಜಾತೀಯ ಸಂಯುಕ್ತಾಕ್ಷರ.

ಉದಾಹರಣೆ: ಕ್ಷ, ರ್ಯ, ಗ್ನಿ, ಸ್ತ್ರೀ, ತ್ರ್ಯಾ ಮುಂತಾದವು.

ಕ್+ಷ್+ಅ, ರ್+ಯ್+ಅ, ಗ್+ನ್+ಇ, ಸ್+ತ್+ಈ, ತ್+ರ್+ಯ್+ಆ ಮುಂತಾದವು.

ಕೆಳಗಿನ ಪದಗಳಲ್ಲಿ ಸಜಾತೀಯ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳನ್ನು ವಿಂಗಡಿಸಿ ಗುರುತಿಸಿರಿ:

ಉದಾಹರಣೆ: ಲೆಕ್ಕಿಸು–ಸಜಾತೀಯ: **'ಕ್ಕಿ'**

ಮಕ್ಕಳು, ಪ್ರೀತಿ, ಗದ್ಯ, ಅಕ್ಕರೆ, ಅಯ್ಯಪ್ಪನ್, ದಾಕ್ಷಾಯಿಣಿ, ಹುಲ್ಲು, ತಪ್ಪಿಸಿಕೊ, ಹಗ್ಗಬಾವಿಯಲ್ಲಿ, ಸ್ವರ.

*****

೫. ಹಗಲು ವೇಷಗಾರರು

–ಜಂಬಣ್ಣ ಅಮರಚಿಂತ

ಪ್ರವೇಶ: ಕವಿತೆಯು ವೇಷಗಾರ ಸಮುದಾಯ ಬದುಕಿನ ಚಿತ್ರವನ್ನು ಕೊಡುತ್ತಿದೆ. ವೇಷಹಾಕು ಎನ್ನುವುದಕ್ಕೆ ಮೋಸಮಾಡು ಎಂಬರ್ಥವೂ ಇದೆ. ಆದರೆ ಇಲ್ಲಿ ವೇಷಗಾರರು ಮೋಸಗಾರರಲ್ಲ. ಬದುಕನ್ನು ನಡೆಸಲು ಕಲೆಯನ್ನು ಆಧರಿಸಿದವರು. ಅನಕ್ಷರಸ್ಥರಾದ ಇವರು ಮಹಾಭಾರತ–ರಾಮಾಯಣ ಓದಿದವರಲ್ಲ. ಆದರೂ ಇವರಿಗೆ ಅಪಾರ ಜ್ಞಾನವಿದೆ. ನಮ್ಮ ಸಂಸ್ಕೃತಿ ಪರಂಪರೆಯನ್ನು ಜನರಿಗೆ ಪರಿಚಯಿಸುತ್ತ ಬಂದ ಇವರು, ಸದಾ ತಿರುಗಾಟ ಮಾಡುವ ಅಲೆಮಾರಿಗಳು; ಇವರನ್ನು 'ಬಹುರೂಪಿಗಳು' ಎಂತಲೂ ಕರೆಯುವರು. ಬೇರೆಯವರಿಗೆ ಮನರಂಜನೆ ಕೊಡಲು ತಮ್ಮ ಬಾಳನ್ನು ಸವೆಸಿದವರು. ಆದರೆ ಇವರ ಕಷ್ಟಕರ ಬದುಕಿನ ನಾಟಕವು ಇನ್ನೂ ಮುಗಿದಿಲ್ಲ. ಇವರ ಬದುಕಿನಲ್ಲಿ ಬದಲಾವಣೆ ಆಗಬೇಕಾಗಿದೆ. ಅದು ಯಾವಾಗ ಸಾಧ್ಯವಾಗುತ್ತದೆಯೋ ತಿಳಿಯದು ಎಂಬುದು ಪ್ರಸ್ತುತ ಪದ್ಯದ ಆಶಯವಾಗಿದೆ.




ಹಗಲು ವೇಷಗಾರರಿವರು
ಮೋಸಗಾರರಲ್ಲ

ಹಗಲ ಹೆಗಲಿಗೆ ಹೆಗಲು ಕೊಟ್ಟವರು
ಮೂಡಣದಿಂದ ಮೂಡಿಬಂದ ಸೂರ್ಯನ
ತೇಜಸ್ವಿ ಮಂಡಲದ ವಾರಸುದಾರರು
ಬದಲಿಸಿದರೂ ಬಣ್ಣ ಗೋಸುಂಬೆಗಳಲ್ಲವಣ್ಣ
ಬಹುರೂಪಿ ಬದುಕಿನ ಪಾತ್ರಧಾರಿಗಳು

ಓದಲಿಲ್ಲ ರಾಮಾಯಣ; ಓದಿದ್ದು ಗ್ರಾಮಾಯಣ
ಪಠಿಸಲಿಲ್ಲ ಭಾಗವತ–ವ್ಯಾಸರ ಮಹಾಭಾರತ
ನಿರ್ದೇಶಿಸಲು ಯಾರಿಲ್ಲ–ತಮಗೆ ತಾವೇ ದಿಗ್ದರ್ಶಕರು
ಕುರಿತೋದದೆ ನಾಟಕ ಪ್ರಯೋಗ ಪರಿಣತರು
ಗಿರಿಜನ ಸಂಸ್ಕೃತಿಯ ವಾಲ್ಮೀಕಿ ಭರತರು
    ಕಾಲ ಚಕ್ರವನ್ನು ಕಾಲಲ್ಲಿ ಮೆಟ್ಟು
    ನಾಡು ನಾಡು ಅಲೆದು ನಾಡಾಡಿಗಳಾದರು
    ಕಣ್ಣೀರು ಹರಿಸಿ, ಮಣ್ಣನ್ನ ಕಲಿಸಿ
    ಮಣ್ಣು ಬಣ್ಣ ಮಾಡಿ ಒಡಲಿಗೊರಸಿದರು

ಜೀವನದ ತುಂಬ ಬರೀ ಪಾತ್ರಧಾರಿಗಳಾಗಿ
ಬಣ್ಣದ ವೇಷ ತೊಟ್ಟು ಮಹಲುಗಳ ಮುಂದೆ
ಧಣಿಗಳ ರಂಜಿಸಲೆಂದು ಕುಣಿದಾಡಿದರು
ಅರ್ಥದೋಚಿ ಜೀವನ ವ್ಯರ್ಥಗೈದವರ ಮುಂದೆ
ಕೈಯೊಡ್ಡಿ ಬದುಕು ಜೋಳಿಗೆ ಮಾಡಿದರು
ಕದತಟ್ಟಿ ಎದೆ ತಟ್ಟಿ ನೋವಿನ ನೂರೆಂಟು
ಅಂಚೆ ನಿತ್ಯ ಬಟ್ವಾಡ ಮಾಡಿದರು
    ಬದುಕೆಲ್ಲ ಬಯಲಾಟ– ಅಂತ್ಯವದು ದುರಂತ
    ಮೂರು ಗಂಟೆಗೆ ಮುಗಿಯುವ ನಾಟಕವಲ್ಲವಿದು
    ಏಸೋ ಜನುಮಗಳ ರಂಗ ಪ್ರಯೋಗವಾಗಬೇಕು
    ಬದಲಾವಣೆಗೆ ದಿನರಾತ್ರಿ ಪರಿತಪಿಸಬೇಕು.

ಕೃತಿಕಾರರ ಪರಿಚಯ



ಹೈದರಾಬಾದ್ ಕರ್ನಾಟಕ ಭಾಗದ ಕನ್ನಡ ಸಾಹಿತ್ಯ ವಲಯದಲ್ಲಿ ರಾಯಚೂರಿನ ಜಂಬಣ್ಣ ಅಮರಚಿಂತರ ಹೆಸರು ಪ್ರಸಿದ್ಧವಾಗಿದೆ. ಶ್ರೀಯುತರು ರಾಯಚೂರಿನಲ್ಲಿ ೭.೪.೧೯೪೫ರಲ್ಲಿ ಜನಿಸಿದರು. 'ಮುಂಜಾವಿನ ಕೊರಳು', 'ಅಧೋ ಜಗತ್ತಿನ ಅಕಾವ್ಯ', 'ಮಣ್ಣಲ್ಲಿ ಬಿರಿದ ಅಕ್ಷರಗಳು', 'ಅಮರಚಿಂತರ ಕಾವ್ಯ', 'ಹರಿಯುವ ನದಿಗೆ ಮೈಯೆಲ್ಲಾ ಕಾಲು', 'ಮುಳ್ಳಿನ ಬಾಯಲ್ಲಿ ಹೂ ನಾಲಿಗೆ', 'ಪದಗಳು ನಲಿದಾಡುತ್ತಿವೆ ಪಾದಗಳಾಗಿ', 'ಬಾಧೆಯ ವೃಕ್ಷದಲ್ಲಿ ಬೋಧಿಯ ಪರಿಮಳ', ಮುಂತಾದ ಕವನ ಸಂಕಲನಗಳನ್ನೂ 'ಕುರುಮಯ್ಯ ಮತ್ತು ಅಂಕುಶ ದೊಡ್ಡಿ', 'ಬೂಟುಗಾಲಿನ ಸದ್ದು' ಮುಂತಾದ ಕಾದಂಬರಿಗಳನ್ನೂ 'ಮಡಿವಾಳ ಮಾಚಿದೇವ' ಎಂಬ ವಿಮರ್ಶಾ ಕೃತಿಯನ್ನೂ ರಚಿಸಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಸೇರಿದಂತೆ ಅನೇಕ ಪ್ರಶಸ್ತಿಗಳು ಲಭಿಸಿವೆ. ಶ್ರೀಯುತರ 'ಹಗಲುವೇಷಗಾರರು' ಪದ್ಯವನ್ನು 'ಅಧೋ ಜಗತ್ತಿನ ಅಕಾವ್ಯ' ಕವನಸಂಗ್ರಹದಿಂದ ಆರಿಸಲಾಗಿದೆ.

ಪದಗಳ ಅರ್ಥ

ಅಂಚೆ–ಟಪಾಲು;
ಅರ್ಥ–ಪುರುಷಾರ್ಥ, ಸಂಪತ್ತು, ಹಣ;
ಒಡಲು–ಹೊಟ್ಟೆ, ಗರ್ಭ, ಶರೀರ, ದೇಹ;
ಗೋಸುಂಬೆ–ದೇಹದ ಬಣ್ಣವನ್ನು ಬದಲಿಸಬಲ್ಲ ಓತಿಕೇತ ಜಾತಿಗೆ ಸೇರಿದ ಒಂದು ಪ್ರಾಣಿ, ಊಸರವಳ್ಳಿ;
ಗೈ–ಮಾಡು;
ತೇಜಸ್ವಿ–ಕಾಂತಿಯುಳ್ಳವನು, ಸಮರ್ಥ, ಪ್ರಭಾವಶಾಲಿ;
ದಿಗ್ದರ್ಶಕ–ನಿರ್ದೇಶಕ, ಮಾರ್ಗದರ್ಶಕ;
ಧಣಿಗಳು–ಒಡೆಯರು, ಯಜಮಾನ;
ಪರಿಣತ–ನಿಪುಣ;
ಪರಿತಪಿಸು–ದುಃಖಪಡು;
ಬಟ್ವಾಡ–ವಿತರಿಸುವುದು;
ಬಹುರೂಪಿ–ಅನೇಕ ರೂಪ ತಳೆಯುವವರು;
ಭಾಗವತ–ಹರಿದಾಸ, ವಿಷ್ಣುಭಕ್ತ, ಯಕ್ಷಗಾನ ಮತ್ತು ಬಯಲಾಟಗಳ ನಿರ್ದೇಶಕ;
ಮಹಲು–ಅರಮನೆ, ಸೌಧ, ಭವನ, ಮಹಡಿ, ಉಪ್ಪರಿಗೆ;
ಮೂಡಣ–ಪೂರ್ವ;
ಮೆಟ್ಟು–ಕಾಲಿನಿಂದ ತುಳಿ, ಪಾದದಿಂದ ಒತ್ತು, ಧ್ವಂಸಗೊಳಿಸು, ನಾಶಮಾಡು;
ರಂಜಿಸು–ಸಂತೋಷಗೊಳಿಸು, ಹಿಗ್ಗುವಂತೆ ಮಾಡು;
ವಾರಸುದಾರ–ಹಕ್ಕುದಾರ, ಬಾಧ್ಯಸ್ಥ, ಪಿತ್ರಾರ್ಜಿತ ಆಸ್ತಿಯ ಹಕ್ಕುದಾರ, ಪೋಷಕ, ಮೇಲ್ವಿಚಾರಕ.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಹಗಲು ವೇಷಗಾರರು ಯಾವುದಕ್ಕೆ ಹೆಗಲು ಕೊಟ್ಟರು?

೨. ಹಗಲು ವೇಷಗಾರರು ಓದಿದ್ದು ಯಾವುದೆಂದು ಕವಿ ಹೇಳಿದ್ದಾರೆ?

೩. ಹಗಲು ವೇಷಗಾರರು ನಾಡಾಡಿಗಳಾದದ್ದು ಹೇಗೆ?

೪. ಹಗಲುವೇಷದಾರಿಗಳು ಯಾರ ಯಾರ ಮುಂದೆ ಕುಣಿದಾಡಿದರು?

೫. ಮೂರುಗಂಟೆಗಳ ಅವಧಿಯಲ್ಲಿ ಮುಗಿಯದ ನಾಟಕ ಯಾವುದಲ್ಲವೆಂದು ಕವಿ ಹೇಳಿದ್ದಾರೆ?

ಆ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಹಗಲು ವೇಷಗಾರರು ಕುರಿತೋದದೆ ಇದ್ದರೂ ನಾಟಕ ಪ್ರಯೋಗ ಪರಿಣತರು ಹೇಗೆ?

೨. ಹಗಲು ವೇಷಗಾರರ ಬದುಕು ದುರಂತಮಯವಾದುದು ಏಕೆ?

ಇ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಹಗಲು ವೇಷಗಾರರ ಬದುಕಿನ ಬವಣೆಯನ್ನು ಅಮರಚಿಂತ ಅವರು ಕವನದ ಮೂಲಕ ಹೇಗೆ ತೆರೆದಿಟ್ಟಿದ್ದಾರೆ?

ಭಾಷಾಭ್ಯಾಸ

ಅ) ಕೊಟ್ಟಿರುವ ಪದಗಳಿಗೆ ಹೊಂದುವಂತೆ ಪ್ರಾಸ ಪದಗಳನ್ನು ಬರೆಯಿರಿ.

ಉದಾ: ಕದತಟ್ಟಿ–ಎದೆತಟ್ಟಿ

ರಾಮಾಯಣ–

ಹರಸಿ–

ತೊಟ್ಟು–

ಜೀವನ–

ಓದಲಿಲ್ಲ–

ಆ) ಈ ನುಡಿಗಟ್ಟುಗಳನ್ನು ಗಮನಿಸಿ, ಸ್ವಂತವಾಕ್ಯದಲ್ಲಿ ಬಳಸಿರಿ.

ಹೆಗಲುಗೊಡು, ಗೋಸುಂಬೆ, ಕಾಲಲ್ಲಿಮೆಟ್ಟು, ಕಣ್ಣೀರುಹರಿಸು, ಎದೆತಟ್ಟು.

ಇ) ಕೆಳಗಿನ ತತ್ಸಮಗಳಿಗೆ ತದ್ಭವಗಳನ್ನು ಬರೆಯಿರಿ.

ಸೂರ್ಯ, ವರ್ಣ, ಹಂಸ, ನಿತ್ಯ, ಜನ್ಮ.

ಭಾಷಾ ಚಟುವಟಿಕೆ

ಅ) ಕರ್ನಾಟಕದ ವಿವಿಧ ಜನಪದ ಕಲೆಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಮ್ ತಯಾರಿಸಿ.

ಆ) ಜನಪದ ಕಲಾವಿದರ ಜೀವನದ ಸುಖ ದುಃಖಗಳನ್ನು ಕುರಿತು ಬರೆಯಿರಿ.

ಛಂದಸ್ಸು

ಯತಿ: ಕಾವ್ಯವನ್ನು ವಾಚಿಸುವಾಗ ಅರ್ಥಕ್ಕೆ ಅಡ್ಡಿಯಾಗದಂತೆ ಉಸಿರು ತೆಗೆದುಕೊಳ್ಳಲು ನಿಲ್ಲಿಸುವ ತಾಣವೇ ಯತಿ.

ಗಣ: ಗಣ ಎಂದರೆ ಗುಂಪು. ಛಂದಸ್ಸಿನಲ್ಲಿ ಮೂರು ಪ್ರಕಾರದ ಗಣಗಳಿವೆ.

೧. ಮಾತ್ರಾಗಣ

೨. ಅಕ್ಷರಗಣ

೩. ಅಂಶಗಣ

ದೇಶಸೇವೆಯೇ ಈಶಸೇವೆ

*****

೬. ಬಾಲ್ಯದ ನೆನಪುಗಳು

– ಕೆ. ಶಿವರಾಮ ಕಾರಂತ

ಪ್ರವೇಶ: ಬಾಲ್ಯಜೀವನ ಪ್ರತಿಯೊಬ್ಬರಲ್ಲೂ ಅಚ್ಚಳಿಯದ ನೆನಪುಗಳನ್ನು ಮೂಡಿಸುತ್ತದೆ. ಚಿಕ್ಕಂದಿನಲ್ಲಿ ಆಡಿದ ಆಟಗಳು, ನೋಡಿದ ದೃಶ್ಯಗಳು, ಕೇಳಿದ ಹಾಡುಗಳು, ಓದಿದ ಪುಸ್ತಕಗಳು, ಆಲಿಸಿದ ಪಾಠಗಳು ಮನಸ್ಸಿನಲ್ಲಿ ಎಂದೆಂದಿಗೂ ಉಳಿದುಬಿಡುತ್ತವೆ. ಈ ನೆನಪುಗಳು ಅತ್ಯಂತ ಸಂತೋಷದಾಯಕವಾದವೂ ಹೌದು. ಇಂತಹ ನೆನಪುಗಳನ್ನು ಈ ಪಾಠದಲ್ಲಿ ಶಿವರಾಮ ಕಾರಂತರು ಮೆಲುಕುಹಾಕುತ್ತಾರೆ. ಆ ಮೂಲಕ ಓದುಗರೆಲ್ಲರಿಗೂ ತಮ್ಮ ಬಾಲ್ಯಜೀವನದ ಸವಿಗನಸುಗಳನ್ನು ನೆನಪಿಸಿಕೊಳ್ಳಲು ಈ ಲೇಖನದ ಮೂಲಕ ಅನುವುಮಾಡಿಕೊಟ್ಟಿದ್ದಾರೆ.

ನೀವು ಚಿಕ್ಕ ಬೆಕ್ಕಿನ ಮರಿಯನ್ನು ಕಂಡಿದ್ದೀರಾ, ನಾಯಿಮರಿಗಳು ಒಂದರೊಡನೊಂದು ಕಚ್ಚಿ, ಉರುಳುವುದನ್ನು ಕಂಡಿದ್ದೀರಾ! ಹೂಂ–ನೋಡದೆ ಉಂಟೇ? ಆದರೂ, ನನ್ನ ಅಪ್ಪ, ಅಣ್ಣ, ಅಜ್ಜ, ಅಮ್ಮ–ಎಲ್ಲರೂ ನನ್ನನ್ನು ಮುದ್ದಿಸಿದವರೇ. ತೀರ ಚಿಕ್ಕವನಿದ್ದಾಗ–ದೂರ ಓಡಾಡಲು ತ್ರಾಣವಿಲ್ಲದಾಗ–ಎತ್ತಿಕೊಂಡು ಅಲೆದಾಡಿದವರು; ಹಾರುವ ಹಕ್ಕಿಯನ್ನು ತೋರಿಸಿದ್ದಾರೆ, ಜಿಗಿಯುವ ಕೋತಿಯನ್ನು ತೋರಿಸಿದ್ದಾರೆ, ನನ್ನ ಸಂತೋಷಕ್ಕಾಗಿ ಏನೆಲ್ಲ ಮಾಡಿದ್ದಾರೆ.



ನಾನು ಹುಟ್ಟಿದ ಕೋಟ–ಎಂಬ ಊರಿಗೆ ವರುಣತೀರ್ಥ ಪೇಟೆ ಎಂಬ ಹೆಸರಿತ್ತು. ಇಂದು ಅದನ್ನು 'ಕೋಟ' ಎಂದು ಕರೆಯುತ್ತಾರೆ. ಈ ಊರಿನ ಪಡುವಣಕ್ಕೆ, ಮೂಡಣಕ್ಕೆ–ಕೆಲವು ಮೈಲುಗಳ ದೂರ ಬಯಲು ಭೂಮಿ. ಅದು, ಮಳೆಗಾಲದಲ್ಲಿ ಬತ್ತದ ಬೆಳೆ ಬೆಳೆಯುವ ಹಸಿರು ಚಾಪೆ. ಬತ್ತ ಬೆಳೆಯುವ ಕೆಲಸ ನಮಗೆ ಇಲ್ಲದೆ, ದಿನ ಹೋಗದು. ಉಣ್ಣಲು ಅಕ್ಕಿ ಬೇಡವೇ? ಬತ್ತ ಸುಮ್ಮನೆ ಬೆಳೆಯದು. ಅದಕ್ಕೆ ಗೊಬ್ಬರ ಬೇಕು. ನಮ್ಮ ಗ್ರಾಮದಲ್ಲಿ ಅಲ್ಲಲ್ಲಿ ಹಚ್ಚ ಹಸುರಿನ ಹಾಡಿಗಳಿವೆ. ಹಾಡಿ ಎಂದರೆ, ನೆಟ್ಟು ಬೆಳೆಯಿಸಿದ, ಬೇಲಿ ಹಾಕಿ

ರಕ್ಷಿಸಿದ ಕಾಡುಗಳು. ಇವು ಊರಲ್ಲಿ ಅಲ್ಲಲ್ಲಿ ಇದ್ದವು. ಅವು ಯಾಕೆ ಬೇಕು? ಗೊಬ್ಬರಕ್ಕೆ ಸೊಪ್ಪು ಬೇಕಾದರೆ ಗಿಡಮರ ಬೇಕು.

ನಮ್ಮ ಊರಿನ ೧೨ ಮೈಲು ಹೆದ್ದಾರಿಯ ಉದ್ದಕ್ಕೂ ಅಲ್ಲಲ್ಲಿ ಹಾಡಿಗಳಿದ್ದುವು. ನಾವು ಅದನ್ನು ಹೊಕ್ಕು, ಹುಡುಕಿದವರು. ಯಾಕೆ ಗೊತ್ತೆ? ಅಲ್ಲಿ, ಸದಾ ಕೆಂಪು ಕಿಸ್ಕಾರ ಹಣ್ಣು ಸಿಕ್ಕೀತು; ಗೋವೆ ಹಣ್ಣೂ ಸಿಕ್ಕೀತು. ಮಳೆಗಾಲದಲ್ಲಿ ಬಾಯಿಯೆಲ್ಲ ನೇರಳೆ ಬಣ್ಣ ಆಗುವ ನೇರಳೆ ಹಣ್ಣೂ ಸಿಕ್ಕೀತು.

ನಿಮಗೆ ಮೀಯುವ ಆಸೆಯಾದರೆ ಬನ್ನಿ. ಹಿಂದೆ ವರುಣತೀರ್ಥ ಎಂದೆನಲ್ಲ–ಅದೇನು ಗೊತ್ತೇ? ಅದು, ಬಲು ವಿಶಾಲವಾದ, ನಾಲ್ಕು ಸುತ್ತೂ ಕಲ್ಲು ಕಟ್ಟಿದ ಅದ್ಭುತ ಕೆರೆ! ಅದರಲ್ಲಿ ಸೊಂಟದಷ್ಟು ಆಳದ ನೀರು ಮಾತ್ರ. ಅದರಲ್ಲಿ ಹೋಗಿ ಮುಳುಗುವವರು ನಾವು–ಈಜು ಕಲಿತ ಬಳಿಕ.

ನಾನು ಅದರಲ್ಲಿ ಎಷ್ಟು ಹೊರಳಾಡಿದೆನೋ ತಿಳಿಯೆ. ಅದರ ಸೊಗಸನ್ನು ಹೇಳತೀರದು. ಅದರ ದಂಡೆಯ ಬಳಿಯ ಹೊನ್ನೆ ಮರಗಳಲ್ಲಿ ಕಾಯಿ ಆಗುತ್ತದೆ. ಅಲ್ಲಿ, ಕೊಕ್ಕರೆಗಳು ಬಂದು ಬಿಡಾರ ಮಾಡುತ್ತವೆ. ನೀರಿನ ಮೇಲೆ ಆಗಾಗ ಎರಡು ತೆರನ ಮೀನ್ಮುಳ್ಳಿಗಳು ಬಂದು ಥಟ್ಟನೆ ಎರಗಿ, ಮೀನಿನ ಬೇಟೆ ಆಡುತ್ತವೆ. ಮಳೆಗಾಲದಲ್ಲಿ ಕೆಲವು ಬಾರಿ ಅಲ್ಲಿಗೆ, ಇನ್ನೊಂದು ಊರಿಂದ ನೀರ್ಕಾಗೆಗಳು ಬರುವುದುಂಟು; ಅವೋ! ನೀಳಕತ್ತಿನ, ಕರಿಯ ಮೈಯ, ನೀರಲ್ಲಿ ಈಜಬಲ್ಲ ಪಕ್ಷಿಗಳು.





ನಮ್ಮಲ್ಲಿ ಹೊಳೆಯಿದೆ, ಕಡಲಿದೆ ಎಂದರೆ ನಿಮಗೆ ಬಾಯಲ್ಲಿ ನೀರು ಊರೀತು. ಅದೇನೇ ಅರಬ್ಬೀ ಸಮುದ್ರ! ಹತ್ತು, ಹದಿನೆರಡು ಮೈಲು ದೂರಕ್ಕೆ ಚಾಚುವ ಅದರ ಮರಳಿನ ದಂಡೆ–ಏರುತಗ್ಗಿಲ್ಲದ ಮರಳಿನ ಹಾಸುಗೆ. ದಿನಕ್ಕೆ ಎರಡು ಬಾರಿ ಆ ಕಡಲಿನ ನೀರು ಉಬ್ಬುತ್ತದೆ, ತಗ್ಗುತ್ತದೆ! ಅದರ ತೆರೆಗಳು ಬಲು ದೂರದಿಂದ ಉರುಳುರುಳಿ ಬರುತ್ತವೆ! ಅವು, ದೂರದ ಅಲೆಯಾಗಿ ಬಂದು–ನೆಲ ಸಮೀಪಿಸಿದಾಗ ಎತ್ತರದ ದಂಡೆಯಾಗಿ, ಅನಂತರ ಮುರಿದು, ಉರುಳುವ ನೋಟ–ಮರೆಯಲಾರದ್ದು!

ನಮ್ಮ ಊರಿನ ಕಡಲ ತೀರ ಬಲು ಸುಂದರ. ಅಲ್ಲಿ ಆಳ ಕಡಿಮೆ. ಊರವರು ಅಮಾವಾಸ್ಯೆ ದಿನ ಹಿಂಡು ಹಿಂಡಾಗಿ ಹೋಗುತ್ತಾರೆ–ಮೀಯಲು. ಇವೇ ಸಮಯಗಳಲ್ಲಿ ಊರಿನ ಬೆಸ್ತರು, ಉದ್ದದ ಬಲೆಗಳನ್ನು ಕಡಲ ದೂರಕ್ಕೆ ಒಯ್ದು, ಬಲೆ ಇಳಿಸಿ, ಹಿಂದೆ ಬಂದು, ಅದರ ಎರಡು ಕಡೆಗಳಿಂದಲೂ ಎಳೆಯುತ್ತಾರೆ.

ನೀವು ನಂಬಲಾರಿರಿ–ದಂಡೆಗೆ ಬಂದು ಬೀಳುವ ಮೀನಿನ ರಾಶಿರಾಶಿ ಕಾಣುತ್ತೀರಿ. ಊರಿನ ಬೆಸ್ತರಿಗೆ ಅದೇ ಹಬ್ಬ. ತೆರತೆರನ ಮೀನುಗಳಿವೆ! ಅವುಗಳ ನಡುವೆ ಒಂದೊಂದು ವಿಷದ ಹಾವು ಇರುವುದೂ ಉಂಟು!

ಇಷ್ಟನ್ನೆಲ್ಲ ಕೇಳಿದ ನಿಮಗೆ –ನಮ್ಮ ಊರಿಗೇ ಬಂದು ಇರುವ ಮನಸ್ಸಾದೀತು! ನಮ್ಮ ಊರಲ್ಲಿ ಇನ್ನೇನಿಲ್ಲವೇ ಎಂದು ಕೇಳುವಿರಿ! ಇಲ್ಲದೆ ಉಂಟೇ–ಊರೆಂದ ಮೇಲೆ ಇರಲೇಬೇಕು.

ಕೃತಿಕಾರರ ಪರಿಚಯ :



ಕೋಟ ಶಿವರಾಮ ಕಾರಂತರು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಟ ಎಂಬಲ್ಲಿ ಅಕ್ಟೋಬರ್ ೧೦, ೧೯೦೨ ರಲ್ಲಿ ಜನಿಸಿದರು. 'ಮರಳಿ ಮಣ್ಣಿಗೆ', 'ಅಳಿದ ಮೇಲೆ', 'ಬೆಟ್ಟದ ಜೀವ' 'ಸರಸಮ್ಮನ ಸಮಾಧಿ', 'ನಾವು ಕಟ್ಟಿದ ಸ್ವರ್ಗ', 'ಚಿಗುರಿದ ಕನಸು', 'ಅಭುವಿನಿಂದ ಬರಾಮಕ್ಕೆ', 'ಹುಚ್ಚು ಮನಸಿನ ಹತ್ತು ಮುಖಗಳು', 'ಮೈಮನಗಳ ಸುಳಿಯಲ್ಲಿ', 'ಚೋಮನ ದುಡಿ' ಇವು ಕಾರಂತರ ಕೆಲವು ಕೃತಿಗಳು. ಇವರ 'ಮೈಮನಗಳ ಸುಳಿಯಲ್ಲಿ' ಕೃತಿಗೆ ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿ, 'ಯಕ್ಷಗಾನ ಬಯಲಾಟ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ 'ಮೂಕಜ್ಜಿಯ ಕನಸುಗಳು' ಕೃತಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ಮುಂತಾದ ಅನೇಕ ಪ್ರಶಸ್ತಿಗಳು ಲಭಿಸಿವೆ. ಕಾರಂತರು ೧೯೯೭ ಸೆಪ್ಟಂಬರ್ ೧೨ ರಂದು ನಿಧನರಾದರು.

ಬಾಲ್ಯದ ನೆನಪುಗಳು ಪಾಠವನ್ನು ***'ಶಿವರಾಮ ಕಾರಂತರ ಲೇಖನಗಳು'*** *ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ.*

ಪದಗಳ ಅರ್ಥ

ಉಣ್ಣು–ಊಟ ಮಾಡು;

ಕೆಂಪು ಕಿಸ್ಕಾರ ಹಣ್ಣು–ಒಂದು ಜಾತಿಯ ಹಣ್ಣು;

ಗೋವೆ ಹಣ್ಣು–ಗೋಡಂಬಿ ಹಣ್ಣು;

ತೆಂಕಣ–ದಕ್ಷಿಣ;

ತ್ರಾಣ–ಶಕ್ತಿ, ಕಸುವು;

ದೈತ್ಯ–ಅಸುರ, ರಾಕ್ಷಸ;

ಪಡುವಣ–ಪಶ್ಚಿಮ;

ಬಡಗಣ–ಉತ್ತರ;

ಬೆಸ್ತರು–ಮೀನು ಹಿಡಿಯುವವರು;

ಮೀಯಿಸು–ಸ್ನಾನ ಮಾಡಿಸು, ತೊಳೆ;

ಮೂಡಣ–ಪೂರ್ವ.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಕಾರಂತರ ಸಂತೋಷಕ್ಕಾಗಿ ಅವರ ಹಿರಿಯರು ಏನೇನು ಮಾಡಿದರು?

೨. 'ಕೋಟ' ಎಂಬ ಊರಿಗೆ ಇದ್ದ ಮತ್ತೊಂದು ಹೆಸರು ಯಾವುದು?

೩. 'ಹಾಡಿ' ಎಂದರೇನು?

೪. 'ಹಾಡಿ'ಗಳು ಏಕೆ ಬೇಕು?

೫. ಕಾರಂತರು ಬಾಲ್ಯದಲ್ಲಿ ಹಾಡಿಗೆ ಏಕೆ ಹೋಗುತ್ತಿದ್ದರು?

೬. ಕಾರಂತರು ಕೋಟದ ಬೆಸ್ತರಿಗೆ ಯಾವ ದಿನ ಹಬ್ಬವೆಂದು ಹೇಳಿದ್ದಾರೆ?

೭. ಕೋಟದ ಜನ ಅಮಾವಾಸ್ಯೆಯ ದಿನ ಹಿಂಡು ಹಿಂಡಾಗಿ ಎಲ್ಲಿಗೆ ಹೋಗುತ್ತಿದ್ದರು?

ಆ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ವರುಣತೀರ್ಥವು ಹೇಳ ತೀರದ ಸೊಬಗಿನಿಂದ ಕೂಡಿದೆ ಎಂದು ಕಾರಂತರು ಏಕೆ ಹೇಳಿದ್ದಾರೆ?

೨. ಸಮುದ್ರದ ಸೊಬಗನ್ನು ಕಾರಂತರು ಹೇಗೆ ವರ್ಣಿಸಿದ್ದಾರೆ?

೩. 'ಕೋಟ' ಪ್ರದೇಶವನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿರಿ.

ಭಾಷಾಭ್ಯಾಸ

ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ನಾಲ್ಕಾರು, ಒಂದೆರಡು, ಆಸೆಯಾದರೆ, ಬೇರೊಂದು, ವರ್ಷಕ್ಕೊಮ್ಮೆ.

ಆ) ಕೆಳಗೆ ಬಿಡಿಸಿಕೊಟ್ಟಿರುವ ಪದಗಳನ್ನು ಕೂಡಿಸಿ ಬರೆಯಿರಿ.

ದಂಡೆ+ಆಗಿ =

ಚಿಕ್ಕವನು+ಇದ್ದಾಗ =

ಒಂದು+ಒಂದು =

ಮಳೆ+ಕಾಲ =

ಇ) ಮಾದರಿಯಂತೆ ಬರೆಯಿರಿ:

ಮಾದರಿ: ನೋಡು – ನೋಟ

ಮಾಡು –

ಕಾಡು –

ಓಡು –

ಆಡು –

ಕೂಡು –

ಈ) ಮಾದರಿಯಂತೆ ಬಿಟ್ಟ ಸ್ಥಳಗಳನ್ನು ಭರ್ತಿಮಾಡಿ:

ಮಾದರಿ: ಅನಿಸಲಿ	ಅನಿಸದು	ಅನಿಸೀತು
ಮಾಡಲಿ		ಮಾಡೀತು
ಸಿಕ್ಕಲಿ /ಸಿಗಲಿ	ಸಿಗದು	
ಬಿಡಲಿ		ಬಿಟ್ಟೀತು
ಕೊಡಲಿ		ಕೊಟ್ಟೀತು
ಕೇಳಲಿ		ಕೇಳೀತು

ಉ) 'ಅ' ಪಟ್ಟಿಯಲ್ಲಿನ ದಿಕ್ಕುಗಳನ್ನು 'ಆ' ಪಟ್ಟಿಯಲ್ಲಿರುವ ಅವುಗಳ ಸಮಾನಾರ್ಥಕ ಪದಗಳೊಂದಿಗೆ ಹೊಂದಿಸಿ ಬರೆಯಿರಿ.

'ಅ' ಪಟ್ಟಿ	'ಆ' ಪಟ್ಟಿ
1. ಮೂಡಣ	ಅ. ಪಶ್ಚಿಮ
2. ತೆಂಕಣ	ಆ. ಈಶಾನ್ಯ
3. ಪಡುವಣ	ಇ. ಪೂರ್ವ
4. ಬಡಗಣ	ಈ. ದಕ್ಷಿಣ
	ಉ. ಉತ್ತರ

ಊ) ಕೆಳಗಿನ ಪದಗಳನ್ನು ಬಳಸಿ ಅರ್ಥವತ್ತಾದ ವಾಕ್ಯಗಳನ್ನು ರಚಿಸಿರಿ.

ಸಂತೋಷ, ಮಳೆಗಾಲ, ಗುಮ್ಮ, ದೈತ್ಯ.

ಭಾಷಾ ಚಟುವಟಿಕೆ

ಅ) ಕೆಳಗಿನ ಪದಗಳನ್ನು ಓದಿ, ಹೇಳಿಕೊಂಡು ಬರೆಯಿರಿ.

ಬಾಲ್ಯ, ಶಿವರಾಮ ಕಾರಂತ, ಉರುಳುರುಳಿ, ಮುದ್ದಿಸು, ಸಂತೋಷ, ಪಡುವಣ, ಮೂಡಣ, ತೆಂಕಣ, ಬಡಗಣ, ಕೋಟ, ಬತ್ತ, ಉಣ್ಣು, ಗೊಬ್ಬರ, ಹೆದ್ದಾರಿ, ಏರುತಗ್ಗು.

ಆ) ಕೆಳಗಿನ ಚಿತ್ರಗಳನ್ನು ಆಧರಿಸಿ ಎರಡೆರಡು ವಾಕ್ಯಗಳನ್ನು ರಚಿಸಿರಿ.





ಇ. ನಿಮ್ಮ ಊರಿನ ಸೊಬಗನ್ನು 8–10 ವಾಕ್ಯಗಳಲ್ಲಿ ಬಣ್ಣಿಸಿರಿ.

ವ್ಯಾಕರಣ

ಭಾಗ–'ಅ'

ಲೇಖನ ಚಿಹ್ನೆಗಳು

ಬರವಣಿಗೆಯಲ್ಲಿ ಲೇಖನ ಚಿಹ್ನೆಗಳ ಪಾತ್ರ ಅತ್ಯಂತ ಪ್ರಮುಖವಾದುದು. ಲೇಖನ ಚಿಹ್ನೆಗಳಿಲ್ಲದ ಬರವಣಿಗೆಯು ಸ್ಪಷ್ಟಾರ್ಥವನ್ನು ಕೊಡದೆ ಅನೇಕ ತೊಡಕುಗಳಿಗೆ ಕಾರಣವಾಗುತ್ತದೆ. ಆದುದರಿಂದ ಲೇಖನ ಚಿಹ್ನೆಗಳ ಕಡೆಗೆ ಗಮನಕೊಡುವುದು ಆವಶ್ಯಕ. ಬರವಣಿಗೆಯಲ್ಲಿ ಲೇಖನ ಚಿಹ್ನೆಗಳನ್ನು ಉಪಯೋಗಿಸುವುದರಿಂದ ಬರವಣಿಗೆಗೊಂದು ಬೆಲೆ ಬರುತ್ತದೆ.

೧. **ಪೂರ್ಣವಿರಾಮ–(.)** ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ '.' ಈ ಚಿಹ್ನೆಯನ್ನು ಉಪಯೋಗಿಸಬೇಕು.

೨. **ಅರ್ಧವಿರಾಮ–(;)** ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ, ಉಪ ವಾಕ್ಯಗಳು ಮುಗಿದಲ್ಲೆಲ್ಲ ಅರ್ಧವಿರಾಮದ ';' ಈ ಚಿಹ್ನೆಯನ್ನು ಉಪಯೋಗಿಸಬೇಕು.

೩. **ಅಲ್ಪವಿರಾಮ–(,)** ಇವು ಮುಖ್ಯವಾಗಿ ಅಲ್ಪವಿರಾಮ ಬರುವ ಸ್ಥಳಗಳಲ್ಲಿ ಬಳಸಬೇಕು.

   ೧. ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಅನೇಕ ವಿಶೇಷಣಗಳಿದ್ದಾಗ ಕೊನೆಯ ವಿಶೇಷಣವನ್ನುಳಿದು ಉಳಿದವುಗಳ ಮುಂದೆ, ಈ ಚಿಹ್ನೆಯನ್ನು ಉಪಯೋಗಿಸಬೇಕು.

   ೨. ಸಂಬೋಧನೆಗಳ ಮುಂದೆ ಹಾಗೂ ಅನೇಕ ಕರ್ತೃಗಳು ಅಥವಾ ಕರ್ಮಗಳು ಬಂದಾಗ, ಕೊನೆಯದನ್ನುಳಿದು ಉಳಿದವುಗಳ ಮುಂದೆ ಅಲ್ಪವಿರಾಮದ ',' ಈ ಚಿಹ್ನೆಯನ್ನು ಬರೆಯಬೇಕು.

೪. **ಪ್ರಶ್ನಾರ್ಥಕ ಚಿಹ್ನೆ–(?)** ಪ್ರಶ್ನಾರ್ಥಕ ಪದ ಮತ್ತು ವಾಕ್ಯಗಳ ಮುಂದೆ '?' ಈ ಚಿಹ್ನೆಯನ್ನು ಹಾಕಬೇಕು.

೫. **ಭಾವ ಸೂಚಕ ಚಿಹ್ನೆ–(!)** ಆಶ್ಚರ್ಯ, ಸಂತೋಷ, ವಿಷಾದ, ದುಃಖ, ಕೋಪ, ಆನಂದ– ಇತ್ಯಾದಿ ಭಾವಸೂಚಕ ಶಬ್ದಗಳ ಮುಂದೆ '!' ಈ ರೀತಿಯ ಚಿಹ್ನೆ ಬರೆದರೆ ಆ ಮಾತುಗಳ ಅರ್ಥ ಸ್ಪಷ್ಟವಾಗುವುದು.


೬. **ಉದ್ಧರಣ ಚಿಹ್ನೆ –(" ")** – ಇನ್ನೊಬ್ಬರು ಹೀಗೆ ಹೇಳಿದರೆಂದು ಒಬ್ಬರ ಮಾತನ್ನು ಉದ್ಧರಿಸಿ ಬರೆಯುವಾಗ ಅಥವಾ ಇನ್ನೊಬ್ಬರ ನೇರ ಮಾತುಗಳನ್ನು ತೋರಿಸುವಾಗ " " ಈ ಚಿಹ್ನೆಯನ್ನು ಉಪಯೋಗಿಸಬೇಕು.

೭. **ವಾಕ್ಯವೇಷ್ಟನ ಚಿಹ್ನೆ** (ಏಕ ಉದ್ಧರಣ ಚಿಹ್ನೆ)–(')–ಬರವಣಿಗೆಯಲ್ಲಿ ಪಾರಿಭಾಷಿಕ ಪದಗಳನ್ನು, ವಿಶಿಷ್ಟಪದಗಳನ್ನು ಬಳಸಿದಾಗ ' ' ಈ ಚಿಹ್ನೆಯನ್ನು ಬಳಸಬೇಕು.

ಭಾಗ–'ಆ'

ಅ) ಕೆಳಗಿನ ಚಿತ್ರಕ್ಕೆ ಆಶ್ಚರ್ಯ ಸೂಚಕ ಅಥವಾ ಪೂರ್ಣವಿರಾಮ ಚಿಹ್ನೆ ಹಾಕಬಹುದಾದ ಎರಡು ವಾಕ್ಯಗಳನ್ನು ರಚಿಸಿ ತರಗತಿಯಲ್ಲಿ ಹಂಚಿಕೊಳ್ಳಿ.

ಉದಾ: *ಈ ಮುದ್ದು ಹಕ್ಕಿಗೆ ಎರಡು ಕಾಲುಗಳಿವೆ.*



ಆ) 'ಮೋಡದ ನಾಡಿನ ಬಾಗಿಲಿಗೆ!' – ಎಂಬಲ್ಲಿ ಕವಿ ಆಶ್ಚರ್ಯಸೂಚಕವನ್ನು ಬಳಸಿರುವುದನ್ನು ಗಮನಿಸಿ. ಹೀಗೆಯೇ ಕೆಳಗಿನ ವಾಕ್ಯಗಳಿಗೆ ಸರಿಯಾದ ಲೇಖನ ಚಿಹ್ನೆಗಳನ್ನು ಹಾಕಿರಿ.

ಇದು ಎಷ್ಟು ಅದ್ಭುತವಾದ ಕಟ್ಟಡ

ಅಯ್ಯೋ ಇದೇಕೆ ಹೀಗಾಯಿತು

ಇ) ಕೆಳಗಿನ ವಾಕ್ಯಗಳಿಗೆ ಸರಿಯಾದ ಸ್ಥಳದಲ್ಲಿ ಸೂಕ್ತ ಲೇಖನ ಚಿಹ್ನೆ ಹಾಕಿರಿ.

೧. ಉಣ್ಣಲು ಅಕ್ಕಿ ಬೇಡವೇ

೨. ವರುಣತೀರ್ಥ ಅಂದೆನಲ್ಲ ಅದೇನು ಗೊತ್ತೇ

೩. ನಮ್ಮ ಊರಿಗೇ ಬಂದು ಇರುವ ಮನಸ್ಸಾದೀತು

ಬಾಲ್ಯದ ನೆನಪು ಬಾಡದು

*****

೭. ನೆನಪಿದೆಯೆ ನಿನಗೆ?

– ಡಾ॥ ಜಿ.ಎಸ್. ಶಿವರುದ್ರಪ್ಪ

ಪ್ರವೇಶ: ಪ್ರತಿಯೊಬ್ಬರೂ ಬೆಳೆಯುತ್ತಾ ಹೋದಂತೆ ತಮ್ಮ ತಮ್ಮ ಬಾಲ್ಯಜೀವನವನ್ನು ನೆನಪಿಸಿಕೊಳ್ಳಲು ಇಷ್ಟಪಡುತ್ತಾರೆ. ಅದು ತುಂಬಾ ಸವಿಯಾದ ನೆನಪಾಗಿರುತ್ತದೆ. ಇಲ್ಲಿ ಕವನದ ನಾಯಕ ತನ್ನ ಗೆಳತಿಯೊಡನೆ ಬಾಲ್ಯದಲ್ಲಿ ಕಳೆದ ಸವಿಯಾದ ಘಟನೆಗಳನ್ನು ನೆನಪಿಸಿಕೊಂಡು ಅವು ಮರುಕಳಿಸಬೇಕೆಂದು ಆಶಿಸುತ್ತಾನೆ.

ನಾವಿಬ್ಬರೂ ಅಂದು
ಹೊಳೆಯ ದಡದಲಿ ನಿಂದು
ಮರಳುಮನೆಗಳ ಕಟ್ಟಿ
ಆಟವಾಡಿದ ದಿವಸ
ನೆನಪಿದೆಯೆ ನಿನಗೆ?

ಮುಂಗಾರುಮಳೆ ಹೊಯ್ದು
ನಾವಿಬ್ಬರೂ ತೊಯ್ದು–
ನಿಂತಾಗ ಮರಳಮನೆ
ಕೊಚ್ಚಿಹೋದಾ ದಿವಸ
ನೆನಪಿದೆಯೆ ನಿನಗೆ?



ಈ ಮರಳು ನನಗೆಂದು
ಆ ಮರಳು ತನಗೆಂದು
ಹೊಡೆದಾಡಿ ಜತೆ ಬಿಟ್ಟು
ಆಟವಾಡಿದ ದಿವಸ
ನೆನಪಿದೆಯೆ ನಿನಗೆ?



ಮರುದಿವಸ ಒಂದಾಗಿ
ಮರಳುಮನೆಗಳ ಕಟ್ಟಿ
ಕೈಯ್ಯ ಚಪ್ಪಳೆ ತಟ್ಟಿ
ಹಾಡಿಕುಣಿದಾ ದಿವಸ
ನೆನಪಿದೆಯೆ ನಿನಗೆ?

ಅಂದು ಹರಿದಾ ಹೊಳೆಯೆ
ಇಂದಿಗೂ ಹರಿಯುತಿದೆ:
ಬಾ ಗೆಳತಿ ಮತ್ತೊಮ್ಮೆ ಆಟವಾಡೋಣ,
ಬಾಲ್ಯದುದ್ಯಾನವನು ಮರಳಿ ಕಟ್ಟೋಣ!

ಕೃತಿಕಾರರ ಪರಿಚಯ :



ರಾಷ್ಟ್ರಕವಿ ಡಾ॥ ಜಿ.ಎಸ್. ಶಿವರುದ್ರಪ್ಪನವರು ೧೯೨೬ ನೇ ಇಸವಿ ಫೆಬ್ರವರಿ ೭ನೇ ತಾರೀಖು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರಿನಲ್ಲಿ ಜನಿಸಿದರು. ಇವರು ಮೈಸೂರು, ಬೆಂಗಳೂರು ಮತ್ತು ಉಸ್ಮಾನಿಯ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕರಾಗಿ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸಿರುತ್ತಾರೆ. 'ಸಾಮಗಾನ', 'ಪ್ರೀತಿ ಇಲ್ಲದ ಮೇಲೆ', 'ಕಾರ್ತೀಕ', 'ದೀಪದಹೆಜ್ಜೆ', 'ದೇವಶಿಲ್ಪಿ' 'ಚೆಲುವು ಒಲವು', 'ವಿಮರ್ಶೆಯ ಪೂರ್ವ ಪಶ್ಚಿಮ', 'ಸೌಂದರ್ಯ ಸಮೀಕ್ಷೆ', 'ಕಾವ್ಯಾರ್ಥ ಚಿಂತನ', 'ಗಂಗೆಯ ಶಿಖರದಲ್ಲಿ' ಮೊದಲಾದವು ಇವರ ಪ್ರಮುಖ ಕೃತಿಗಳಾಗಿವೆ. ಇವರು **ರಾಷ್ಟ್ರಕವಿ** ಪುರಸ್ಕಾರವನ್ನು ಪಡೆದಿದ್ದು, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, **ನೃಪತುಂಗ** ಪ್ರಶಸ್ತಿ ಹೀಗೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಡಾ॥ ಜಿ.ಎಸ್. ಶಿವರುದ್ರಪ್ಪ ಅವರು ಡಿಸೆಂಬರ್ ೨೩. ೨೦೧೩ರಲ್ಲಿ ನಿಧನರಾದರು.

'ನೆನಪಿದೆಯೆ ನಿನಗೆ' ಕವನವನ್ನು ಇವರ 'ಪ್ರೀತಿ ಇಲ್ಲದ ಮೇಲೆ' ಎಂಬ ಕವನಸಂಕಲನದಿಂದ ಆರಿಸಲಾಗಿದೆ.

ಪದಗಳ ಅರ್ಥ:

ಉದ್ಯಾನ – ತೋಟ;	ಮರಳಿ – ಮತ್ತೆ, ಪುನಃ;
ಜತೆ ಬಿಡು – ಸಂಗ ಬಿಡು;	ಮರಳು – ಉಸುಕು;
ತೊಯ್ದು – ನೀರಿನಿಂದ ನೆನೆದು;	ಹೊಳೆ – ಹರಿಯುವ ನೀರು, ನದಿ.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಹೊಳೆಯ ದಂಡೆಯ ಮೇಲೆ ಕವನದ ನಾಯಕನು ಗೆಳತಿಯೊಡನೆ ಆಡಿದ ಆಟ ಯಾವುದು?

೨. ಕವನದಲ್ಲಿ ಹೇಳಿರುವಂತೆ ಕವನದ ನಾಯಕನು ಗೆಳತಿಯೊಡನೆ ಕಟ್ಟಿದ ಮರಳುಮನೆ ಕೊಚ್ಚಿಹೋಗಿದ್ದು ಏಕೆ?

೩. ಬಾಲ್ಯದಲ್ಲಿ ಕವನದ ನಾಯಕನು ಗೆಳತಿಯೊಡನೆ ಜತೆ ಬಿಡಲು ಕಾರಣವಾಗುತ್ತಿದ್ದ ಸನ್ನಿವೇಶ ಯಾವುದು?

೪. ಜತೆ ಬಿಟ್ಟ ಕವನದ ನಾಯಕನು ಮತ್ತು ಗೆಳತಿ, ಮರುದಿನ ಒಂದಾಗಿ ಹೇಗೆ ಸಂಭ್ರಮಿಸುತ್ತಿದ್ದರು?

೫. ಕವನದ ನಾಯಕನು ಗೆಳತಿಯನ್ನು ಮತ್ತೊಮ್ಮೆ ಬಾ ಎಂದು ಏಕೆ ಕರೆಯುತ್ತಿದ್ದಾರೆ?

೬. 'ನೆನಪಿದೆಯೆ ನಿನಗೆ?' ಕವಿತೆಯ ಆಕರ ಕೃತಿ ಯಾವುದು?

ಆ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಕವನದ ನಾಯಕನು ಗೆಳತಿಯೊಡನೆ ಕಟ್ಟಿದ ಮರಳಿನ ಮನೆ ಕೊಚ್ಚಿಹೋದ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ?

೨. ಕವನದ ನಾಯಕನು ಮತ್ತು ಗೆಳತಿಯು ಹೊಳೆಯ ದಂಡೆಯಲ್ಲಿ ಆಟವಾಡುತ್ತಿದ್ದ ಬಗೆಯನ್ನು ಕುರಿತು ಬರೆಯಿರಿ.

೩. ಬಾಲ್ಯದ ಉದ್ಯಾನವನ್ನು ಹೇಗೆ ಕಟ್ಟಬೇಕೆಂದು ಕವನದ ನಾಯಕನು ಬಯಸಿದ್ದಾರೆ?

ಇ) ಈ ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಕವಿಯು 'ನೆನಪಿದೆಯೆ ನಿನಗೆ?' ಕವನದ ಮೂಲಕ ಕವನದ ನಾಯಕನ ಬಾಲ್ಯದ ನೆನಪುಗಳನ್ನು ಹೇಗೆ ಕಟ್ಟಿಕೊಟ್ಟಿದ್ದಾರೆ?

ಭಾಷಾಭ್ಯಾಸ

ಅ) ಬಿಡಿಸಿ ಬರೆದಿರುವ ಪದಗಳನ್ನು ಸೇರಿಸಿ ಬರೆಯಿರಿ:

೧. ಕೊಚ್ಚಿಹೋದ + ಆ ದಿವಸ

೨. ಹೊಡೆದು + ಆಡಿ

೩. ನಾವು + ಇಬ್ಬರೂ

೪. ಆಟ + ಆಡಿದ

೫. ಆಟ + ಆಡೋಣ

೬. ಬಾಲ್ಯದ + ಉದ್ಯಾನ

ಭಾಷಾ ಚಟುವಟಿಕೆ

ಅ) ಕೆಳಗಿನ ಪದಗಳನ್ನು ಓದಿಕೊಂಡು ಬರೆಯಿರಿ:

ಕೊಚ್ಚಿಹೋದಾ ದಿವಸ, ಬಾಲ್ಯದುದ್ಯಾನ

ಆ) ಬಿಟ್ಟಿರುವ ಸಾಲುಗಳನ್ನು ಸೇರಿಸಿ ನಿಮ್ಮ ಸಹಪಾಠಿಗಳೆದುರು ಗಟ್ಟಿಯಾಗಿ ಓದಿ ಬರೆಯಿರಿ:

೧. ಮರಳು ಮನೆಗಳ ಕಟ್ಟಿ

....

ನೆನಪಿದೆಯೆ ನಿನಗೆ?

೨. ನಿಂತಾಗ ಮರಳ ಮನೆ

....

ನೆನಪಿದೆಯೆ ನಿನಗೆ?

೩. ಹೊಡೆದಾಡಿ ಜತೆಬಿಟ್ಟು

....

ನೆನಪಿದೆಯೆ ನಿನಗೆ?

೪. ಕೈಯ ಚಪ್ಪಳೆ ತಟ್ಟಿ

....

ನೆನಪಿದೆಯೆ ನಿನಗೆ?

ಇ) ನೀವು ಬಾಲ್ಯದಲ್ಲಿ ಆಡಿದ ಆಟಗಳ ಬಗೆಗೆ ಐದಾರು ವಾಕ್ಯಗಳಲ್ಲಿ ಟಿಪ್ಪಣಿ ಬರೆಯಿರಿ.

ಈ) ಕೆಳಗಿನ ಚಿತ್ರಗಳನ್ನು ಆಧರಿಸಿ ಸೂಚನೆಗೆ ಅನುಗುಣವಾಗಿ ಬರೆಯಿರಿ.





೧) ಎರಡೂ ಚಿತ್ರಗಳಲ್ಲೂ ಆಡುತ್ತಿರುವ ಎಲ್ಲಾ ಮಕ್ಕಳಿಗೂ ನಿಮಗೆ ಇಷ್ಟವಾದ ಹೆಸರನ್ನು ಇಡಿರಿ.

೨) ನಾಲ್ಕೂ ಮಕ್ಕಳಿಗೂ ಎರಡೆರಡು ಸಂಭಾಷಣೆಗಳನ್ನು ಬರೆಯಿರಿ.

ಉ) ನಿಮಗೆ ಚಪ್ಪಾಳೆ ಹಾಕಬೇಕೆನಿಸಿದ ಸನ್ನಿವೇಶವನ್ನು ನೆನಪಿಸಿಕೊಂಡು, ಐದಾರು ವಾಕ್ಯಗಳಲ್ಲಿ ಬರೆಯಿರಿ.

ಅಲಂಕಾರ

ಅಲಂಕಾರವೆಂದರೆ ಸೌಂದರ್ಯವನ್ನು ಹೆಚ್ಚಿಸುವುದು. ಮನುಷ್ಯನು ಚೆನ್ನಾಗಿ ಕಾಣುವ ಉದ್ದೇಶದಿಂದ ಒಡವೆ, ವಸ್ತ್ರ, ಇತ್ಯಾದಿಗಳನ್ನು ಧರಿಸಿಕೊಳ್ಳುತ್ತಾನೆ. ಈ ಅಲಂಕಾರದಿಂದ ಜನರು ಆಕರ್ಷಿತರಾಗುತ್ತಾರೆ. ಕಟ್ಟಡ ಅಥವಾ ಗೋಡೆಯ ಸೌಂದರ್ಯವನ್ನು ಹೆಚ್ಚಿಸಲು ಸುಂದರ ವಸ್ತುಗಳಿಂದ ಅಲಂಕರಿಸುತ್ತೇವೆ. ಹಾಗೆಯೇ ಮಾತನಾಡುವಾಗಲೂ ಕೇಳುವವರಿಗೆ ಹಿತವಾಗುವಂತೆ ಚಮತ್ಕಾರದ ರೀತಿಯಲ್ಲಿ ಮಾತನಾಡುವುದನ್ನು ಅಲಂಕಾರ ಎನ್ನುತ್ತಾರೆ. ವಿಶಾಲ ಅರ್ಥದಲ್ಲಿ ಕಾವ್ಯದ ರಮಣೀಯತೆ ಅಥವಾ ಅದರ ಸೌಂದರ್ಯಕ್ಕೆ ಕಾರಣವಾಗುವ 'ಶಬ್ದ' ಮತ್ತು 'ಅರ್ಥ'ಗಳ ವೈಚಿತ್ರವನ್ನು "ಅಲಂಕಾರ" ಎನ್ನಬಹುದು.

ಅಲಂಕಾರವನ್ನು ಮುಖ್ಯವಾಗಿ ಎರಡು ವಿಧಗಳಾಗಿ ವಿಂಗಡಿಸಲಾಗಿದೆ.

೧. ಶಬ್ದಾಲಂಕಾರಗಳು : ಶಬ್ದಗಳ ಚಮತ್ಕಾರ ದಿಂದ ಕಾವ್ಯದ ಸೊಬಗು ಹೆಚ್ಚುವಂತೆ ರಚಿಸಿದ್ದರೆ, ಅದನ್ನು 'ಶಬ್ದಾಲಂಕಾರ'ಗಳೆಂದು ಕರೆಯುವರು.

೨. ಅರ್ಥಾಲಂಕಾರಗಳು : ಕವಿಗಳು ಅರ್ಥ ಚಮತ್ಕಾರದಿಂದ ಕಾವ್ಯದ ಸೊಬಗನ್ನು ಹೆಚ್ಚಿಸಿದರೆ ಅದನ್ನು 'ಅರ್ಥಾಲಂಕಾರ'ಗಳೆಂದು ಕರೆಯುವರು.

ಬಾಲ್ಯದ ನೆನಪಿನ ಸವಿ ಬರುವನು ಅರಸುತ ರವಿ

*****

೮. ಚಿನ್ನದ ಗೊಂಬೆಗಳು

ನಲಿ–ಕಲಿ ಸಾಹಿತ್ಯ

ಪ್ರವೇಶ: ರಾಜಮಹಾರಾಜರ ಆಸ್ಥಾನದಲ್ಲಿ ಕವಿಗಳು, ಪಂಡಿತರು ಹಾಗೂ ಕಲಾವಿದರು ತಮ್ಮ ಜಾಣ್ಮೆಯನ್ನು ಮೆರೆದು ರಾಜರಿಂದ ಮೆಚ್ಚುಗೆಯನ್ನು ಪಡೆದ ಉದಾಹರಣೆಗಳು ಇತಿಹಾಸದಲ್ಲಿ ಸಾಕಷ್ಟು ಸಿಗುತ್ತವೆ. ಅಂತಹವರಲ್ಲಿ ಕಾಳಿದಾಸನೂ ಒಬ್ಬ ಎಂಬ ಪ್ರತೀತಿ ಇದೆ. ರಾಜ ವಿಕ್ರಮಾದಿತ್ಯನ ಆಸ್ಥಾನಕ್ಕೆ ಬಂದ ಚಮತ್ಕಾರದ ಗೊಂಬೆಗಳ ರಹಸ್ಯವನ್ನು ಭೇದಿಸಿದ ಕಾಳಿದಾಸನ ಜಾಣ್ಮೆ ಈ ನಾಟಕಭಾಗದಲ್ಲಿ ಪ್ರಕಟವಾಗಿದೆ.

(ವಿಕ್ರಮಾದಿತ್ಯನ ಆಸ್ಥಾನ ಮಂತ್ರಿಗಳು, ದಂಡನಾಯಕರು, ಪಂಡಿತರು, ಆಸ್ಥಾನ ವಿದ್ವಾಂಸರು ತಮ್ಮ ತಮ್ಮ ಸ್ಥಾನದಲ್ಲಿ ಕುಳಿತಿದ್ದಾರೆ. ಇವರಲ್ಲಿ ಮಹಾಕವಿಯಾದ ಕಾಳಿದಾಸನೂ ಇದ್ದಾನೆ. ಬೊಂಬೆ ತಯಾರಕನೊಬ್ಬ ಮೂರು ಬೊಂಬೆಗಳನ್ನು ತಂದು ರಾಜನಿಗೆ ತೋರಿಸಿ ಹೇಳುತ್ತಿದ್ದಾನೆ.)

ಬೊಂಬೆ ತಯಾರಕ : ಮಹಾರಾಜರೇ, ಈ ಬೊಂಬೆಗಳನ್ನು ಕೊಂಡುಕೊಂಡು ನನ್ನನ್ನು ಕಾಪಾಡಬೇಕು.

ರಾಜ : (ಬೊಂಬೆಗಳನ್ನು ಗಮನಿಸಿ) ಬೊಂಬೆಗಳು ಚೆನ್ನಾಗಿವೆ. ಇವುಗಳ ಬೆಲೆ ಏನು?

ಬೊಂಬೆ ತಯಾರಕ : ಪ್ರಭು, ಇವು ಸಾಧಾರಣ ಗೊಂಬೆಗಳಲ್ಲ, ವಿಶಿಷ್ಟವಾದ ಬೊಂಬೆಗಳು. ಇವುಗಳ ವೈಶಿಷ್ಟ್ಯವನ್ನು ತಮಗೆ ತಿಳಿಸುತ್ತೇನೆ. ನಂತರ ಬೊಂಬೆಗಳ ಬೆಲೆಗಳನ್ನು ನಿರ್ಧರಿಸಬಹುದು.

ರಾಜ : ಓಹೋ ಹಾಗೇನು? ಆಯಿತು, ಇವುಗಳ ವೈಶಿಷ್ಟ್ಯವನ್ನು ತಿಳಿಸು.

ಬೊಂಬೆ ತಯಾರಕ : (ದಾರವೊಂದನ್ನು ಕೈಯಲ್ಲಿ ಹಿಡಿದು) ನೋಡಿ ಪ್ರಭು, ಈ ದಾರವನ್ನು ಮೊದಲ ಬೊಂಬೆಯ ಒಂದು ಕಿವಿಯಲ್ಲಿ ಹಾಕುತ್ತೇನೆ. ದಾರವು ಮತ್ತೊಂದು ಕಿವಿಯಲ್ಲಿ ಹೊರಗೆ ಬರುತ್ತದೆ (ತೋರಿಸುವನು).

ರಾಜ : ಓಹೋ! ಎರಡನೆಯದರ ವೈಶಿಷ್ಟ್ಯವೇನು?

ಬೊಂಬೆ ತಯಾರಕ : ಈ ಬೊಂಬೆಯ ಕಿವಿಯಲ್ಲಿ ದಾರ ಹಾಕುತ್ತೇನೆ...ಅದು ಬಾಯಿಯಿಂದ ಹೊರಕ್ಕೆ ಬರುತ್ತದೆ. ನೋಡಿರಿ (ತೋರಿಸುವನು)

ರಾಜ : ಭೇಷ್! ಮೂರನೆಯದರ ವೈಶಿಷ್ಟ್ಯವೇನು?

ಬೊಂಬೆ ತಯಾರಕ : ಪ್ರಭು, ಈ ಬೊಂಬೆಯ ಕಿವಿಯಲ್ಲಿ ದಾರ ಹಾಕುತ್ತೇನೆ. ಈ ದಾರವು ಇನ್ನೊಂದು ಕಿವಿಯಿಂದಾಗಲೀ, ಬಾಯಿಯಿಂದಾಗಲೀ ಹೊರಬರುವುದಿಲ್ಲ. ಒಳಗೇ ಸುತ್ತಿಕೊಳ್ಳುತ್ತದೆ.

ರಾಜ : ನಿನ್ನ ಬೊಂಬೆಗಳು ವಿಚಿತ್ರವಾಗಿವೆ. ನಮ್ಮ ಪಂಡಿತರು ಇವುಗಳ ಬೆಲೆ ನಿರ್ಧರಿಸುತ್ತಾರೆ.

ಪಂಡಿತರು	:	ಪ್ರಭು, ಬೊಂಬೆಗಳನ್ನು ಚಿನ್ನದಿಂದ ತಯಾರಿಸಲಾಗಿದೆ. ನವರತ್ನಗಳನ್ನು ಕೂಡಿಸಲಾಗಿದೆ. ಇವುಗಳಿಗೆ ಎರಡು ಸಾವಿರ ವರಹಗಳನ್ನು ನೀಡಬಹುದು.
ಬೊಂಬೆ ತಯಾರಕ	:	ಪ್ರಭು, ಈ ಬೆಲೆ ಬಹಳ ಕಡಿಮೆಯಾಯಿತು.
ರಾಜ	:	ಹಾಗಾದರೆ ಈ ಬೊಂಬೆಗಳಿಗೆ ನೀನು ಬಯಸುವ ಬೆಲೆ ಎಷ್ಟು?
ಬೊಂಬೆ ತಯಾರಕ	:	ಮೊದಲ ಬೊಂಬೆಗೆ ಒಂದು ಕಾಸು. ಎರಡನೆಯದಕ್ಕೆ ಸಾವಿರ ವರಹ. ಮೂರನೆಯದಕ್ಕೆ ಕಷ್ಟ, ಆದರೂ ನೂರು ಸಾವಿರ ವರಹ.



ರಾಜ	:	ಸ್ವಲ್ಪ ವಿಶಿಷ್ಟತೆಯ ಬೊಂಬೆ ಎಂದರೆ ಇಷ್ಟೊಂದು ಬೆಲೆಯೇ? ಇದು ದುರಾಸೆಯಾಯಿತು.
ಕಾಳಿದಾಸ	:	ಪ್ರಭುಗಳು ಮನ್ನಿಸಬೇಕು. ಬೊಂಬೆಗಳಿಗೆ ಬಳಸಿದ ಚಿನ್ನ ನವರತ್ನಗಳಿಗೆ ಇಲ್ಲಿ ಬೆಲೆಯಿಲ್ಲ. ವೈಶಿಷ್ಟ್ಯಕ್ಕೆ ಬೆಲೆ. ದಯವಿಟ್ಟು ರಾಜಸಭೆ ಅದನ್ನು ಅರ್ಥಮಾಡಿಕೊಳ್ಳಬೇಕು. ನಂತರ ಬೆಲೆಯನ್ನು ನಿರ್ಧರಿಸಬೇಕು.
ರಾಜ	:	ಅದೇನೆಂದು ವಿವರಿಸಿ ಹೇಳು ಕಾಳಿದಾಸ.
ಕಾಳಿದಾಸ	:	ಪ್ರಭು, ಮೊದಲ ಬೊಂಬೆಯಲ್ಲಿ ಒಂದು ಅರ್ಥವಿದೆ. ಗುರುಹಿರಿಯರು ಹೇಳಿದ ಜ್ಞಾನದ ಮಾತುಗಳನ್ನು ಒಂದು ಕಿವಿಯಲ್ಲಿ ಕೇಳಿ ಮತ್ತೊಂದು ಕಿವಿಯಲ್ಲಿ ಬಿಡುವ ಜನರಂತೆ, ಈ ಬೊಂಬೆ. ಇಂಥ ಜನರಿಗೆ ಒಂದು ಕಾಸಿನ ಬೆಲೆ.
ರಾಜ	:	ಸೊಗಸಾಗಿದೆ, ಎರಡನೆಯದು?
ಕಾಳಿದಾಸ	:	ಕಿವಿಯಿಂದ ಕೇಳಿದ ಮಾತುಗಳನ್ನು ಇತರರಿಗೆ ಹೇಳುವವರು ಮೊದಲಿಗಿಂತ ಉತ್ತಮರು.

ರಾಜ	:	ಹಾಂ! ಸ್ವಾರಸ್ಯಕರವಾಗಿದೆ.
ಕಾಳಿದಾಸ	:	ಇನ್ನು ಮೂರನೆಯದರ ವೈಶಿಷ್ಟ್ಯ. ತಾನು ಕೇಳಿದ್ದನ್ನು ತಲೆಯಲ್ಲಿಟ್ಟುಕೊಂಡು ಅದರಂತೆ ನಡೆಯುವವನು. ಇಂತಹವರು ಅತ್ಯುತ್ತಮರು.
ರಾಜ	:	ಭಲೇ ಕಾಳಿದಾಸ! ಬಹಳ ಚೆನ್ನಾಗಿ ಅರ್ಥಮಾಡಿಸಿದೆ.
ಕಾಳಿದಾಸ	:	ಈ ಬೊಂಬೆ ತಯಾರಕ ಸಾಮಾನ್ಯ ಶಿಲ್ಪಿಯಲ್ಲ. ಆದ್ದರಿಂದ ಅವನು ಕೇಳಿದ ಹಣ ನೀಡಿ ಸನ್ಮಾನಿಸೋಣ.
ಬೊಂಬೆ ತಯಾರಕ	:	ಧನ್ಯವಾದ ಪ್ರಭುಗಳೇ! ಮಹಾಕವಿ ಕಾಳಿದಾಸನ ವಿದ್ವತ್ತಿನ ಮುಂದೆ ನಾನು ಸೋತೆ. ನನಗೆ ಹಣಬೇಡ. ತಮ್ಮ ರಾಜ್ಯದಲ್ಲಿ ಮೂರನೆಯ ಬೊಂಬೆಯಂತಹ ಜನಗಳಿರಲಿ ಎಂಬುದೇ ನನ್ನ ಆಸೆ. ನನ್ನ ಪರಿಶ್ರಮ ಇಂದು ಸಾರ್ಥಕವಾಯಿತು. ಇದೇ ನನಗೆ ಪ್ರತಿಫಲ ನಾನಿನ್ನು ಹೊರಡುವೆನು.

ಪದಗಳ ಅರ್ಥ:

ಕಾಸು–ನಾಣ್ಯ;

ಜ್ಞಾನದ ಮಾತು–ವಿವೇಕದ ಮಾತು;

ಪರಿಶ್ರಮ–ವಿಶೇಷವಾದ ಶ್ರಮ;

ಪ್ರತಿಫಲ–ಮಾಡಿದ ಕೆಲಸಕ್ಕೆ ಸಿಗುವ ಫಲ;

ವರಹ–ಒಂದು ಚಿನ್ನದ ನಾಣ್ಯ;

ವಿಶಿಷ್ಟ–ವಿಶೇಷವಾದ;

ವಿಚಿತ್ರ–ಸಾಮಾನ್ಯವಲ್ಲದ;

ಸಾಧಾರಣ–ಸಾಮಾನ್ಯವಾದ;

ಸಾರ್ಥಕ–ಪ್ರಯೋಜನಕರ;

ಸೊಗಸು–ಸುಂದರ.

ಟಿಪ್ಪಣಿ:

ನವರತ್ನಗಳು: ಒಂಬತ್ತು ಅನರ್ಘ್ಯ ರತ್ನಗಳು – ವಜ್ರ, ವೈಡೂರ್ಯ, ಮರಕತ, ಪುಷ್ಯರಾಗ, ಮುತ್ತು, ನೀಲ, ಮಾಣಿಕ್ಯ, ಗೋಮೇಧಿಕ ಮತ್ತು ಹವಳ.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ವಿಕ್ರಮಾದಿತ್ಯನ ಆಸ್ಥಾನದಲ್ಲಿ ಯಾರು ಯಾರು ಇದ್ದರು?

೨. ವಿಕ್ರಮಾದಿತ್ಯನ ಆಸ್ಥಾನದಲ್ಲಿ ರಾಜನಿಗೆ ಅಚ್ಚುಮೆಚ್ಚಾಗಿದ್ದವನು ಯಾರು?

೩. ವಿಕ್ರಮಾದಿತ್ಯನ ಆಸ್ಥಾನಕ್ಕೆ ಬಂದಿದ್ದವನು ಯಾರು?

೪. ವಿಕ್ರಮಾದಿತ್ಯನು ಬೊಂಬೆಗಳ ಬೆಲೆಯನ್ನು ಪಂಡಿತರು ನಿರ್ಧರಿಸುತ್ತಾರೆಂದು ಏಕೆ ಹೇಳಿದನು?

೫. ವಿಕ್ರಮಾದಿತ್ಯನ ಆಸ್ಥಾನಕ್ಕೆ ತಂದಿದ್ದ ಬೊಂಬೆಗಳನ್ನು ಯಾವುದರಿಂದ ಮಾಡಲಾಗಿತ್ತು?

೬. ಮೊದಲನೆಯ ಬೊಂಬೆಗೆ ಒಂದೇ ಕಾಸಿನಷ್ಟೇ ಬೆಲೆ ಏಕೆ?

೭. ಮೊದಲನೆಯ ಬೊಂಬೆಗಿಂತ ಎರಡನೆಯ ಬೊಂಬೆಗೆ ಹೆಚ್ಚು ಬೆಲೆ ಏಕೆ?

ಆ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಮೂರನೆಯ ಬೊಂಬೆಯು ಅತ್ಯುತ್ತಮವಾದುದು ಏಕೆ?

೨. ಬೊಂಬೆ ತಯಾರಿಕರು ಪಂಡಿತರು ನಿಗದಿಪಡಿಸಿದ ಬೆಲೆ ಕಡಿಮೆಯಾಯಿತೆಂದು ಏಕೆ ಹೇಳಿದನು?

ಇ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಆಸ್ಥಾನಕ್ಕೆ ತಂದಿದ್ದ ಮೂರು ಬೊಂಬೆಗಳ ವೈಶಿಷ್ಟ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೨. ಬೊಂಬೆ ತಯಾರಕನು ನಾನು ಸೋತೆ, ನನ್ನ ಪರಿಶ್ರಮ ಸಾರ್ಥಕವಾಯಿತೆಂದು ಏಕೆ ಹೇಳಿದನು?

ಈ) ಕೆಳಗೆ ಕೊಟ್ಟಿರುವ ಸಾಲುಗಳನ್ನು ಯಾರು, ಯಾರಿಗೆ ಹೇಳಿದರು ಎಂಬುದನ್ನು ಸ್ವಾರಸ್ಯ ಸಹಿತ ವಿವರಿಸಿ.

೧. "ಪ್ರಭು, ಈ ಬೆಲೆ ಬಹಳ ಕಡಿಮೆಯಾಯಿತು"

೨. "ಚಿನ್ನ ನವರತ್ನಗಳಿಗೆ ಇಲ್ಲಿ ಬೆಲೆಯಿಲ್ಲ. ವೈಶಿಷ್ಟ್ಯಕ್ಕೆ ಬೆಲೆ"

೩. "ತಮ್ಮ ರಾಜ್ಯದಲ್ಲಿ ಮೂರನೆಯ ಬೊಂಬೆಯಂತಹ ಜನಗಳಿರಲಿ ಎಂಬುದೇ ನನ್ನ ಆಸೆ"

ಭಾಷಾಭ್ಯಾಸ

ಅ) ಕೆಳಗಿನ ಪದಗಳನ್ನು ಬಿಡಿಸಿ ಹೇಳಿ, ಬರೆಯಿರಿ.

ತಲೆಯಲ್ಲಿಟ್ಟುಕೊಂಡು, ಅತ್ಯುತ್ತಮ, ಜನಗಳಿರಲಿ, ಬೊಂಬೆಯಂತಹ, ಸಾರ್ಥಕವಾಯಿತು.

ಆ) ಕೆಳಗಿನ ಪದಗಳಿಗೆ ಅನ್ಯಲಿಂಗ ಪದವನ್ನು ಬರೆಯಿರಿ.

ಕವಿ, ರಾಜ, ಮಗಳು, ಸೇವಕ, ಹುಡುಗ, ಗಂಡುಮಗು, ರಾಜಕುಮಾರ.

ಇ) ಕೆಳಗಿನ ತತ್ಸಮಗಳಿಗೆ ತದ್ಭವಗಳನ್ನು ತದ್ಭವಗಳಿಗೆ ತತ್ಸಮಗಳನ್ನು ಬರೆಯಿರಿ.


ರಾಯ, ರತ್ನ, ಸಾವಿರ, ಕಬ್ಬಿಗ.

ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಒಳಗೆ, ಕಡಿಮೆ, ಕಷ್ಟ, ಉತ್ತಮ, ಆಸೆ.

ಚಟುವಟಿಕೆ

ಅ) ಕೆಳಗೆ ಎರಡು ಗೊಂಬೆಗಳಿವೆ. ಅವುಗಳಿಗೆ ಹೆಸರಿಟ್ಟು ಅವುಗಳ ನಡುವಿನ ಸಂಭಾಷಣೆಯನ್ನು ಕಲ್ಪಿಸಿ ಬರೆಯಿರಿ.



ಆ) 'ಚಿನ್ನದ ಗೊಂಬೆಗಳು' ನಾಟಕದ ಪಾತ್ರಗಳನ್ನು ಹಂಚಿಕೊಂಡು ಅಭಿನಯಿಸಿರಿ.

ಇ) ಮಕ್ಕಳ ನಾಟಕಗಳನ್ನು ಸಂಗ್ರಹಿಸಿ ಓದಿರಿ.

ವ್ಯಾಕರಣ

ವಿಭಕ್ತಿ ಪ್ರತ್ಯಯಗಳು

ನಾಮಪ್ರಕೃತಿಗಳ ಮುಂದೆ ಸೇರಿ, ಬೇರೆಬೇರೆ ಅರ್ಥವನ್ನುಂಟು ಮಾಡುವ ಉ, ಅನ್ನು, ಇಂದ ಗೆ, ಕೆ ದೆಸೆಯಿಂದ, ಅ, ಅಲ್ಲಿ, ಇತ್ಯಾದಿಗಳಿಗೆ ವಿಭಕ್ತಿ ಪ್ರತ್ಯಯಗಳು ಎನ್ನುವರು.

ನಾಮಪ್ರಕೃತಿ: ನಾಮಪದದ ಮೂಲ ರೂಪವನ್ನು ನಾಮಪ್ರಕೃತಿ ಎನ್ನುವರು.

ವಿಭಕ್ತಿ ಪ್ರತ್ಯಯಗಳು

ಕ್ರ.ಸಂ.	ವಿಭಕ್ತಿ ಹೆಸರು	ನಾಮಪ್ರಕೃತಿ	ವಿಭಕ್ತಿ ಪ್ರತ್ಯಯ	ನಾಮಪದ
೧	ಪ್ರಥಮಾ ವಿಭಕ್ತಿ	ಮರ	ಉ	ಮರವು
೨	ದ್ವಿತೀಯಾ ವಿಭಕ್ತಿ	ಮರ	ಅನ್ನು	ಮರವನ್ನು
೩	ತೃತೀಯಾ ವಿಭಕ್ತಿ	ಮರ	ಇಂದ	ಮರದಿಂದ
೪	ಚತುರ್ಥೀ ವಿಭಕ್ತಿ	ಮರ	ಗೆ, ಇಗೆ, ಕ್ಕೆ	ಮರಕ್ಕೆ
೫	ಪಂಚಮೀ ವಿಭಕ್ತಿ	ಮರ	ದೆಸೆಯಿಂದ	ಮರದ ದೆಸೆಯಿಂದ
೬	ಷಷ್ಠೀ ವಿಭಕ್ತಿ	ಮರ	ಅ	ಮರದ
೭	ಸಪ್ತಮೀ ವಿಭಕ್ತಿ	ಮರ	ಅಲ್ಲಿ	ಮರದಲ್ಲಿ

ಲಿಂಗಗಳು

ಭಾಷೆಯಲ್ಲಿ ಲಿಂಗ ಅತಿ ಮುಖ್ಯವಾದ ಅಂಶ. ನಾವು ಯಾವುದೇ ಪದವನ್ನು ಬಳಸಿದಾಗ ನಮ್ಮ ಮನಸ್ಸಿಗೆ ಅದು ಗಂಡಸೆಂದಾಗಲಿ, ಹೆಂಗಸೆಂದಾಗಲಿ, ಅವೆರಡೂ ಅಲ್ಲದ್ದು ಎಂದಾಗಲೀ ಅಥವಾ ಅವೆರೆಡೂ ಆಗಿರಬಹುದಾದ್ದು ಎಂದಾಗಲಿ ಅನಿಸಲೇಬೇಕು. ಈ ರೀತಿಯ ಅನಿಸಿಕೆಗಳನ್ನು ಮೂರು ರೀತಿಯಲ್ಲಿ ವಿಂಗಡಿಸುತ್ತೇವೆ. ಅವು ಯಾವುವೆಂದರೆ ಪುಲ್ಲಿಂಗ, ಸ್ತ್ರೀಲಿಂಗ, ಮತ್ತು ನಪುಂಸಕಲಿಂಗ.

ಪುಲ್ಲಿಂಗ :

ಯಾವ ಪದಪ್ರಯೋಗ ಮಾಡಿದಾಗ ನಮ್ಮ ಮನಸ್ಸಿಗೆ ಮನುಷ್ಯವಾಚಕದಲ್ಲಿ ಗಂಡಸು ಎಂಬ ಅರ್ಥ ಹೊಳೆಯುವುದೋ ಅದು ಪುಲ್ಲಿಂಗ ಎನಿಸುವುದು. ಉದಾ: ಶಂಕರಾಚಾರ್ಯ, ಮುದುಕ, ಸೋದರ, ಅಪ್ಪ, ಜಟ್ಟಿ, ದೊಡ್ಡವನು, ಕವಿ ಇತ್ಯಾದಿ.

ಸ್ತ್ರೀಲಿಂಗ :

ಯಾವ ಪದಪ್ರಯೋಗ ಮಾಡಿದಾಗ ನಮ್ಮ ಮನಸ್ಸಿಗೆ ಮನುಷ್ಯವಾಚಕದಲ್ಲಿ ಹೆಂಗಸು ಎಂಬ ಅರ್ಥ ಹೊಳೆಯುವುದೋ ಅದು ಸ್ತ್ರೀಲಿಂಗ ಎನಿಸುವುದು. ಉದಾ: ನೇತ್ರಾವತಿ, ಮುದುಕಿ, ಸೋದರಿ, ಅಮ್ಮ, ಕವಯಿತ್ರಿ, ರಾಣಿ, ಒಳ್ಳೆಯವಳು, ಅಧ್ಯಕ್ಷೆ, ಸಚಿವೆ ಇತ್ಯಾದಿ.

ನಪುಂಸಕಲಿಂಗ :

ಯಾವ ಪದಗಳನ್ನು ಪ್ರಯೋಗಮಾಡಿದಾಗ ಸ್ಪಷ್ಟವಾಗಿ ಹೆಂಗಸು ಅಥವಾ ಗಂಡಸು, ಎಂದು ವಿಭಜಿಸಲು ಸಾಧ್ಯವಾಗುವುದಿಲ್ಲವೋ ಅವೆಲ್ಲವೂ ನಪುಂಸಕಲಿಂಗ ಎನಿಸುವವು. ಉದಾ: ಮನೆ, ತೋಟ, ಆಕಳು, ಇಟ್ಟಿಗೆ, ಜಲ, ನದಿ, ಪುಸ್ತಕ, ಕುದುರೆ, ಬೆಂಕಿ ಇತ್ಯಾದಿ. (ಗಮನಿಸಿ: ಗಂಡು ಹೆಣ್ಣು ಎಂದು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಿರುವ ಮಗು, ಕುದುರೆ, ಹೋರಿ, ಹಸು, ಎಮ್ಮೆ ಇತ್ಯಾದಿ ಪದಗಳೆಲ್ಲವೂ ನಪುಂಸಕ ಲಿಂಗದಲ್ಲಿಯೇ ಬರುತ್ತವೆ.)

ಕನ್ನಡ ವ್ಯಾಕರಣದಲ್ಲಿ ಎಲ್ಲಾ ಪ್ರಾಣಿಗಳನ್ನೂ ನಪುಂಸಕ ಲಿಂಗಗಳೆಂದೇ ಪರಿಗಣಿಸಲಾಗುವುದು.

ವಚನಗಳು

ವಚನ ಎಂದರೆ ಸಂಖ್ಯೆ. ಒಂದು ವಸ್ತುವನ್ನು ಸೂಚಿಸುವ ಪದಗಳೆಲ್ಲ ಏಕವಚನದವು. ಒಂದಕ್ಕಿಂತ ಹೆಚ್ಚಾದ ವಸ್ತುಗಳೆಂದು ತಿಳಿಸುವ ಪದಗಳೆಲ್ಲ ಬಹುವಚನ ಪದಗಳು. ಬಹುವಚನವನ್ನು ಗೌರವ ಸೂಚಕವಾಗಿಯೂ ಬಳಸಲಾಗುತ್ತದೆ.

ಏಕವಚನ :

ಉದಾ: ನಾನು, ಮನೆ, ಅರಸ, ಅಣ್ಣ, ತಾಯಿ, ನೀನು.

ಬಹುವಚನ:

ಉದಾ: ನಾವು, ಮನೆಗಳು, ಅರಸರು, ಅಣ್ಣಂದಿರು, ತಾಯಂದಿರು, ನೀವು.

ಶಕ್ತಿಗಿಂತ ಯುಕ್ತಿ ಮೇಲು

*****

9. ಮಳೆಯ ಹಾಡು

– ಕೆ.ಆರ್. ಸಂಧ್ಯಾರೆಡ್ಡಿ

ಪ್ರವೇಶ: ಮಳೆ ಎಂದರೆ ಎಲ್ಲರಿಗೂ ಅತಿ ಪ್ರೀತಿ. ಅನೇಕ ಕವಿಗಳು ಮಳೆಯನ್ನು ಕುರಿತು ಹಾಡಿದ್ದಾರೆ. ಅದರ ಅನುಭವ ವಿಶೇಷವಾದುದು. ಮಳೆ ಯಾವಾಗಲೂ ಒಂದೇ ರೀತಿ ಬೀಳುವುದಿಲ್ಲ. ನಿಧಾನವಾಗಿ, ಬಿರುಸಾಗಿ, ಹನಿಹನಿಯಾಗಿ ಬೇರೆ ಬೇರೆ ವಿನ್ಯಾಸಗಳಲ್ಲಿ ಭೂಮಿಗೆ ಬಿದ್ದು ಇಡೀ ಜೀವರಾಶಿಗೆ ಚೈತನ್ಯ ನೀಡುತ್ತದೆ. ಈ ಮಳೆಯನ್ನು ವಿವಿಧ ರೂಪಗಳಲ್ಲಿ ಕಂಡ ಅನುಭವವನ್ನು ಈ ಕವನದಲ್ಲಿ ವರ್ಣಿಸಲಾಗಿದೆ.

ಹನಿಮಳೆ ಬಿರುಮಳೆ ಸುರಿದಾವ
ಕೆರೆಹೊಳೆ ನದಿಜಲ ತುಂಬ್ಯಾವ
ಮರಗಿಡಬಳ್ಳಿ ನಲಿದಾವ
ಭೂಮಿಗೆ ಹೊಸಕಳೆ ತಂದಾವ. ॥೧॥

ಬೆಟ್ಟಗುಡ್ಡಗಳು ಬಯಲುಕಾಡುಗಳು
ಸುರಿನೀರ್ಮಳೆಯಲಿ ಮಿಂದಾವ
ಹಕ್ಕಿಪಕ್ಕಿಗಳು ಪೈರು ಪಚ್ಚೆಗಳು
ಹರುಷದಿ ಕುಣಿಕುಣಿ ಕುಣಿದಾವ. ॥೨॥

ಜಡಿಮಳೆ ಬಿಸಿಲ್ಮಳೆ ಹೂಮಳೆ ಬಿರುಮಳೆ
ವಿಧವಿಧ ರೂಪವ ತಳೆದಾವ
ಗುಡುಗುಡು ಗುಡುಗುತ ರಪರಪ ಸಿಡಿಯುತ
ಭೂಮಿಗೆ ಮಳೆಹನಿ ಇಳಿದಾವ. ॥೩॥

ನದಿಗಳು ಸೊಕ್ಕಿ ಕೆರೆಗಳು ಉಕ್ಕಿ
ಕಂಗಾಲಾದವು ಚಿಲಿಪಿಲಿ ಹಕ್ಕಿ
ಗುಡುಗುತ ಸಿಡಿಯುತ ಉಕ್ಕುತ ಸೊಕ್ಕುತ
ಭೂಮಿಗೆ ಮಳೆಹನಿ ಇಳಿದಾವ. ॥೪॥

ಕೃತಿಕಾರರ ಪರಿಚಯ:



ಡಾ. ಕೆ.ಆರ್. ಸಂಧ್ಯಾರೆಡ್ಡಿ ಅವರು ೨೨–೦೬–೧೯೫೩ರಂದು ಚಿತ್ರದುರ್ಗದಲ್ಲಿ ಜನಿಸಿದರು. ಇವರು ಉತ್ತಮ ಸಂಘಟನಾಕಾರರು ಮತ್ತು ಚಿಂತನಶೀಲರು 'ಮೂವತ್ತೈದರ ಹೊಸ್ತಿಲು', 'ಈ ಪ್ರೀತಿಯೊಳಗೆ', 'ಬೇರೊಂದು ದಾರಿ' 'ಇದು ಇನ್ನೊಂದು ಲೋಕ', 'ಜನಪದವರ್ಷ', 'ಹಳ್ಳಿಯ ಹಾಡುಗಳು', 'ಕನ್ನಡ ಜನಪದ ಕತೆಗಳು', ಮೊದಲಾದವು ಇವರ ಕೃತಿಗಳು. ಇವರಿಗೆ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿಯನ್ನೊಳಗೊಂಡಂತೆ ಅನೇಕ ಪುರಸ್ಕಾರಗಳು ದೊರೆತಿವೆ.

ಪದಗಳ ಅರ್ಥ

ಇಳಿದಾವ – ಇಳಿದಿವೆ;
ಉಕ್ಕಿ – ಹೆಚ್ಚಾಗಿ;
ಕಂಗಾಲು – ಏನೂ ಮಾಡಲು ತಿಳಿಯದಂತಾಗು;
ಕುಣಿದಾವ – ಕುಣಿದಿವೆ;
ಜಡಿಮಳೆ – ಒಂದೇ ಸಮನೆಬೀಳುವ ಮಳೆ;
ತುಂಬ್ಯಾವ – ತುಂಬಿವೆ;
ಬಿರುಮಳೆ – ಬಿರುಸಾಗಿ ಬೀಳುವ ಮಳೆ;
ಬಿಸಿಲ್ಮಳೆ – ಬಿಸಿಲಲ್ಲಿ ಬೀಳುವ ಮಳೆ;
ಮಿಂದಾವ – ಒದ್ದೆಯಾಗಿವೆ;
ಸುರಿದಾವ – ಸುರಿದಿವೆ;
ಸುರಿನೀರ್ಮಳೆ – ನೀರಿನ ಮಳೆ.
ಹನಿಮಳೆ – ಹನಿ ಹನಿಯಾಗಿ ಬೀಳುವ ಮಳೆ;
ಹೂಮಳೆ – ಹೂ ಬಿದ್ದಂತೆ ಭಾಸವಾಗುವಮಳೆ.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಭೂಮಿಗೆ ಹೊಸಕಳೆಯು ಹೇಗೆ ಬಂದಿತೆಂದು ಕವಯಿತ್ರಿ ಹೇಳಿದ್ದಾರೆ?

೨. 'ಮಳೆಯ ಹಾಡು' ಕವನದಲ್ಲಿ ಹೇಳಿರುವಂತೆ ಸುರಿನೀರ್ಮಳೆಯಲ್ಲಿ ಮಿಂದವು ಯಾವುವು?

೩. ಸುರಿದಮಳೆಗೆ ಹರುಷದಿಂದ ಯಾವುವು ಕುಣಿದಾಡಿದವೆಂದು ಸಂಧ್ಯಾರೆಡ್ಡಿಯವರು ತಿಳಿಸಿದ್ದಾರೆ?

೪. 'ಮಳೆಯ ಹಾಡು' ಪದ್ಯದಲ್ಲಿ ಬಣ್ಣಿಸಿರುವಂತೆ ಮಳೆಯು ತಳೆಯುವ ರೂಪಗಳಾವುವು?

೫. ಹಕ್ಕಿಗಳು ಏಕೆ ಕಂಗಾಲಾದವೆಂದು 'ಮಳೆಯ ಹಾಡು' ಕವನದಲ್ಲಿ ಕವಯಿತ್ರಿ ಹೇಳಿದ್ದಾರೆ?

ಆ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. 'ಮಳೆಯ ಹಾಡು' ಕವನದಲ್ಲಿ ಚಿತ್ರಿಸಿರುವಂತೆ ಮಳೆಹನಿಯು ಭೂಮಿಗೆ ಯಾವ ಯಾವ ರೀತಿಯಲ್ಲಿ ಸುರಿಯಿತು?

೨. ಮಳೆಯ ಆಗಮನದಿಂದ ಭೂಮಿಯ ಮೇಲಾಗಿರುವ ಬದಲಾವಣೆಗಳನ್ನು ಸಂಧ್ಯಾರೆಡ್ಡಿಯವರು ಹೇಗೆ ವರ್ಣಿಸಿದ್ದಾರೆ?

೩. ಮಳೆಯು ಜೀವರಾಶಿಗೆ ನೀಡಿರುವ ಚೈತನ್ಯವನ್ನು 'ಇಳೆಯ ಮಳೆ' ಕವನದಲ್ಲಿ ಸಂಧ್ಯಾರೆಡ್ಡಿಯವರು ಹೇಗೆ ಸೆರೆಹಿಡಿದಿದ್ದಾರೆ?

ಭಾಷಾಭ್ಯಾಸ

ಅ) 'ಮಳೆಯ ಹಾಡು' ಕವನದಲ್ಲಿರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.

ಉದಾಹರಣೆ: ಸುರಿದಾವ–ತುಂಬ್ಯಾವ

ಆ) ಕೆಳಗಿನ ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ.

ಭೂಮಿ, ಬೆಟ್ಟ, ಹಕ್ಕಿ, ಜಲ.

ಇ) ಕೆಳಗಿನ ತತ್ಸಮಗಳಿಗೆ ತದ್ಭವವನ್ನು ತದ್ಭವಗಳಿಗೆ ತತ್ಸಮವನ್ನು ಬರೆಯಿರಿ.

ಭೂಮಿ, ಪಕ್ಷಿ, ಹರುಷ.

ಈ) 'ಮಳೆಯ ಹಾಡು' ಕವನದಲ್ಲಿರುವ ಜೋಡಿ ಪದಗಳನ್ನು ಗುರುತಿಸಿ ಬರೆಯಿರಿ.

ಉದಾಹರಣೆ: ಪೈರು–ಪಚ್ಚೆ.

ಭಾಷಾ ಚಟುವಟಿಕೆ

ಅ) ಮಳೆಯನ್ನು ವರ್ಣಿಸುವ ಕವನಗಳನ್ನು ಸಂಗ್ರಹಿಸಿರಿ.

ಆ) 'ಮಳೆಯ ಹಾಡು' ಪದ್ಯವನ್ನು ಕಂಠಪಾಠ ಮಾಡಿರಿ.

ಇ) ಕೆಳಗೆ ಕೊಟ್ಟಿರುವ ಜೋಡಿ ಪದಗಳನ್ನು ಗಮನಿಸಿ ಬೇರೆ ಹತ್ತು ಜೋಡಿ ಪದಗಳನ್ನು ಬರೆಯಿರಿ.

ಮನೆ–ಮಠ, ಅಣ್ಣ–ತಂಗಿ, ಕೆರೆ–ಕಟ್ಟೆ, ಗಿಡ–ಮರ.

ಮಳೆಯಿಂದಲೇ ಇಳೆ_ಇಳೆಯಿಂದಲೇ ಬೆಳೆ

*****

೧೦. ಮಾಸ್ತಿಯವರ ಮಾತೃಪ್ರೇಮ

– ಬೆಳಗೆರೆ ಕೃಷ್ಣಶಾಸ್ತ್ರಿ

ಪ್ರವೇಶ: ನಮ್ಮ ಸಂಸ್ಕೃತಿಯಲ್ಲಿ ಸ್ತ್ರೀಯರನ್ನು ಕುರಿತಂತೆ ಗೌರವದ ಭಾವನೆ ಇದೆ. ಅದರಲ್ಲೂ ತಾಯಿಯನ್ನು ಕುರಿತಂತೆ ಅತಿ ಹೆಚ್ಚಿನ ಪ್ರೀತಿ ಆದರಗಳಿವೆ. ಇದಕ್ಕೆ ಕನ್ನಡದ ಹಿರಿಯ ಚೇತನ ಮಾಸ್ತಿಯವರದು ಒಂದು ಆದರ್ಶ. ಅವರಿಗೆ ಸ್ತ್ರೀಯರ ಬಗ್ಗೆ ಹಾಗೂ ಅವರ ತಾಯಿಯ ಬಗ್ಗೆ ಇದ್ದ ಗೌರವ ವಿಶೇಷವಾದುದು. ಮಾಸ್ತಿಯವರಿಗೆ ಸ್ತ್ರೀಯರ ಬಗೆಗೆ ಇದ್ದ ಗೌರವವನ್ನು ಲೇಖಕರಾದ ಬೆಳಗೆರೆ ಕೃಷ್ಣಶಾಸ್ತ್ರಿಗಳು ಈ ಗದ್ಯಭಾಗದಲ್ಲಿ ನಿರೂಪಿಸಿದ್ದಾರೆ.

೧೯೭೫ನೆಯ ಇಸವಿ. ಅಂತಾರಾಷ್ಟ್ರೀಯ ಮಹಿಳಾ ವರ್ಷ. ಒಂದು ಮಧ್ಯಾಹ್ನ ಪೂಜ್ಯ ಮಾಸ್ತಿಯವರನ್ನು ಅವರ ನಿವಾಸದಲ್ಲಿ ಕಂಡೆ. ಕುಶಲ ಪ್ರಶ್ನೆಗಳಾಗುವಷ್ಟರಲ್ಲೇ ಕೆಲವು ಮಹಿಳೆಯರು ಮಾಸ್ತಿಯವರನ್ನು ಕಾಣಲು ಬಂದರು. ಮಾಸ್ತಿ ಎಂದಿನಂತೆ ಕೈ ಜೋಡಿಸಿ 'ಬನ್ನಿ ಅಮ್ಮ ಬನ್ನಿ ತಾಯಿ' ಎಂದು ಅವರನ್ನೆಲ್ಲಾ ಬರಮಾಡಿಕೊಂಡರು. 'ತಾವೆಲ್ಲ ಬಂದ ಕಾರಣ ಏನೆಂದು ಕೇಳಬಹುದೇ?' ಎಂದರು ಮಾಸ್ತಿ ಹಸನ್ಮುಖರಾಗಿ.

ಅವರೆಲ್ಲ ಯಾವುದೋ ಮಹಿಳಾ ಸಂಘದವರೆಂದು ತಿಳಿಸಿ, 'ಇದು ಮಹಿಳಾ ವರ್ಷ ಅಲ್ಲವೇ. ಆದ್ದರಿಂದ ಮಹಿಳೆಯರ ಬಗೆಗೆ ತಮ್ಮ ಅನುಭವ, ಅನಿಸಿಕೆ, ಸಲಹೆ ಇತ್ಯಾದಿಗಳನ್ನು ತಮ್ಮಿಂದಲೇ ತಿಳಿಯಬೇಕೆಂದು ಬಂದೆವು' ಎಂದರು ಒಬ್ಬ ಹಿರಿಯರು. ಮಾಸ್ತಿ ಅದಕ್ಕೆ: ಬಹಳ ಸಂತೋಷ, ತಾವು ನಮ್ಮ ಮನೆಗೆ ಬಂದು ಈ ವಿಚಾರವಾಗಿ ಕೇಳುತ್ತಿರುವುದು ತುಂಬಾ ಸಂತೋಷದ ಮಾತು. ನಮ್ಮಲ್ಲಿ ಹೆಣ್ಣನ್ನು ಆದಿಶಕ್ತಿ, ಲಕ್ಷ್ಮೀ, ಪಾರ್ವತಿ, ಸರಸ್ವತಿ, ಭಾಗೀರಥೀ, ಗೀರ್ವಾಣಿ ಎಂದೆಲ್ಲ ಕರೆದಿದ್ದಾರೆ. ಬ್ರಹ್ಮ, ವಿಷ್ಣು, ಮಹೇಶ್ವರ ಮುಂತಾದ ಗಂಡುದೇವರುಗಳನ್ನು ಹೆಸರಿಸುವಾಗ ಪಾರ್ವತಿ ಪರಮೇಶ್ವರ, ಲಕ್ಷ್ಮೀನಾರಾಯಣ, ವಾಗ್ಪತಿ ಎಂದು ಹೆಣ್ಣಿನ ಹೆಸರನ್ನು ಮುಂದುಮಾಡಿ ಕರೆಯುವಲ್ಲಿ ಏನೋ ವಿಶೇಷವಿದೆ. ಜಗತ್ತಿನಲ್ಲಿ ಗಂಡು ಎಷ್ಟು ಮುಖ್ಯವೋ ಹೆಣ್ಣೂ ಅಷ್ಟೇ ಮುಖ್ಯ ಎಂದು ವಿವರಿಸಿದರು.

ಆಗ ಹದಿವಯಸ್ಸಿನ ಒಬ್ಬಾಕೆ 'ನಾನೊಂದು ಪ್ರಶ್ನೆ ಕೇಳಲೇ ಸಾರ್' ಎಂದಳು.

'ಕೇಳಿ, ಕೇಳಿ, ಏನು ಬೇಕಾದರೂ ಕೇಳಿ ಸಂಕೋಚವೇಕೆ' ಎಂದರು ಮಾಸ್ತಿ ನಗುತ್ತ.

'ತಾವು ವಯಸ್ಸಿನಲ್ಲಿದ್ದಾಗ ತಮ್ಮ ಹೆಂಡತಿಯಲ್ಲದೆ ಬೇರೊಬ್ಬ ಹೆಂಗಸನ್ನು ಪ್ರೀತಿಸಿದ್ದು ಉಂಟೇ ಸಾರ್' ಎಂದು ಕೇಳಿದರು. ಅಲ್ಲಿದ್ದವರಿಗೆಲ್ಲಾ ಸಿಡಿಲೆರಗಿದಂತಾಯಿತು. ಎಲ್ಲರೂ ಆಕೆಯನ್ನು ದುರುಗುಟ್ಟಿಕೊಂಡು ನೋಡಿದರು. ಆದರೆ ಮಾಸ್ತಿ ನಗುನಗುತ್ತಲೇ 'ಹೌದಮ್ಮ, ಹೌದು ತಾಯೀ, ನಿಮ್ಮ ಮಾತು ನಿಜ, ನಾನು ನನ್ನ ಹೆಂಡತಿಯನ್ನಲ್ಲದೆ ಬೇರೆ ಹೆಂಗಸನ್ನು ಪ್ರೀತಿಸಿದ್ದುಂಟು' ಎಂದರು.

ನೆರೆದವರಿಗೆಲ್ಲ ದಿಗ್ಭ್ರಮೆಯಾಯಿತು. ಪ್ರಶ್ನೆ ಕೇಳಿದ ಆಕೆ ಒಂದು ಬಲವಾದ ಕೋಟೆಯನ್ನೇ ಗೆದ್ದಂತೆ ಗತ್ತಿನಿಂದ ಅಲ್ಲಿದ್ದವರನ್ನೆಲ್ಲಾ ತಲೆ ಎತ್ತಿ ನೋಡಿದರು.



ಮಾಸ್ತಿ ಮುಂದುವರೆದು "ಹೇಳಬೇಕಾ? ನಾನು ಗಾಢವಾಗಿ ಪ್ರೀತಿಸಿದ ಆ ಹೆಣ್ಣು ಯಾರೆಂದು ತಿಳಿಯಬೇಕೆನ್ನುವಿರಾ?" ಎಂದರು. ಆಕೆಗೆ ಇಮ್ಮಡಿ ಹಿಗ್ಗಾಯಿತು.


ಮಾಸ್ತಿ ಹಸನ್ಮುಖಿಯಾಗಿಯೇ ಮಾತನಾಡಿದರು. 'ಕೇಳಿ, ನನ್ನ ಧರ್ಮಪತ್ನಿಯಲ್ಲದೆ ನಾನು ವಿಶೇಷವಾಗಿ ಪ್ರೀತಿಸಿದ ಆ ಹೆಣ್ಣು ನನ್ನ ತಾಯಿ, ನನ್ನ ಹೆತ್ತವ್ವ, ನನಗೆ ಜನ್ಮವಿತ್ತ ದೇವತೆ' ಎಂದರು.

ಆಕೆಯ ಬಾಯಿಂದ ಬಂತು 'ಅಯ್ಯೋ ಅಷ್ಟೇನೇ' ಎಂಬ ಉದ್ಗಾರ.

ಕೂಡಲೆ ಮಾಸ್ತಿ ಕಣ್ಣರಳಿಸಿ ನುಡಿದರು. 'ಏಕೆ ಅಯ್ಯೋ ಎನ್ನುತ್ತೀರಿ, ನಾನು ನನ್ನ ತಾಯಿಯನ್ನು ವಿಶೇಷವಾಗಿ ಪ್ರೀತಿಸಿದ್ದು ತಪ್ಪೇ' ಎನ್ನುತ್ತ ಅಲ್ಲಿದ್ದವರನ್ನೆಲ್ಲಾ ಒಮ್ಮೆ ದಿಟ್ಟಿಸಿ ಮತ್ತೆ ನುಡಿದರು.

'ಹಾಗಾದರೆ ನೀವು ನಿಮ್ಮ ತಾಯಿಯನ್ನು ಪ್ರೀತಿಸುವುದಿಲ್ಲವೇ? ತಾಯಿ ಇಲ್ಲದೆ ನಾವೇ? ನಮ್ಮನ್ನು ಹೊತ್ತು ಹೆತ್ತು, ಸಾಕಿ, ಸಲಹಿ ದೊಡ್ಡವರನ್ನು ಮಾಡಲಿಲ್ಲವೇ? ನಮಗೆ ಸ್ವಲ್ಪ ಆರೋಗ್ಯ ಕೆಟ್ಟರೂ ನೆಗಡಿ, ಕೆಮ್ಮು, ಜ್ವರ ಬಂದರೂ ನಮ್ಮ ತಾಯಿ ಗಾಬರಿಗೊಳ್ಳಲಿಲ್ಲವೇ? ನಮಗಾಗಿ ಔಷಧಿ ಪಥ್ಯಗಳನ್ನು ತಾನು ಪಾಲಿಸಲಿಲ್ಲವೇ? ಹೊಟ್ಟೆ ಬಟ್ಟೆ ಕಟ್ಟಲಿಲ್ಲವೇ? ನಮ್ಮನ್ನು ಹಾಗೆ ಜೋಪಾನ ಮಾಡದಿದ್ದರೆ ನಾವೆಲ್ಲಿರುತ್ತಿದ್ದೆವು? ಎಂದು ಮಾತು ಮುಂದುವರೆಸಿದರು, 'ನೋಡಿ, ನನ್ನ ತಾಯಿ ಇದ್ದಷ್ಟು ದಿನಗಳು ನಾನು ಬೆಳಿಗ್ಗೆ ಎದ್ದ ಕೂಡಲೆ ಅವರೆಲ್ಲಿದ್ದರೂ ಅಲ್ಲಿಗೆ ಹೋಗಿ ಅವರ ಪಾದ ಮುಟ್ಟಿ ನಮಸ್ಕರಿಸಿದ ನಂತರವೇ ನನ್ನ ದಿನಚರಿ ಪ್ರಾರಂಭವಾಗುತ್ತಿತ್ತು. ಈಚೆಗೆ ಅವರು ತೀರಿಕೊಂಡ ಮೇಲೆ ಅವರ ಭಾವಚಿತ್ರವನ್ನು ಪಾದಗಳು ಕಾಣುವಂತೆ ದೊಡ್ಡದಾಗಿ ಮಾಡಿಸಿ ಆ ಒಳಬಾಗಿಲ ಮೇಲೆ ಹಾಕಿದ್ದೇನೆ, ನೋಡಿ. ಈಗಲೂ ಪ್ರತಿನಿತ್ಯ ಎದ್ದಕೂಡಲೆ ಆ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದ ಮೇಲೆಯೇ ನನ್ನ ಮುಂದಿನ ಕೆಲಸ. ನಿಮಗದು ಚಿತ್ರದ ಬೊಂಬೆಯಾಗಿ ಕಾಣಿಸಬಹುದು. ಆದರೆ ಅದರಲ್ಲಿ ನಾನು ನನ್ನ ತಾಯಿಯನ್ನು ಕಾಣುತ್ತೇನೆ. ಮಹಿಳಾವರ್ಷ ಆಚರಿಸುತ್ತಿರುವ ನಿಮಗೆಲ್ಲ ಈ ವಿಚಾರದಲ್ಲಿ ಸ್ಪಷ್ಟವಾದ ನಿಶ್ಚಯವಿರಬೇಕು. ಮಹಿಳೆಯರ ಹಿರಿಮೆಯನ್ನು ಮೆರೆಯುವಾಗ ತಾಯಿಯ ಮಹಿಮೆಯನ್ನು ಮರೆಯಬಾರದು'. 'ತಾಯಿಗಿಂತ ದೊಡ್ಡವಸ್ತು ಉಂಟೇ' ಎಂದರು.


ಕೃತಿಕಾರರ ಪರಿಚಯ:



ಬೆಳಗೆರೆ ಕೃಷ್ಣಶಾಸ್ತ್ರಿಗಳು ೨೨ನೇ ಮೇ ೧೯೧೬ರಲ್ಲಿ ಜನಿಸಿದರು. ಇವರು ವೃತ್ತಿಯಲ್ಲಿ ಉಪಾಧ್ಯಾಯರಾಗಿದ್ದರು. ವಿನೋಬಾಭಾವೆಯೊಂದಿಗೆ ಭೂದಾನ ಚಳುವಳಿಯಲ್ಲಿ ಭಾಗವಹಿಸಿದ್ದರು. 'ತುಂಬಿ' ಎಂಬುದು ಇವರ ಕಥಾಸಂಕಲನ. 'ಹಳ್ಳಿಮೇಷ್ಟ್ರು' ಮತ್ತು 'ಹಳ್ಳಿಚಿತ್ರ' 'ಆಕಸ್ಮಿಕ', 'ಯೇಗ್ದಾಗೆಲ್ಲಾ ಐತೆ', ಇವರು ರಚಿಸಿದ ಕೆಲವು ಪ್ರಮುಖ ಕೃತಿಗಳು. ಶಾಸ್ತ್ರಿಗಳು ದಿನಾಂಕ ೨೨-೩-೨೦೧೩ರಂದು ನಿಧನರಾದರು.

'ಸಾಹಿತಿಗಳ ಸ್ಮೃತಿ' ಎಂಬ ಇವರ ಕೃತಿಯಿಂದ ಮಾಸ್ತಿಯವರ ಮಾತೃಪ್ರೇಮ ಗದ್ಯಭಾಗವನ್ನು ಆರಿಸಲಾಗಿದೆ.

ಮಾಸ್ತಿಯವರ ಪರಿಚಯ:



'ಮಾಸ್ತಿ ಕನ್ನಡದ ಆಸ್ತಿ' ಎಂದು ಪ್ರಸಿದ್ಧರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಕೋಲಾರ ಜಿಲ್ಲೆಯ ಮಾಸ್ತಿ ಎಂಬ ಊರಿನಲ್ಲಿ ೦೬.೦೬.೧೮೯೧ರಲ್ಲಿ ಜನಿಸಿದರು. ಕನ್ನಡ ಸಣ್ಣಕತೆಗಳ ಜನಕ ಎನಿಸಿದ ಇವರು ಕತೆ, ಕಾದಂಬರಿ, ಕಾವ್ಯ ವಿಮರ್ಶೆ ಹೀಗೆ ಹಲವು ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. 'ಚೆನ್ನಬಸವನಾಯಕ' 'ಚಿಕವೀರರಾಜೇಂದ್ರ' 'ಭಾವ' ಮುಂತಾದವು ಅವರ ಕೃತಿಗಳು. ಅವರಿಗೆ ಜ್ಞಾನಪೀಠ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳು ಸಂದಿವೆ. ಶ್ರೀಯುತರು ೧೯೮೬ರಲ್ಲಿ ನಿಧನರಾದರು.

ಪದಗಳ ಅರ್ಥ:

ಗತ್ತು – ಅಹಂಕಾರ;

ಗಾಢವಾಗಿ – ಬಹಳವಾಗಿ;

ಗಾಬರಿ – ಹೆದರಿಕೆ;

ಗೀರ್ವಾಣಿ – ಸರಸ್ವತಿ;

ಜೋಪಾನ – ರಕ್ಷಣೆ;

ದಿಗ್ಭ್ರಮೆ – ಆಶ್ಚರ್ಯ;

ದಿಟ್ಟಿಸು – ನೋಡು;

ದಿನಚರಿ – ದಿನದ ಕೆಲಸ.

ನಿವಾಸ – ವಾಸಮಾಡುವ ಸ್ಥಳ (ಮನೆ);

ನಿಶ್ಚಯ – ನಿರ್ಧಾರ;

ಹಸನ್ಮುಖ – ನಗುಮುಖ.

ಟಿಪ್ಪಣಿ:

ವಾಗ್ಪತಿ – ವಾಕ್ ಎಂದರೆ ಮಾತು–ವಿದ್ಯೆ. ವಿದ್ಯೆಗೆ ಅಧಿದೇವತೆಯಾದ ಸರಸ್ವತಿಯ ಪತಿ ಬ್ರಹ್ಮ. (ವಿದ್ಯೆಯ ಅಧಿಪತಿಯಾದ ಸರಸ್ವತಿಯನ್ನು 'ಅಧಿದೇವತೆ' ಎನ್ನುತ್ತಾರೆ.)

ಸಿಡಿಲೆರಗು – ಸಿಡಿಲು ಇದ್ದಕ್ಕಿದ್ದಂತೆ ಹೊಡೆಯುತ್ತದೆ. ಆಗ ಗಾಬರಿಯಾಗುತ್ತದೆ. ಸಿಡಿಲೆರಗು ಎಂದರೆ ಒಮ್ಮೆಲೆ ಗಾಬರಿಯಾಗು, ಭಯಗೊಳ್ಳು ಎಂದರ್ಥವಾಗುತ್ತದೆ.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಅಂತಾರಾಷ್ಟ್ರೀಯ ಮಹಿಳಾವರ್ಷ ಎಂದು ಯಾವ ವರ್ಷವನ್ನು ಆಚರಿಸಲಾಯಿತು?

೨. ಮಾಸ್ತಿಯವರು ತಮ್ಮನ್ನು ಕಾಣಲು ಬಂದ ಮಹಿಳೆಯರನ್ನು ಹೇಗೆ ಸ್ವಾಗತಿಸಿದರು?

೩. ಮಾಸ್ತಿಯವರನ್ನು ಕಾಣಲು ಮಹಿಳೆಯರು ಏಕೆ ಬಂದಿದ್ದರು?

೪. ಮಾಸ್ತಿಯವರು ನಮ್ಮಲ್ಲಿ ಹೆಣ್ಣನ್ನು ಯಾವ ಯಾವ ಹೆಸರುಗಳಿಂದ ಕರೆಯಲಾಗಿದೆ ಎಂದು ಹೇಳಿದರು?

೫. ಹದಿವಯಸ್ಸಿನಾಕೆ ಮಾಸ್ತಿಯವರನ್ನು ಕೇಳಿದ ಪ್ರಶ್ನೆ ಯಾವುದು?

೬. ಮಾಸ್ತಿಯವರ ಯಾವ ಮಾತು ನೆರದವರಿಗೆಲ್ಲ ದಿಗ್ಭ್ರಮೆಯನ್ನು ಉಂಟುಮಾಡಿತು?

೭. ಮಾಸ್ತಿಯವರಿಗೆ ಪ್ರಶ್ನೆ ಕೇಳಿದಾಕೆಯ ಹಿಗ್ಗು ಇಮ್ಮಡಿಯಾಯಿತೇಕೆ?

೮. ಮಾಸ್ತಿಯವರು ತಮ್ಮ ಹೆಂಡತಿಯನ್ನಲ್ಲದೆ ಪ್ರೀತಿಸಿದ್ದ ಮತ್ತೊಂದು ಹೆಣ್ಣು ಯಾರು?

ಆ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಹದಿವಯಸ್ಸಿನಾಕೆ ಕೇಳಿದ ಪ್ರಶ್ನೆಗೆ ಮಾಸ್ತಿಯವರ ಉತ್ತರವೇನು?

೨. ಮಾಸ್ತಿಯವರು ತಮ್ಮ ತಾಯಿಯ ಭಾವಚಿತ್ರವನ್ನು ಒಳಬಾಗಿಲ ಮೇಲೆ ಏಕೆ ಹಾಕಿಕೊಂಡಿದ್ದರು?

ಇ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ತಾಯಿಯ ಮಹತ್ವವನ್ನು ಕುರಿತು ಮಾಸ್ತಿಯವರು ಆಡಿದ ಮಾತುಗಳಾವುವು?

ಈ) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು ಸಂದರ್ಭಸಹಿತ ವಿವರಿಸಿ.

೧. "ಬನ್ನಿ ಅಮ್ಮ ಬನ್ನಿ ತಾಯಿ"

೨. "ತಮ್ಮಿಂದಲೇ ತಿಳಿಯಬೇಕೆಂದು ಬಂದೆವು"

೩. "ನೀವು ನಿಮ್ಮ ತಾಯಿಯನ್ನು ಪ್ರೀತಿಸುವುದಿಲ್ಲವೇ?"

೪. "ತಾಯಿಗಿಂತ ದೊಡ್ಡ ವಸ್ತು ಉಂಟೇ?"

ಭಾಷಾಭ್ಯಾಸ

ಅ) ಈ ಕೆಳಗೆ ಪ್ರತಿ ಹೇಳಿಕೆಯ ಕೆಳಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಗುರುತಿಸಿ.

1. 'ಅಲ್ಲಿದ್ದವರಿಗೆಲ್ಲಾ ಸಿಡಿಲೆರಗಿದಂತಾಯಿತು' ಎಂಬಲ್ಲಿ ಸಿಡಿಲೆರಗಿದಂತಾಯಿತು ಎಂದರೆ –

ಅ. ಗಾಬರಿಯಾಯಿತು

ಆ. ಸಿಡಿಲು ಬಿದ್ದ ಹಾಗಾಯಿತು

ಇ. ಸಿಡಿಮಿಡಿಗೊಳ್ಳುವಂತಾಯಿತು

ಈ. ಕೋಪಬಂದಿತು

2. 'ಇಮ್ಮಡಿ' ಎಂಬ ಪದದ ಅರ್ಥ –

ಅ. ಇಂಪಾದ ನುಡಿ

ಆ. ಎರಡರಷ್ಟು

ಇ. ಹಿಂದಿನ ಕಾಲು

ಈ. ಎರಡು ಕಡೆ

3. ಕೆಳಗಿನ ಪದಗಳಲ್ಲಿ ಸರಿಯಾದ ರೂಪ –

ಅ. ಸ್ಥಾನಾಮಾನ

ಆ. ಸ್ಥಾನಮಾನ

ಇ. ಸ್ಥಾನಮನ

ಈ. ಸ್ಥಾನಾಮನ

4. ಮಾಸ್ತಿಯವರು ಪಡೆದ ಪ್ರಶಸ್ತಿ –

ಅ. ನೊಬೆಲ್ ಪ್ರಶಸ್ತಿ

ಆ. ಜ್ಞಾನಪೀಠ ಪ್ರಶಸ್ತಿ

ಇ. ನೆಹರು ಪ್ರಶಸ್ತಿ

ಈ. ಪಂಪ ಪ್ರಶಸ್ತಿ

ಆ) 'ಮಾಸ್ತಿ ಮಾತೃಪ್ರೇಮ' ಗದ್ಯಭಾಗವನ್ನು ಆಧರಿಸಿ ಕೆಳಗಿನ ವಾಕ್ಯಗಳ ನಡುವೆ ಖಾಲಿಯಿರುವ ಸ್ಥಳಗಳನ್ನು ಭರ್ತಿ ಮಾಡಿರಿ.

೧. 'ಕೇಳಿ ಕೇಳಿ ಏನು ಬೇಕಾದರೂ ಕೇಳಿ ಸಂಕೋಚವೇಕೆ' .... 'ಅಲ್ಲಿದ್ದವರಿಗೆಲ್ಲ ಸಿಡಿಲೆರಗಿದಂತಾಯಿತು'

೨. 'ನನ್ನ ದಿನಚರಿ ಪ್ರಾರಂಭವಾಗುತ್ತಿತ್ತು' .... 'ನನ್ನ ಮುಂದಿನ ಕೆಲಸ'

ಭಾಷಾ ಚಟುವಟಿಕೆ

ಅ) ತಾಯಿಯನ್ನು ಕುರಿತು ಬರೆದಿರುವ ಕವನಗಳನ್ನು ಸಂಗ್ರಹಿಸಿರಿ.

ಆ) ತಾಯಿಯನ್ನು ಕುರಿತಂತೆ ನಿಮ್ಮ ಅನುಭವಗಳನ್ನು ಗದ್ಯ ಅಥವಾ ಪದ್ಯ ರೂಪದಲ್ಲಿ ಬರೆಯಿರಿ.

ಇ) ಚಿತ್ರವನ್ನು ನೋಡಿದಾಗ ನಿಮ್ಮ ಮನಸ್ಸಿನಲ್ಲಿ ಮೂಡುವ ಭಾವನೆಗಳನ್ನು ಐದಾರು ವಾಕ್ಯಗಳಲ್ಲಿ ಬರೆಯಿರಿ.



ವ್ಯಾಕರಣ

ಭಾಗ – 'ಅ'

ಕಾಲ ಸೂಚಕ ಕ್ರಿಯಾಪದ

ಕ್ರಿಯೆಯ ಅರ್ಥವನ್ನು ಕೊಡುವ ಪದಗಳೆಲ್ಲವೂ ಕ್ರಿಯಾಪದಗಳು. ಕ್ರಿಯಾಪದದ ಮೂಲರೂಪವೇ ಕ್ರಿಯಾಪ್ರಕೃತಿ. ಕ್ರಿಯಾಪ್ರಕೃತಿಯನ್ನು ಧಾತು ಎನ್ನುವರು. ಧಾತುವಿಗೆ ಆಖ್ಯಾತ ಪ್ರತ್ಯಯಗಳು ಸೇರಿ ಕ್ರಿಯಾಪದಗಳಾಗುತ್ತವೆ. ಈ ಎರಡರ ನಡುವೆ ಕ್ರಮವಾಗಿ ಉತ್ತ, ದ, ವ, ಎಂಬ ಕಾಲಸೂಚಕ ಪ್ರತ್ಯಯಗಳು ಸೇರಿ ಕೆಲಸ ನಡೆಯುವ ಕಾಲವನ್ನು ತಿಳಿಸುತ್ತವೆ. ಇದರಲ್ಲಿ ಭೂತಕಾಲ, ವರ್ತಮಾನಕಾಲ ಮತ್ತು ಭವಿಷ್ಯತ್ ಕಾಲ ಎಂದು ಮೂರು ಬಗೆಗಳಿವೆ.

ಭೂತಕಾಲ :

ಧಾತುಗಳಿಗೆ ಭೂತಕಾಲದಲ್ಲಿ ಆಖ್ಯಾತ ಪ್ರತ್ಯಯಗಳು ಸೇರಿ ಭೂತಕಾಲದ ಕ್ರಿಯಾಪದಗಳು ಎನಿಸುವುವು. ಭೂತ ಕಾಲದಲ್ಲಿ **'ದ'** ಎಂಬ ಕಾಲಸೂಚಕ ಪ್ರತ್ಯಯವು ಸಾಮಾನ್ಯವಾಗಿ ಬರುವುದು.

ಉದಾ: ಓದಿದನು, ತಿಂದಳು, ಬಂದಿತು, ಹಾಡಿದರು, ಬಂದೆನು.

ವರ್ತಮಾನಕಾಲ :

ಧಾತುಗಳಿಗೆ ವರ್ತಮಾನ ಕಾಲದಲ್ಲಿ ಆಖ್ಯಾತ ಪ್ರತ್ಯಯಗಳು ಸೇರಿ ವರ್ತಮಾನ ಕಾಲದ ಕ್ರಿಯಾಪದಗಳು ಎನಿಸುವುವು. ವರ್ತಮಾನಕಾಲದಲ್ಲಿ **'ಉತ್ತ'** ಎಂಬ ಕಾಲ ಸೂಚಕ ಪ್ರತ್ಯಯವು ಸಾಮಾನ್ಯವಾಗಿ ಬರುವುದು.

ಉದಾ: ತಿನ್ನುತ್ತಾನೆ, ಓದುತ್ತಾಳೆ, ಬರುತ್ತದೆ, ಹಾಡುತ್ತಾರೆ, ಬರೆಯುತ್ತಾರೆ.

ಭವಿಷ್ಯತ್‌ಕಾಲ :

ಧಾತುಗಳಿಗೆ ಭವಿಷ್ಯತ್ ಕಾಲದಲ್ಲಿ ಆಖ್ಯಾತ ಪ್ರತ್ಯಗಳು ಸೇರಿ ಭವಿಷ್ಯತ್ ಕಾಲದ ಕ್ರಿಯಾಪದಗಳು ಎನಿಸುವುವು. ಭವಿಷ್ಯತ್ ಕಾಲದಲ್ಲಿ **'ವ'** ಎಂಬ ಕಾಲ ಸೂಚಕ ಪ್ರತ್ಯಯವು ಸಾಮಾನ್ಯವಾಗಿ ಬರುವುದು.

ಉದಾ: ಬರುವನು, ಬರುವರು, ಹಾಡುವರು, ಬರೆಯುವರು, ತಿನ್ನುವನು.

ಭಾಗ – 'ಅ'

ಕೆಳಗೆ ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲಸೂಚಕ ಕ್ರಿಯಾಪದವುಳ್ಳ ವಾಕ್ಯಗಳಿವೆ. ನೀವೂ ಈ ರೀತಿ ಮೂರೂ ಕಾಲಗಳನ್ನು ಸೂಚಿಸುವ ಕೆಲವು ವಾಕ್ಯಗಳನ್ನು ರಚಿಸಿರಿ.

೧. ಮಾಸ್ತಿಯವರನ್ನು ಅವರ ನಿವಾಸದಲ್ಲಿ ಕಂಡೆ

೨. ನನ್ನ ದಿನಚರಿ ಪ್ರಾರಂಭವಾಗುತ್ತದೆ

೩. ನನ್ನ ದಿನಚರಿಯನ್ನು ಮುಂದೆ ಬರೆಯುವೆನು


ತಾಯಿಗಿಂತ ಬಂಧುವಿಲ್ಲ – ಉಪ್ಪಿಗಿಂತ ರುಚಿಯಿಲ್ಲ

*****

೧೧. ಭೂಮಿತಾಯಿ


– ಜನಪದ

ಆಶಯ : ಜನಪದರು ಮಣ್ಣಿನ ಮಕ್ಕಳು. ಭೂಮಿಯನ್ನು ತಾಯಿ ಎಂದೇ ಭಾವಿಸಿದವರು. ಮಣ್ಣಿನ ಒಡನಾಟದಲ್ಲೇ ಬದುಕು ಕಂಡವರು. ಭೂತಾಯಿ ತನ್ನನ್ನು ನಂಬಿದವರನ್ನು ಎಂದೂ ನಿರಾಶೆಗೊಳಿಸುವುದಿಲ್ಲ, ನಮ್ಮನ್ನು ಕೈ ಬಿಡುವುದಿಲ್ಲ ಎಂಬ ನಂಬಿಕೆಯಿಂದ ಆಕೆಯ ಸೇವೆಯನ್ನು ಮಾಡುತ್ತಾ ತಮ್ಮ ತುತ್ತಿನ ಚೀಲ ತುಂಬಿಕೊಳ್ಳುವವರು. ಜನಪದರು ಭೂತಾಯಿಯನ್ನು ಪ್ರಾರ್ಥಿಸುವ ಪರಿ ಅನೇಕ ತ್ರಿಪದಿಗಳಲ್ಲಿ ವ್ಯಕ್ತವಾಗಿದೆ. ಅಂತಹ ಕೆಲವು ತ್ರಿಪದಿಗಳನ್ನು ಇಲ್ಲಿ ನೀಡಲಾಗಿದೆ.



ಹೊಸ ಬಂಡಿ ಮೇಲೆ ಹಸುವಿನ ಗೊಬ್ರತಂದೆ
ಹಸಿರ ಭೂದೇವಿ ಹಾಕ್ತೇನೆ । ನನ ತಾಯವ್ವ
ಹಸಿದ ಕಂದಯ್ನ ಕಾಯವ್ವ ॥೧॥

ಹೂಡೋದು ಹೊಸ ಎತ್ತು ಹೂಡ್ಯಾನು ಹೊಸ ಮಗ
ಕೂಗು ಕೇಳಮ್ಮ ಭೂದೇವಿ । ನಿನಮಗ
ಸೆರಗು ಕಟ್ಟವನೆ ದುಡಿಯೋಕೆ ॥೨॥



ಭೂದೇವಿ ನೀಡವ್ವ ಭಾರಿ ಪೈರಾಗಲವ್ವ
ಬಡವನ ಹರಕೆ ಕೇಳವ್ವ । ಭೂಮಿತಾಯಿ
ನಿನ್ಗೆ ಜೋಡಿ ಹಣ್ಕಾಯಿ ಒಡಿಸೇನು ॥೩॥

ಮಾರುದ್ದ ಪೈರಾಗಲಿ ಮೊಳುದುದ್ದ ತೆನೆಯಾಗಲಿ
ಬಡವನ ಮನೆಗೆ ಸಿರಿಬರಲಿ । ಭೂಮಿತಾಯಿ
ಕಂದಯ್ನ ಹಸಿವು ಇಂಗೋಗ್ಲಿ ॥೪॥



ಭೂಮಿತಾಯಿ ಬಸುರಾಗಿ ಬಸುರುಡುಗೆ ಉಟ್ಕೊಂಡು
ಮೊಸರು ಅನ್ನಕೆ ಬ್ರಮಿಸಾಳೆ
ಆ ಊರ ಗೌಡನು ಕರಸವನೆ । ಹೆಸವಂತರ
ಮಾಡೀಸನಾಗ ಮೊಸರನ್ನ–ಹಸಿರು ವನದಾಗೆ ಎರಚಾನೊ ॥೫॥

ಹನ್ನೆರಡು ಎತ್ತಿನ ಬಾರಿ ಹೊನ್ನೆಗಂಬ ಮೇಟಿ
ಚಿನ್ನದ ಕೊಂಬೀನ ಬಸವಣ್ಣ । ತುಳಿದ್ಯಾವೊ
ಚೆನ್ನಿಗನಣ್ಣಯ್ನ ಕಳದಲ್ಲಿ ॥೬॥

ಪದಗಳ ಅರ್ಥ

ಇಂಗು–ಬತ್ತು, ಇಲ್ಲವಾಗು, ಅಡಗು,
ಕರಸವನೆ–ಕರೆಸಿದ್ದಾನೆ;
ಕಳ,ಕಣ–ಧಾನ್ಯಗಳನ್ನು ಒಕ್ಕುವುದಕ್ಕಾಗಿ ಸಿದ್ಧಪಡಿಸಿದ ಸ್ಥಳ;
ಗೊಬ್ರ–ಗೊಬ್ಬರ;
ಬ್ರಮಿಸು–ಇದ್ದುದನ್ನು ಭಿನ್ನರೀತಿಯಲ್ಲಿ ಗ್ರಹಿಸು;
ಹಣ್ಕಾಯಿ–ಹಣ್ಣುಕಾಯಿ.

ಟಿಪ್ಪಣಿ

'ಮೇಟಿ'– ಕಣದ ಕೇಂದ್ರ ಬಿಂದು. ಕಣದ ಮಧ್ಯದಲ್ಲಿ ನೆಡುವ ಕಂಬಕ್ಕೆ ಮೇಟಿ ಎನ್ನುವರು. (ಆಲ, ಸುರಗಿ ಅಥವಾ ಬನ್ನಿಮರದ ಕಂಬ). ಜನಪದರು ಇದನ್ನು ಲಕ್ಷ್ಮೀ ಎಂದು ಪರಿಭಾವಿಸಿ ಪೂಜೆ ಮಾಡುವರು.

ಮೇಟಿ ಅದೊಂದು ವಿದ್ಯೆ. 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಮೇಲು'. ಎಂದು ಸರ್ವಜ್ಞಕವಿ ಹೇಳಿದಂತೆ, ಮೇಟಿ ವಿದ್ಯೆ ಅಥವಾ ಒಕ್ಕಲುತನ ಶ್ರೇಷ್ಠವೃತ್ತಿ ಎನಿಸಿದೆ.

'ಕಣ'– ರೈತ ಬೆಳೆಯನ್ನು ಬೆಳೆಯುವ ಬೆಳಸನ್ನು ಶೇಖರಿಸಿ, ಪರಿಷ್ಕರಿಸುವ ತಾಣವನ್ನು ಕಣ ಎಂದು ಕರೆಯುತ್ತಾರೆ. ಬೆಳೆದ ಪೈರನ್ನು ಕಟಾವು ಮಾಡಿ ಅವನ್ನೆಲ್ಲ ಮೆದೆ ಅಥವಾ ಬಣವೆಗೆ ಹಾಕಿದ ಮೇಲೆ ಕಣವನ್ನು ತಯಾರಿಸುವರು.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಭೂದೇವಿಯು ಯಾರನ್ನು ಕಾಯಬೇಕೆಂದು 'ಭೂಮಿತಾಯಿ' ಪದ್ಯದಲ್ಲಿ ಜನಪದರು ಪ್ರಾರ್ಥಿಸಿದ್ದಾರೆ?

೨. 'ಭೂಮಿತಾಯಿ' ಪದ್ಯದಲ್ಲಿ ತಿಳಿಸಿರುವಂತೆ ಜನಪದರು ದುಡಿಯಲು ಹೇಗೆ ಸಿದ್ಧರಾಗಿದ್ದಾರೆ?

೩. 'ಭೂಮಿತಾಯಿ' ಪದ್ಯದಲ್ಲಿ ಬಡವನ ಹರಕೆ ಏನು?

೪. 'ಭೂಮಿತಾಯಿ' ಪದ್ಯದಲ್ಲಿ ತಿಳಿಸಿರುವಂತೆ ಹಸಿವು ಹೇಗೆ ಇಂಗಬೇಕೆಂದು ಜನಪದರು ಬಯಸಿದ್ದಾರೆ?

ಆ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ರೈತನು ತನ್ನ ಕಂದಯ್ಯನ ಹಸಿವು ಇಂಗಿಸಲು ಭೂಮಿಯನ್ನು ಹೇಗೆ ಸಿದ್ಧಗೊಳಿಸುವರೆಂದು 'ಭೂಮಿತಾಯಿ' ಪದ್ಯದಲ್ಲಿ ಹೇಳಿದೆ?

೨. ಊರ ಗೌಡನು ಹಸಿರು ವನಕ್ಕೆ ಮೊಸರನ್ನ ಎರಚಿದನು ಏಕೆ?

೩. ಜನಪದರು ಚೆನ್ನಿಗಣ್ಣಯ್ಯನ ಕಣವನ್ನು ಹೇಗೆ ವರ್ಣಿಸಿದ್ದಾರೆ?

ಭಾಷಾಭ್ಯಾಸ

ಅ) ಕೆಳಗಿನ ಪದಗಳ ಗ್ರಾಂಥಿಕ ರೂಪ ಬರೆಯಿರಿ.

ಹಾಕ್ತೇನೆ, ಕಂದಯ್ನ, ಕಟ್ಟವನೆ, ಹೂಡ್ಯಾನು, ಹಣ್ಕಾಯಿ, ನಿನ್ಗೆ.

ಆ) ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ.

ಮಾರು+ಉದ್ದ =________________ ಮೊಸರು+ಅನ್ನ =________________


ಪೈರು+ಆಗಲಿ =________________ ಹೊನ್ನೆ+ಕಂಬ =________________

ಭಾಷಾ ಚಟುವಟಿಕೆ

ಅ) ಕೆಳಗಿನ ಜನಪದ ತ್ರಿಪದಿಗಳನ್ನು ರಾಗವಾಗಿ ಹಾಡಿರಿ ಮತ್ತು ಕೊಟ್ಟಿರುವ ಚಿತ್ರಗಳೊಂದಿಗೆ ಅವುಗಳನ್ನು ಹೊಂದಿಸಿ ಬರೆಯಿರಿ.


೧. ಹಾವಿನಹೆಡೆ ಚಂದ ಮಾವಿನಮಿಡಿ ಚಂದ
ಹಾರಾಡೊ ಗಿಣಿಯು ಬಲುಚಂದ। ಕಂದಯ್ಯ
ನೀ ಚಂದ ನನ್ನ ಮನೆಗೀಗ

(ಅ)




೨. ತೊಟ್ಟೀಲ ಹೊತ್ಕೊಂಡು ತೌರ್ ಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡ್ಕೊಂಡು। ತಂಗ್ಯಮ್ಮ
ತಿಟ್ ಹತ್ತಿ ತಿರುಗಿ ನೋಡ್ಯಾಳ.

(ಆ)



೩. ಇನ್ನೆಲ್ಲಿ ನೋಡಲಿಂಥ ಬಳೆಯ ಬಳೆಗಾರ ಶೆಟ್ಟಿ
ನಮ್ಮ ನಾಡಲ್ಲಿ ಬಳೆಯಿಲ್ಲ ಬಳೆಗಾರ
ಕೊಂಡ್ ಹೋಗೋ ನನ್ನ ತವರೀಗೆ.

(ಇ)



೪. ಜನಕರಾಯನ ಮಗಳು ಬನಕೆ ತೊಟ್ಟಿಲ ಕಟ್ಟಿ
ಲವಕುಶರನ್ನು ತೂಗ್ಯಾಳ। ಸೀತಾದೇವಿ
ನಗುತ ವನವಾಸ ಕಳೆದಾಳ.

(ಈ)



ಆ) ಬೇರೆ ಬೇರೆ ವಿಷಯಗಳನ್ನು ಕುರಿತಾದ ಜನಪದ ತ್ರಿಪದಿಗಳನ್ನು ಸಂಗ್ರಹಿಸಿರಿ.

ಛಂದಸ್ಸು

ತ್ರಿಪದಿ

'ತ್ರಿ' ಎಂದರೆ ಮೂರು 'ಪದಿ' ಎಂದರೆ ಪಾದ(ಸಾಲು)ಗಳು. ಹೆಸರೇ ಸೂಚಿಸುವಂತೆ ತ್ರಿಪದಿ ಎಂಬುದು ಮೂರು ಸಾಲುಗಳುಳ್ಳ ಪದ್ಯ. ಸರ್ವಜ್ಞನ ಕಾಲಕ್ಕೆ ಬೃಹತ್ತಾಗಿ ಬೆಳೆದು ಕನ್ನಡ ಸಾಹಿತ್ಯದಲ್ಲಿ ಮಹತ್ವದ ಸ್ಥಾನ ಕಲ್ಪಿಸಿಕೊಂಡಿವೆ. ಕನ್ನಡ ಜನಪದ ಸಾಹಿತ್ಯ ಪ್ರಕಾರಗಳಲ್ಲಿ ತ್ರಿಪದಿಗಳದೇ ಸಿಂಹಪಾಲು.

ತಾಯಿದ್ರೆ ತವರೆಚ್ಚು-ತಂದಿದ್ರೆ ಬಳಗೆಚ್ಚು

*****

೧೨. ಕರ್ಚೀಫ್ ಮಹಿಮೆ

– ಜಯಪ್ರಕಾಶ ಅಬ್ಬಿಗೇರಿ

ಪ್ರವೇಶ: ಅನೇಕ ಉದ್ದೇಶಗಳಿಗಾಗಿ ನಾವು ಓದುತ್ತೇವೆ. ಓದುವುದರ ಮೂಲಕ ಮನಸ್ಸು ಹಗುರವಾಗಬೇಕು, ಮನಸ್ಸಿಗೆ ಆನಂದವಾಗಬೇಕು ಎಂಬ ಅಪೇಕ್ಷೆಗಳೂ ಇರುತ್ತವೆ. ಈ ಉದ್ದೇಶದಿಂದಲೇ ಲಲಿತ ಪ್ರಬಂಧಗಳು ಹುಟ್ಟಿಕೊಂಡವು. ಇವುಗಳಲ್ಲಿ ತೀರಾ ಸಾಮಾನ್ಯವಾದ ವಿಷಯಗಳು ಲೇಖಕರ ಸೃಜನಶೀಲ ಚಿಂತನೆಯಲ್ಲಿ ತೊಯ್ದು ವಿಶೇಷವಾಗಿ ಮನಸ್ಸಿಗೆ ಮುದಕೊಡುವ ರೀತಿಯಲ್ಲಿ ನಿರೂಪಿತವಾಗುತ್ತವೆ. ಕರ್ಚೀಫ್ ಎಂಬ ಒಂದು ಸಾಧಾರಣ ವಸ್ತುವಿನ ಬಹುಮುಖ ವಿವರಣೆಯನ್ನು ಈ ಗದ್ಯಭಾಗ ವಿಶಿಷ್ಟ ರೀತಿಯಲ್ಲಿ ಮುಂದಿಡುತ್ತದೆ.

ಕರ್ಚೀಫ್ – ಇದರ ಬಗೆಗೆ ಬರೆಯಬೇಕೆಂಬ ಹಂಬಲ ಉಂಟಾದದ್ದು ಮೊನ್ನೆ ಬಸ್ಸಿನಲ್ಲಿ ನಾನು ಇದನ್ನು ಕಳೆದುಕೊಂಡ ಮೇಲೆ. ಸಾಮಾನ್ಯವಾಗಿ ನಾವು ಕಳೆದುಕೊಳ್ಳಬಹುದಾದ ವಸ್ತುಗಳಲ್ಲಿ ಚಪ್ಪಲಿ, ಚಾಳೀಸು ಇವುಗಳೊಂದಿಗೆ ಕರ್ಚೀಫೂ ಒಂದು. ಇದರ ಹೆಸರೇ ಸೂಚಿಸುವಂತೆ ಅತೀ ಚೀಪ್ ಬೆಲೆಯಲ್ಲಿ ಕೈಗೆಟಕುವ ಬಟ್ಟೆಯ ತುಂಡು ಇದು. ಇದೇ ತುಂಡು ತನ್ನ ಅಂಚನ್ನು ಹೊಲಿಸಿಕೊಂಡು 'ಕರ್ಚೀಫ್' ಎಂಬ ದೊಡ್ಡ ಹೆಸರು ಪಡೆದಿದೆ.

ಸಣ್ಣವರಿದ್ದಾಗ ಮೂಗಿಗೂ ಹಾಗೂ ಅಂಗಿಯ ತೋಳಿಗೂ ಅವಿನಾಭಾವ ಸಂಬಂಧವಿತ್ತು. ಮೂಗಿನಲ್ಲಿ ಸಿಂಬಳ ಕಾಣಿಸಿಕೊಂಡರೆ ಎಡ ಬಲತೋಳು ಆಟೋಮೆಟಿಕ್ ಆಗಿ ಅದನ್ನು ಒರೆಸುವಂತಹ ಪ್ರಯತ್ನ ಮಾಡೇ ಮಾಡುತ್ತಿತ್ತು. ಹೀಗಾಗಿ ಅಂಗಿಯನ್ನು ತೊಳೆದು ಇಸ್ತ್ರಿಮಾಡಿದ ನಂತರ ಅದರ ತೋಳುಗಳು ಮಾತ್ರ ಸ್ಟಾರ್ಚ್ ಹಾಕಿದಂತೆ ಖಡಕ್ ಆಗಿ ಕಂಗೊಳಿಸುತ್ತಿದ್ದವು. ಮಕ್ಕಳ ಅಂಗಿಯ ತೋಳುಗಳನ್ನು ತೊಳೆದು ತೊಳೆದು ಸಾಕಾಗಿ ತಾಯಂದಿರು ಈ ತೊಂದರೆ ತಪ್ಪಿಸಲು ಒಂದು ಅರಿವೆಗೆ ದಾರಕಟ್ಟಿ ಅದನ್ನು ಮಕ್ಕಳ ಕೊರಳಿಗೆ ಕಟ್ಟಿ ಬಿಡುತ್ತಿದ್ದರು.


ಹೀಗಾಗಿ ಮಕ್ಕಳಿಂದ ಕರ್ಚೀಫ್ ಕಳೆಯುವ ಹಾಗೂ ಅವರ ಅಂಗಿಯ ತೋಳುಗಳನ್ನು ತೊಳೆಯುವ ತೊಂದರೆಯೂ ಸಹಿತ ತಪ್ಪುತ್ತಿತ್ತು. ಆದರೆ ಈಗ ಅದೆಲ್ಲ ಕಡಿಮೆಯಾಗಿ ಮೂಗಿನ ಚಾರ್ಜು ಅಂಗಿಯ ತೋಳಿನ ಬದಲಿಗೆ ಕರ್ಚೀಫ್‌ಗೆ ಬಂದಿದೆ. ಹೀಗಾಗಿ ಇದು ಮೂಗಿನ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು ಮಾನ ಕಾಪಾಡುತ್ತದೆ. ನೆಗಡಿಯಾದಾಗ ಆಗಾಗ ಸೀನಲೆಂದು ಹೊರಗೆ ಹೋಗುವ ತೊಂದರೆಯನ್ನು ಸಹ ಇದು ತಪ್ಪಿಸುತ್ತದೆ. ಕುಳಿತಲ್ಲೇ ಮೂಗನ್ನು ಕರ್ಚೀಫ್‌ನಿಂದ ಮುಚ್ಚಿ 'ಸೊಡ್ರಕ್' ಎಂದು ಸೀನಿ ಮತ್ತೆ ಅದನ್ನು ಮಡಚಿ ಕಿಸೆಯಲ್ಲೇ ಇಟ್ಟುಕೊಳ್ಳುವ ಅನುಕೂಲತೆಯನ್ನೂ ಸಹ ಈ ಕರ್ಚೀಫ್ ಮಾಡಿಕೊಡುತ್ತದೆ. ಹಾಗೆಂದು ಇದನ್ನು ತುಚ್ಛವಾಗಿಯೂ ಸಹ ಕಾಣುವಂತಿಲ್ಲ. ಬೇಸಿಗೆಯ ಬೇಗೆಯಲ್ಲಿ ಬೆಂದು ಬೆವರಿದಾಗ ಮುಖವನ್ನು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಹೊಲಿಸಿದ ಕಿಮ್ಮತ್ತಿನ ಡ್ರೆಸ್‌ಗಳಿಂದ ಒರೆಸಿಕೊಳ್ಳಲಾದೀತೇ? ಆಗ ಕಿಸೆಯಲ್ಲಿನ ಕರ್ಚೀಫ್ ನಮಗೆ ಗತಿ. ಕಚೇರಿಯಲ್ಲಿನ ಜವಾನ ಕುರ್ಚಿ ಟೇಬಲ್‌ಗಳ ಮೇಲಿನ ಧೂಳು ಹೊಡೆಯಲು ಮರೆತಿದ್ದರೆ ಅದನ್ನು ಸ್ವಚ್ಛಮಾಡಲು ನಮಗೆ ಕರ್ಚೀಫ್ ಬೇಕು. ತಲೆನೋಯತೊಡಗಿದರೆ ಹಣೆಗೆ ಕರ್ಚೀಫ್ ಕಟ್ಟಿಕೊಂಡು ತಾತ್ಕಾಲಿಕ ಉಪಶಮನ ಪಡೆಯಲು ಸಾಧ್ಯವಾಗುತ್ತದೆ. ಪೇಟೆಗೆ ಚೀಲ ಮರೆತು ಹೋದರೆ ಕಾಯಿಪಲ್ಯೆ ಅಥವಾ ಹಣ್ಣು ತರಲು ಬಹು ಉಪಯೋಗಿಯಾದ ಕರ್ಚೀಫ್ ಕೈಗೆ ಬರುತ್ತದೆ.



ಪ್ರಯಾಣದ ಸಮಯದಲ್ಲಂತೂ ಸೀಟು ಹಿಡಿಯುವ ಮೊದಲ ಅಸ್ತ್ರವೇ ಕರ್ಚೀಫ್. ಕಿಟಕಿಯಿಂದ ಇದನ್ನು ತೂರಿದ ತಕ್ಷಣ ಇದಕ್ಕೆ ಮರುಳಾಗಿ ಇಳಿಯುತ್ತಿರುವ ಪ್ರಯಾಣಿಕರು ಇದನ್ನು ತಮ್ಮ ಕಿಸೆಗೆ ಸೇರಿಸಿಕೊಂಡು ಸುಮ್ಮನೆ ಹೋಗುವವರೇ ಹೆಚ್ಚಾಗಿರುವುದರಿಂದ ಸೀಟು ಹಿಡಿಯಲು ಸಹಿತ ಕರ್ಚೀಫು ಕೊಡಲು ಹಿಂಜರಿಯುವ ಪ್ರಸಂಗ ಬಂದಿದೆ.

ಒಂದು ಟಾವೆಲ್‌ನಲ್ಲಿ ಸರಿಯಾಗಿ ಎಂಟು ತುಂಡುಗಳನ್ನು ಮಾಡಿದಾಗ ಅದರಲ್ಲಿನ ಒಂದು ತುಂಡುಭಾಗದ ಅಳತೆಯ ಈ ಕರ್ಚೀಫು ಟಾವೆಲ್‌ಗಿಂತಲೂ ಹೆಚ್ಚು ಅನುಕೂಲಕರ. ಎಲ್ಲ ಕೆಲಸ ಮುಗಿಸಿ ಮತ್ತೆ ಕಿಸೆ ಸೇರುವ ಇದು ಟಾವೆಲ್ಲನ್ನು ಕಂಡು, ಮುಖ ಒರೆಸುವ ವಸ್ತುವಾದೆ, ಸೀಟು ಹಿಡಿಯಲು ಅಸ್ತ್ರವಾದೆ, ಧೂಳು ಝಾಡಿಸುವ ಅರಿವೆಯೂ ಆದೆ, ಕಾಯಿಪಲ್ಯೆಗೆ ಚೀಲವಾದೆ, ಸಿಂಬಳಬುರುಕರ ಸಾಧನವೂ ಆದೆ, ಹುಡುಗಿಯರ ಕೈಯಲ್ಲಿನ ಹ್ಯಾಂಡ್ ಕೀ ಆದೆ, ನೀನಾರಿಗಾದೆಯೋ ಎಲೆ ಟಾವೆಲ್ಲೇ? ಎಂದು ಅಣಕಿಸುತ್ತದೆ. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎನ್ನುವಂತೆ ಬಹು ಉಪಯೋಗಿ ಕರ್ಚೀಫಿನ ಮಹಿಮೆಯನ್ನು ಮರೆಯುವಂತಿಲ್ಲ.

ಕೃತಿಕಾರರ ಪರಿಚಯ :



ಜಯಪ್ರಕಾಶ ಅಬ್ಬಿಗೇರಿ ಅವರ ಪೂರ್ಣ ಹೆಸರು ಜಯಪ್ರಕಾಶ ಕಳಕಪ್ಪ ಅಬ್ಬಿಗೇರಿ. ಇವರು ೧೯೬೮ರಲ್ಲಿ ಗದಗದಲ್ಲಿ ಜನಿಸಿದರು. ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಸೇವೆ ಸಲ್ಲಿಸುತ್ತಿರುವ ಇವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. 'ಶ್ರೀಮತಿಯ ಹನಿಮೂನ್', 'ಮಹಡಿಯ ಮೇಲೊಂದು ಮನೆಯ ಮಾಡಿ', 'ಕುಂಬಾರ ಶಿವಲಿಂಗಪ್ಪನವರು', 'ಸ್ವಾತಂತ್ರ್ಯಯೋಧ ಶತಾಯುಷಿ ಶ್ರೀ ತಿಮ್ಮರೆಡ್ಡಿಯವರು' ಮುಂತಾದವು ಇವರ ಕೃತಿಗಳು.

*ಈ ಪಾಠವನ್ನು ಇವರ **"ಮಹಡಿಯ ಮೇಲೊಂದು ಮನೆಯ ಮಾಡಿ"** ಕೃತಿಯಿಂದ ಆರಿಸಿಕೊಳ್ಳಲಾಗಿದೆ.*

ಪದಗಳ ಅರ್ಥ :

ಅಂಚು – ತುದಿ;
ಅರಿವೆ – ಬಟ್ಟೆ;
ಅವಿನಾಭಾವ – ಒಂದಕ್ಕೊಂದು ಬಿಡದ;
ಕೈಗೆಟಕುವ – ಕೊಳ್ಳಲು ಸಾಧ್ಯವಾಗುವ;
ಚಾಳೀಸು – ಕನ್ನಡಕ;
ಚೀಪ್ – ಕಡಿಮೆ ಬೆಲೆಯ;
ಟೊಪ್ಪಿಗೆ – ಟೋಪಿ;
ತುಚ್ಛ – ಕೀಳು;
ನಾಮಾಂಕಿತ – ಹೆಸರು;
ಸ್ಟಾರ್ಚ್ – ಗಂಜಿ;
ಹಂಬಲ – ಆಸೆ;
ಹಾರೈಸು – ಆಶಿಸು.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಅಬ್ಬಿಗೇರಿಯವರು ಹೇಳಿರುವಂತೆ ಸಾಮಾನ್ಯವಾಗಿ ನಾವು ಕಳೆದುಕೊಳ್ಳಬಹುದಾದ ವಸ್ತುಗಳಾವುವು?

೨. ಅಬ್ಬಿಗೇರಿಯವರು ಕೈಗೆಟುಕುವ ಬಟ್ಟೆತುಂಡು ಅಂಚುಗಳನ್ನು ಹೊಲಿಸಿಕೊಂಡು ಯಾವ ಹೆಸರನ್ನು ಪಡೆದಿದೆ ಎಂದಿದ್ದಾರೆ?

೩. ತೊಳೆದು ಇಸ್ತ್ರಿಮಾಡಿದ ಅಂಗಿಯ ತೋಳುಗಳು ಮಾತ್ರ ಸ್ಟಾರ್ಚ್ ಹಾಕಿದಂತೆ ಖಡಕ್ ಆಗಿ ಕಂಗೊಳಿಸುತ್ತಿದ್ದವು ಏಕೆ?

೪. ಮೂಗಿನ ಸಂಪೂರ್ಣ ಜವಾಬ್ದಾರಿಯನ್ನು ತೆಗೆದು ಕೊಂಡಿರುವುದು ಯಾವುದು ಎಂದು ಲೇಖಕರು ಹೇಳಿದ್ದಾರೆ?

೫. ಸೀಟು ಹಿಡಿಯಲು ಕರ್ಚೀಫು ಕೊಡಲು ಹಿಂಜರಿಯುವ ಪ್ರಸಂಗ ಬಂದಿದೆ ಎಂದು ಲೇಖಕರು ಏಕೆ ಹೇಳುತ್ತಾರೆ?

ಆ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ತಾಯಂದಿರು ಅರಿವೆಯನ್ನು ಮಕ್ಕಳ ಕೊರಳಿಗೆ ಕಟ್ಟುತ್ತಿದ್ದರು ಏಕೆ?

೨. ಕರ್ಚೀಫನ್ನು ಯಾವ ಯಾವ ಕೆಲಸಗಳಿಗೆ ಬಳಸಲಾಗುತ್ತದೆ?

೩. ಅಬ್ಬಿಗೇರಿಯವರು ಪ್ರಸ್ತಾಪಿಸಿರುವಂತೆ ಕರ್ಚೀಫ್ ಟವಲ್ಲನ್ನು ಹೇಗೆ ಅಣಕಿಸುತ್ತದೆ?

೪. ಕರ್ಚೀಫಿಗೆ ಯಾವ ಗಾದೆ ಅನ್ವಯಿಸುತ್ತದೆ? ಏಕೆ?

ಭಾಷಾಭ್ಯಾಸ

ಅ) ಕೆಳಗಿನ ಪದಗಳ ಅರ್ಥವ್ಯತ್ಯಾಸವನ್ನು ತಿಳಿಸಿರಿ.

ಅಂಗಿ – ಅಂಗ, ಬೇಗೆ – ಬೇಗ, ಅಸ್ತ್ರ – ವಸ್ತ್ರ.

ಆ) ಗುಂಪಿಗೆ ಸೇರದ ಪದಕ್ಕೆ ಸುತ್ತುಹಾಕಿ.

ಕರ್ಚೀಫ್, ಟವೆಲ್, ಕೈವಸ್ತ್ರ, ದಸ್ತಿ.

ಮಳೆ, ಚಳಿ, ಬಿಸಿಲು, ಮಧ್ಯಾಹ್ನ.

ಹೆಂಗಸು, ಕನ್ಯೆ, ತರುಣಿ, ಹುಡುಗಿ.

ಕನ್ನಡಕ, ಚಾಳೀಸು, ಪೆನ್ನು, ಚಶ್ಮ.

ಇ) ಉದಾಹರಣೆಯನ್ನು ಗಮನಿಸಿ. ಕೆಳಗಿನ ವಾಕ್ಯದಲ್ಲಿ ಗೆರೆ ಎಳೆದಿರುವ ಪದಗಳನ್ನು ಬಳಸಿ ಅರ್ಥವತ್ತಾದ ಸ್ವಂತ ವಾಕ್ಯಗಳನ್ನು ರಚಿಸಿರಿ.

ಕಂಗೊಳಿಸು: ದೀಪಾಲಂಕಾರದಿಂದ ಮದುವೆಮನೆ ಅರಮನೆಯಂತೆ ಕಂಗೊಳಿಸುತ್ತಿತ್ತು.

ಹಂಬಲಿಸು: ಅನಾರೋಗ್ಯದಿಂದ ಮಗು ಹೊರಬಂದರೆ ಸಾಕು ಎಂದು ತಾಯಿ ಹಂಬಲಿಸಿದಳು.

ಕಾಯಿಪಲ್ಯೆ: ಪ್ರತಿ ಭಾನುವಾರ ನಾವು ಮಾರುಕಟ್ಟೆಗೆ ಹೋಗಿ ಕಾಯಿಪಲ್ಯೆ ತರುತ್ತೇವೆ.

ಬೆರಗು: ಅಷ್ಟು ಎತ್ತರದ ಗೊಮ್ಮಟೇಶನ ಮೂರ್ತಿಯನ್ನು ನೋಡಿದ ಮಕ್ಕಳು ಬೆರಗಾದರು.

ಈ) ಸಮಾನಾರ್ಥಕ ಪದಗಳನ್ನು ನಿಘಂಟು ನೋಡಿ ಬರೆಯಿರಿ:

ಬೆರಗು, ರಂಗು, ತಲೆ.

ಉ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ:

ನಾಮಾಂಕಿತ, ಮಕ್ಕಳಿಂದ, ನೀನಾರು, ಬಹೂಪಯೋಗಿ, ಸಾಕಾದ, ಒಂದೆರಡು.

ಭಾಷಾಚಟುವಟಿಕೆ

ಅ) ಅಂತ್ಯಾಕ್ಷರದಿಂದ ಪ್ರಾರಂಭವಾಗುವ ಐದು ಪದಗಳ ಮೂರು ಪದಬಂಡಿಗಳನ್ನು ರಚಿಸಿರಿ.

ಉದಾಹರಣೆ: ಹಂಬಲ, ಲವಂಗ, ಗರಗಸ, ಸಹಜ, ಜಹಜು.

ಹಂ	ಬ	ಲ					
		ವಂ					
		ಗ	ರ	ಗ	ಸ		
					ಹ		
					ಜ	ಹ	ಜು

ಆ) ಬೆಟ್ಟದ ಕೊನೆಯ ಭಾಗವನ್ನು ಸೂಚಿಸಲು ಬೆಟ್ಟದ ತುದಿ ಎನ್ನುತ್ತೇವೆ. ಹೀಗೆಯೇ ಕೆಳಗಿನವುಗಳ ಕೊನೆಯ ಭಾಗವನ್ನು ಸೂಚಿಸುವ ಪದಗಳನ್ನು ಆವರಣದಿಂದ ಆರಿಸಿ ಬರೆಯಿರಿ. (ಗಡಿ, ಅಂಚು, ತುದಿ)

ಸೀರೆಯ ಕೊನೆಯಭಾಗ ....

ದೇಶದ ಕೊನೆಯ ಭಾಗ ....

ಮರದ ಕೊನೆಯ ಭಾಗ ....

ಇ) ಲಲಿತ ಪ್ರಬಂಧಗಳನ್ನು ಸಂಗ್ರಹಿಸಿ ಓದಿರಿ.

ಈ) 'ಕರ್ಚೀಫ್ ಮಹಿಮೆ' ಲೇಖನಕ್ಕೆ ಅನ್ವಯಿಸುವ ಗಾದೆಗಳನ್ನು ಬರೆಯಿರಿ.

ವ್ಯಾಕರಣ

ಭಾಗ – 'ಅ'

ನಾಮಪದ

ಕ್ರಿಯೆಯ ಅರ್ಥವನ್ನು ಕೊಡದೆ ಇರುವ ಎಲ್ಲಾ ನಾಮವಾಚಕಪದಗಳನ್ನು ನಾಮಪದಗಳೆನ್ನವರು. ನಾಮಪದದ ಮೂಲರೂಪವೇ ನಾಮಪ್ರಕೃತಿ. ನಾಮ ಪ್ರಕೃತಿಯನ್ನು ಪ್ರಾತಿಪದಿಕಗಳೆಂದೂ ಕರೆಯುತ್ತಾರೆ. ವಸ್ತು, ವ್ಯಕ್ತಿ, ಪ್ರಾಣಿ, ಸ್ಥಳ, ಗುಣ, ಸ್ವಭಾವ, ಸಂಖ್ಯೆ, ಸ್ಥಾನ, ಅಳತೆ, ತೂಕ ಇತ್ಯಾದಿಗಳನ್ನು ಸೂಚಿಸುವ ಪದಗಳೆಲ್ಲವೂ ನಾಮಪದ ಎನಿಸುವವು. ನಾಮಪದಗಳನ್ನು ಅವುಗಳ ಸ್ವರೂಪಕ್ಕೆ ಅನುಗುಣವಾಗಿ ಅನೇಕ ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.

ನಾಮಪದಗಳಲ್ಲಿ ಮುಖ್ಯವಾದವು

೧ ವಸ್ತುವಾಚಕ ಅಥವಾ ನಾಮವಾಚಕ:

ವಸ್ತುಗಳ ಹೆಸರುಗಳನ್ನು ಹೇಳುವ ಶಬ್ದಗಳೆಲ್ಲವೂ ವಸ್ತುವಾಚಕಗಳು ಎನಿಸುವುವು. ಉದಾ: ಮನುಷ್ಯ, ಬಸವ, ಮುದುಕ, ಮರ, ಹಣ್ಣು, ಅಡವಿ, ಶಾಲೆ.

ವಸ್ತುವಾಚಕದಲ್ಲಿ ರೂಢನಾಮ, ಅಂಕಿತನಾಮ, ಅನ್ವರ್ಥನಾಮ ಎಂದು ಮೂರು ಉಪ ವಿಭಾಗ ಮಾಡಬಹುದು.

ರೂಢನಾಮ:

ರೂಢಿಯಿಂದ ಬಂದ ನಾಮವಾಚಕಗಳು ರೂಢನಾಮಗಳು ಎನಿಸುವುವು.

ಉದಾಹರಣೆ: ನದಿ, ಪರ್ವತ, ದೇಶ, ಊರು, ಮರ. ಮನುಷ್ಯ, ಹುಡುಗ.

ಅಂಕಿತನಾಮ:

ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡ ಹೆಸರುಗಳೆಲ್ಲಾ ಅಂಕಿತನಾಮಗಳು ಎನಿಸುವುವು.

ಉದಾಹರಣೆ: ಗಂಗಾ, ಬ್ರಹ್ಮಪುತ್ರ, ಹಿಮಾಲಯ, ಭಾರತ, ಬೇಲೂರು, ಬೇವು, ಸಲ್ಮ, ಗಾಂಧೀಜಿ.

ಅನ್ವರ್ಥನಾಮ:

ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳೆಲ್ಲಾ ಅನ್ವರ್ಥನಾಮಗಳು ಎನಿಸುವುವು.

ಉದಾಹರಣೆ: ಯೋಗಿ, ವ್ಯಾಪಾರಿ, ಜಾಣ, ಇತ್ಯಾದಿ.

೨. **ಗುಣವಾಚಕಗಳು:**

ವಸ್ತುಗಳ ಗುಣ, ರೀತಿ ಸ್ವಭಾವಗಳನ್ನು ತಿಳಿಸುವ ವಿಶೇಷಣಗಳೆಲ್ಲಾ ಗುಣವಾಚಕಗಳು ಎನಿಸುವುವು,

ಉದಾಹರಣೆ: ಕೆಂಪು, ದೊಡ್ಡ, ಚಿಕ್ಕ, ಹಳೆಯ, ಕರಿಯ, ಕೆಟ್ಟ, ಒಳ್ಳೆಯ, ಕಿರಿಯ.

೩. **ಸಂಖ್ಯಾವಾಚಕಗಳು:**

ಸಂಖ್ಯೆಯನ್ನು ಹೇಳುವ ಶಬ್ದಗಳೆಲ್ಲವೂ ಸಂಖ್ಯಾವಾಚಕ ಎನಿಸುವುವು.

ಉದಾಹರಣೆ: ಒಂದು, ಎರಡು, ಹತ್ತು, ಸಾವಿರ, ಲಕ್ಷ.

೪. **ಸಂಖ್ಯೇಯವಾಚಕಗಳು:**

ಸಂಖ್ಯೆಯಿಂದ ಕೂಡಿದ ಶಬ್ದಗಳೆಲ್ಲವೂ ಸಂಖ್ಯೇಯವಾಚಕಗಳೆನಿಸುವವ

ಉದಾಹರಣೆ: ಒಂದನೆಯ, ಇಮ್ಮಡಿ, ಹತ್ತರಿಂದ ಮುಂತಾದವು.

೫. **ಭಾವನಾಮಗಳು:**

ಭಾವನೆಗಳನ್ನು ಸೂಚಿಸುವ ಶಬ್ದಗಳೇ ಭಾವನಾಮಗಳು.

ಉದಾಹರಣೆ: ಓಹೋ, ಅಯ್ಯೋ, ಅಬ್ಬಬ್ಬ.

೬. **ಪರಿಮಾಣವಾಚಕಗಳು:**

ವಸ್ತುಗಳ ಸಾಮಾನ್ಯ ಅಳತೆ, ಪರಿಮಾಣ, ಗಾತ್ರ–ಇತ್ಯಾದಿಗಳನ್ನು ಹೇಳುವ ಶಬ್ದಗಳನ್ನು ಪರಿಮಾಣವಾಚಕಗಳೆನ್ನುವರು.

ಉದಾಹರಣೆ ಅಷ್ಟು, ಇಷ್ಟು, ಹಲವು, ಕೆಲವು, ಅನಿತು

೭. **ಪ್ರಕಾರವಾಚಕಗಳು:**

ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳೆಲ್ಲ ಪ್ರಕಾರವಾಚಕಗಳೆನಿಸುವುವು. ಇವೂ ಒಂದು ಬಗೆಯ ಗುಣವಾಚಕಗಳೇ ಅಹುದು.

ಉದಾಹರಣೆ ಅಂಥ, ಅಂಥಹುದು, ಇಂಥ, ಇಂಥದು, ಇಂಥಹುದು, ಎಂತಹ ಮಂತಾದವು.

೮. **ದಿಗ್ವಾಚಕಗಳು:**

ದಿಕ್ಕುಗಳ ಹೆಸರನ್ನು ಸೂಚಿಸುವ ಶಬ್ದಗಳೆಲ್ಲ ದಿಗ್ವಾಚಕಗಳು

ಉದಾಹರಣೆಗೆ: ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಈಶಾನ್ಯ, ವಾಯುವ್ಯ ಇತ್ಯಾದಿ.

೯. **ಸರ್ವನಾಮಗಳು:**

ನಾಮಪದಗಳ ಸ್ಥಾನದಲ್ಲಿ ನಿಂತು, ಅವನ್ನು ಸೂಚಿಸುವ ಶಬ್ದಗಳು ಸರ್ವನಾಮಗಳು ಎನಿಸುವುವು

ಉದಾಹರಣೆ: ಅವನು, ಅವಳು, ಅದು, ಅವು, ನೀನು, ನೀವು, ನಾನು, ಯಾವನು, ಇದು, ಏನು ಇತ್ಯಾದಿ.

ಕೆಳಗಿನ ವಾಕ್ಯಗಳಲ್ಲಿ ವಸ್ತುವಾಚಕ, ಗುಣವಾಚಕ, ಸಂಖ್ಯಾವಾಚಕ ಮತ್ತು ಸರ್ವನಾಮಗಳನ್ನು ಗುರುತಿಸಿ.

೧. ಬಾಗಲಕೋಟೆ ಜಿಲ್ಲೆಯಲ್ಲಿರುವ ಬಾದಾಮಿ ಒಂದು ತಾಲೂಕು ಕೇಂದ್ರ.

೨. ಇದರ ಬಲಕ್ಕೆ ಸುಂದರವಾದ ನಟರಾಜನ ವಿಗ್ರಹವಿದೆ.

೩. ಶೈವ ಗುಹೆಯಿಂದ ಅರವತ್ತ್ನಾಲ್ಕು ಮೆಟ್ಟಿಲುಗಳನ್ನು ಏರಿ ಹೋದರೆ ಎರಡನೆಯ ಗುಹೆ ಇದೆ.

೪. ಇವರ ಪೂರ್ಣ ಹೆಸರು ಬಾಲಕೃಷ್ಣನ್ ರಾಜಗೋಪಾಲ.

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

*****

೧೩. ಬಿಡು ಭ್ರಮೆಯ

– ಬಿ.ಟಿ. ಲಲಿತಾ ನಾಯಕ್

ಪ್ರವೇಶ : ಸಮಾಜಜೀವಿಯಾದ ಮಾನವನಿಗೆ ಬೇರೆಲ್ಲರಿಗಿಂತಲೂ ತಾನೇ ಹೆಚ್ಚು, ತಾನು ಮಾಡಿದುದೇ ಆಡಿದುದೇ ದೊಡ್ಡದು ಎಂಬ ಭಾವ ಸಹಜವಾಗಿ ಇರುತ್ತದೆ. ಆದರೆ ಪ್ರಕೃತಿಯ ಒಂದು ಭಾಗವಾಗಿರುವ ಮಾನವ, ತನ್ನ ಸುತ್ತ ಇರುವ ಇತರ ಎಲ್ಲವನ್ನು ನೋಡಿ ತನ್ನ ಅಹಂಕಾರವನ್ನು ಮರೆತು ತನ್ನನ್ನು ತಿದ್ದಿಕೊಳ್ಳಬೇಕು. ತನಗಾಗಿ ಮಾತ್ರ ಬದುಕಿದರೆ ಸಾಲದು, ಇತರರಿಗಾಗಿ ಬದುಕಬೇಕು, ತನಗಿಂತ ಇತರರು ಹಿರಿಯರು ಎಂಬುದನ್ನು ಮನಗಾಣಬೇಕು, ತಾನು ಮಾತ್ರ ಮೇಲು ಎಂಬ ಭ್ರಮೆಯಿಂದ ಹೊರಬರಬೇಕು ಎಂಬುದೇ ಈ ಪದ್ಯದ ಆಶಯ.




ನಾ ಮೇಲಿನವನು ಬಲು ದೊಡ್ಡವನು ಎಂದು
ಮೆರೆದಾಡಬೇಡ ಗೆಳೆಯ
ನಿನಗಿಂತ ಮಿಗಿಲವರು ಇದ್ದಾರು ಬುವಿಯಲ್ಲಿ
ಸುಳ್ಳು ಭ್ರಮೆಯಲಿ ನೀ ಮುಳುಗಬೇಡ

ಬಲುದೊಡ್ಡ ಚಂದಿರನು ಇರುಳೆಲ್ಲ ಬೆಳಗುವನು
ಮರೆಯಾಗುವನು ಹಗಲ ಕಿರಣದಲ್ಲಿ
ಉರಿಯುವನು ಸೂರ್ಯ ಅವಗಿಂತ ಹಿರಿಯ
ಕಳೆದು ಹೋಗುವನು ಇರುಳ ಸೆರಗಿನಲ್ಲಿ

ಗ್ರಹತಾರೆಗಳ ಹೊತ್ತ ಗಗನಕ್ಕೆ ಮಿಗಿಲುಂಟೆ
ಸಾರಿ ಹೇಳಿತೆ ತಾ ಮಿಗಿಲು ಎಂದು
ಅಣುವಲ್ಲಿ ಅಣುವಾದ ಕಣ್ಣಿದ್ದು ಕುರುಡಾದ
ನೀ ಕೂಗಬಹುದು ಹಾಗೆಂದು

ಜನನ ಮರಣದ ಒಗಟ ಬಿಚ್ಚಿಹೇಳುವೆಯ ನೀನು
ಲೋಕದೊಳಿತಿಗೆ ನಿನ್ನ ಕಾಣ್ಕೆ ಏನು
ಹೇಳು ಗೆಳೆಯನೆ ಹೇಳು ಎದೆ ತಟ್ಟಿ ಹೇಳು
ಪ್ರಕೃತಿಯ ಹಿರಿತನಕೆ ನೀ ಸಾಟಿ ಏನು?



ಕೃತಿಕಾರರ ಪರಿಚಯ :

ಶ್ರೀಮತಿ ಬಿ. ಟಿ. ಲಲಿತಾ ನಾಯಕ್ ಅವರು ಚಿಕ್ಕಮಗಳೂರು ಜಿಲ್ಲೆಯ ತಂಗಲಿ ತಾಂಡ್ಯದಲ್ಲಿ ೧೯೪೫ರಲ್ಲಿ ಜನಿಸಿದರು. ಇವರು ವಿಧಾನ ಪರಿಷತ್ ಸದಸ್ಯರಾಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿ ಸೇವೆ ಸಲ್ಲಿಸಿದರು. ಇವರು ದಲಿತಸಾಹಿತ್ಯಕ್ಕೆ ಶಕ್ತಿ ತುಂಬುತ್ತಿರುವ ಕವಯಿತ್ರಿ, 'ಚಂದ್ರ ಪರಾಭವ', 'ಭಟ್ಟನ ಕನಸು', 'ನೆಲೆಬೆಲೆ', 'ಇದೇ ಕೂಗು ಮತ್ತೆ ಮತ್ತೆ' ಇವು ಇವರ ಪ್ರಮುಖ ಕೃತಿಗಳು. ಅಲ್ಲದೆ ಮಕ್ಕಳ ಕತೆ, ರೇಡಿಯೋ ನಾಟಕಗಳನ್ನೂ ಇವರು ರಚಿಸಿದ್ದಾರೆ.

'ಬಿಡು ಭ್ರಮೆಯ' ಪದ್ಯಭಾಗವನ್ನು ಅವರ **'ಇದೇ ಕೂಗು ಮತ್ತೆ ಮತ್ತೆ'** ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಪದಗಳ ಅರ್ಥ:

ಅಣು – ಕಣ;

ಒಗಟು – ಸುಲಭವಾಗಿ ಅರ್ಥ ಹೇಳಲಾಗದ ಮಾತು;

ಭ್ರಮೆ – ಭ್ರಾಂತಿ;

ಬುವಿ – ಭೂಮಿ;

ಮಿಗಿಲು – ಶ್ರೇಷ್ಠ;

ಸಾಟಿ – ಸಮ.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಕವಯಿತ್ರಿಯವರು ಮಾನವನು ಏನೆಂದು ಮೆರೆಯಬಾರದೆಂದು ಬಯಸಿದ್ದಾರೆ?

೨. 'ಬಿಡು ಭ್ರಮೆಯ' ಪದ್ಯದಲ್ಲಿ ತಿಳಿಸಿರುವಂತೆ ಇರುಳೆಲ್ಲ ಬೆಳಗುವವನು ಯಾರು?

೩. 'ಬಿಡು ಭ್ರಮೆಯ' ಪದ್ಯದಲ್ಲಿ ಹೇಳಿರುವಂತೆ ಇರುಳ ಸೆರಗಿನಲ್ಲಿ ಕಳೆದು ಹೋಗುವವನು ಯಾರು?

೪. ಮಾನವನಿಂದ ಬಿಡಿಸಲಾಗದ ಸೃಷ್ಟಿಯ ರಹಸ್ಯ ಯಾವುದೆಂದು ಕವಯಿತ್ರಿ ಹೇಳಿದ್ದಾರೆ?

೫. ಚಂದ್ರನಿಗಿಂತ ಹಿರಿಯ ಯಾರೆಂದು 'ಬಿಡು ಭ್ರಮೆಯ' ಪದ್ಯದಲ್ಲಿ ಹೇಳಿದೆ?

ಆ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. 'ಪ್ರಕೃತಿಯ ಹಿರಿತನಕೆ ನೀ ಸಾಟಿ ಏನು?' ಎಂದು ಕವಯಿತ್ರಿ ಏಕೆ ಪ್ರಶ್ನಿಸಿದ್ದಾರೆ?

೨. ಮಾನವನು ತಾ ಮೇಲೆಂಬ ಭಾವನೆಯನ್ನು ಬಿಡಬೇಕೆಂಬ ಸಂದೇಶವು 'ಬಿಡು ಭ್ರಮೆಯ' ಕವನದಲ್ಲಿ ಹೇಗೆ ನಿರೂಪಿತವಾಗಿದೆ?

೩. 'ಸುಳ್ಳಿನ ಭ್ರಮೆಯಲ್ಲಿ ಮುಳುಗಬೇಡ ನೀ' ಎಂದು ಕವಯಿತ್ರಿ ಏಕೆ ಹೇಳಿದ್ದಾರೆ?

೪. ಕವಯಿತ್ರಿಯವರು 'ಕಣ್ಣಿದ್ದು ಕುರುಡ ನೀ' ಎಂದು ಮನುಷ್ಯನಿಗೆ ಏಕೆ ಹೇಳಿದ್ದಾರೆ?

ಭಾಷಾಭ್ಯಾಸ

ಅ) 'ಬಿಡು ಭ್ರಮೆಯ' ಪದ್ಯದಲ್ಲಿ ಬಳಕೆಯಾಗಿರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.

ಆ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಗೆಳೆಯ, ತಾರೆ, ಗಗನ, ಬುವಿ, ಇರುಳು, ಸೂರ್ಯ, ಲೋಕ, ಕಣ್ಣು.

ಇ) ಕೆಳಗಿನ ತದ್ಭವಗಳಿಗೆ ತತ್ಸಮಗಳನ್ನು ಬರೆಯಿರಿ.

ಬುವಿ, ತಾರೆ, ಚಂದಿರ, ಸೂರಿಯ, ಲೋಗ.

ಭಾಷಾಚಟುವಟಿಕೆ

ಅ) 'ಬಿಡು ಭ್ರಮೆಯ' ಪದ್ಯವನ್ನು ಕಂಠಪಾಠ ಮಾಡಿರಿ.

ಆ) ಒಗಟು ಬಿಡಿಸಿ, ಉತ್ತರಿಸಿರಿ.

೧. ಅಪ್ಪನ ದುಡ್ಡು ಎಣಿಸಕಾಗಲ್ಲ; ಅಮ್ಮನ ಸೀರೆ ಮಡಿಚಕಾಗಲ್ಲ. ನಾನು ಯಾರು?

೨. ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ.

೩. ಮನೆಯೆಲ್ಲಾ ಸುತ್ತುತ್ತೆ; ಮೂಲೇಲಿ ಬಂದು ಕೂರುತ್ತೆ.

ಇ) ನಾಲ್ಕೈದು ಒಗಟುಗಳನ್ನು ಸಂಗ್ರಹಿಸಿ ಬರೆಯಿರಿ.

ಈ) ಮನುಷ್ಯನಿಗಿರುವ ಭ್ರಮೆಗಳನ್ನು ಕುರಿತು ಐದಾರು ವಾಕ್ಯದಲ್ಲಿ ಬರೆಯಿರಿ.

ತುಂಬಿದ ಕೊಡ ತುಳುಕುವುದಿಲ್ಲ

*****

೧೪. ಪಂಪಾಯಾತ್ರೆ

– ವಿ. ಸೀತಾರಾಮಯ್ಯ

ಪ್ರವೇಶ : ಪ್ರವಾಸ ಮಾಡುವುದು ಚೇತೋಹಾರಿ ಅನುಭವ. ಅಪೂರ್ವ ತಾಣಗಳನ್ನು ನೋಡಬೇಕೆಂಬ ಬಯಕೆಯಿಂದ ಪ್ರವಾಸಿಗರು ಪಯಣಿಸುವುದುಂಟು. ಹೀಗೆ ಹೋದವರು 'ಪ್ರವಾಸ ಕಥನ'ಗಳನ್ನು ಬರೆಯುತ್ತಾರೆ. ತಮ್ಮ ಅನುಭವಗಳ ಚಿತ್ರಣವನ್ನು ಸ್ವಾರಸ್ಯವಾಗಿ ದಾಖಲಿಸುತ್ತಾರೆ. ಇಂತಹ 'ಪ್ರವಾಸ ಕಥನ'ಗಳು ಇತಿಹಾಸದ ದಾಖಲೆಗಳಾಗಿ ಮಾತ್ರ ಉಳಿದುಕೊಳ್ಳುವುದಿಲ್ಲ. ಸಾಂಸ್ಕೃತಿಕ ದಾಖಲೆಗಳಾಗಿಯೂ ಮನುಷ್ಯ ಸ್ವಭಾವದ ಚಿತ್ರಗಳಾಗಿಯೂ ಉಳಿಯುತ್ತವೆ. ಸ್ವಾರಸ್ಯಕರ ಪ್ರವಾಸ ಕಥನಗಳನ್ನು ಓದುವುದು ಒಂದು ವಿಶಿಷ್ಟ ಅನುಭವವೇ ಸರಿ. ಉತ್ತಮ ಪ್ರವಾಸ ಕಥನವನ್ನು ಪರಿಚಯಿಸುವುದು ಈ ಲೇಖನದ ಉದ್ದೇಶವಾಗಿದೆ.

ಹಂಪೆ ಪುಣ್ಯಕ್ಷೇತ್ರ ಇಂಥಾ ಪುಣ್ಯಸ್ಥಳದಲ್ಲಿ ಇಷ್ಟು ಚೇಳು ಮೊಂಡರಕಪ್ಪೆಗಳು ಏಕಿವೆಯೊ ಆ ಪಂಪಾಪತಿಗೇ ಗೊತ್ತು. ಮೊಳದುದ್ದ ಮೊಂಡರಕಪ್ಪೆ, ಗೇಣುದ್ದ ಚೇಳುಗಳೆ? ಈ ಜನರಿಗೆ ಭಯವೇ ಇಲ್ಲವೇನೊ? ಅವರಿಗಂತೂ ಅದು ಸಾಮಾನ್ಯವಾಗಿ ಹೋಗಿದೆ. ಹೊಸದಾಗಿ ಅಲ್ಲಿಗೆ ಆ ದಿನ ತಾನೆ ಹೋಗಿದ್ದ ನಮಗೆ ಮೈಯೆಲ್ಲ ಬೈರಿಗೆ ಹಿಡಿದಂತೆ ಆಗಿತ್ತು. ಏಕಪ್ಪ ಇಲ್ಲಿಗೆ ಬಂದೆವು? ಕಾಮಲಾಪುರದ ಬಂಗಲೆಯಲ್ಲಿ ಇಳಿದುಕೊಂಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು? ಅನಿಷ್ಟವೇನಾದರೂ ಸಂಭವಿಸಿದರೆ ಗತಿಯೇನು? ಇವನನ್ನು ಬೇರೆ ಜೊತೆಯಲ್ಲಿ ಕರೆದುಕೊಂಡು ಬಂದೆವಲ್ಲ ಎಂದು ನನ್ನ ಜೊತೆಯವರು ಪಶ್ಚಾತ್ತಾಪ ಪಡುವುದಕ್ಕೆ ಆರಂಭಿಸಿದ್ದರು. ಅಲ್ಲಿದ್ದವರು, 'ಭಯವಿಲ್ಲ ಸ್ವಾಮಿ; ಒಂದೇ ಮನಸ್ಸಿನಲ್ಲಿ ಮಲಗಿಕೊಳ್ಳಿ; ಪಂಪಪ್ಪನ್ನ ನಂಬಿ ನಿದ್ದೆ ಹೋಗಿ; ಅವು ಏನು ಮಾಡುತಾವೆ?' ಎಂದರು. ನಮಗೆ ಧೈರ್ಯವಿಲ್ಲ, ಜೀವದಲ್ಲಿ ಜೀವವಿಲ್ಲ. ಇಳಿದುಕೊಂಡಿದ್ದ ಚಿಕ್ಕ ಮನೆಯಿಂದ ಹಾಸುಗೆ ಬಟ್ಟೆಗಳನ್ನೆಲ್ಲ ಹೊರಗೆ ತೆಗೆದುಹಾಕಿ, ಬಟ್ಟೆಬಟ್ಟೆಯನ್ನೂ, ಕೋಟುಗಳ ಜೇಬುಗಳನ್ನೂ, ರುಮಾಲುಗಳ ಸಂದಿಪದರಗಳನ್ನೂ, ಮಡಿಪೆಟ್ಟಿಗೆ ಪಾರಾಯಣ ಪುಸ್ತಕಗಳ ಚೀಲವನ್ನೂ ಒಂದೊಂದನ್ನಾಗಿ ಕೊಡವಿ, ಒದರಿ, ಚೇಳು ಹಾವುಗಳಾವುವೂ ಇಲ್ಲವೆಂದು ನಿಶ್ಚಯ ಮಾಡಿಕೊಂಡು, ಎಲ್ಲವನ್ನೂ ಹೊತ್ತುಕೊಂಡು ದೇವಸ್ಥಾನದ ಒಳಮಂಟಪಕ್ಕೆ ತೆಗೆದುಕೊಂಡು ಹೋಗಿ, ದೊಡ್ಡದೊಂದು ದೀಪದ ಬೆಳಕಿನಲ್ಲಿ ಒಬ್ಬರು ಕಾವಲು ಕುಳಿತೆವು. ಎದೆಯಲ್ಲಿ ಪುಕಪುಕ ಭಯ. ದೀಪವಿದೆ ಪಂಪಾಪತಿಯ ಅತಿನಿಕಟ ಸಾನ್ನಿಧ್ಯದಲ್ಲಿದ್ದೇವೆ; ಅವನು ನಡಸಿದಂತಾಗಲಿ ಎಂದು ಸಮಾಧಾನವನ್ನೂ ಧೈರ್ಯವನ್ನೂ ಹೇಳಿಕೊಂಡು ಮಲಗಬಾರದೆ? ಉಹುಂ. ಬಾಯಿ ಧೈರ್ಯ ಹೇಳುತ್ತಿದ್ದರೂ ಮನಸ್ಸು ಕೇಳಬೇಕಲ್ಲ. ಎಲ್ಲರೂ ಊಟಮಾಡಿ ಹಾಸುಗೆಗಳನ್ನು ಒಬ್ಬರ ಪಕ್ಕದಲ್ಲಿ ಒಬ್ಬರು ಒತ್ತಾಗಿ ಹಾಸಿ ಮಲಗಿಕೊಂಡೆವು. ನಡುನಡುವೆ ಹೆಚ್ಚಾಗಿ ಜಾಗ ಬಿಡಕೂಡದೆಂದು ಕರಾರು ನಡೆಯಿತು. ಒಪ್ಪಂದದ ಮೇರೆಗೆ ಒತ್ತೊತ್ತಾಗಿ ಮಲಗಿದೆವು. ನಮ್ಮ ಐವರ ತಲೆ ಭಾಗಗಳಿಗೆ ನಡುವೆ ದೀಪವೊಂದು ಉರಿಯುತ್ತಿತ್ತು. ಅದು ಹಾಗೆಯೇ ರಾತ್ರಿಯೆಲ್ಲ ಉರಿಯುತ್ತಿರಬೇಕೆಂದು ನಿರ್ಣಯವಾಗಿತ್ತು. ಪಂಪಾಪತಿ ವಿರೂಪಾಕ್ಷೇಶ್ವರನ ದಿವ್ಯ ಸನ್ನಿಧಿಯಲ್ಲಿ ಕೂಡ ಅಷ್ಟು ಪ್ರಕಾಶಮಾನವಾದ 'ಅಖಂಡ' ದೀಪವಿತ್ತೋ ಇಲ್ಲವೊ ತಿಳಿಯದು. ಮೊದಲೆ ಎಚ್ಚರದಿಂದ ಇರಬೇಕೆಂದೂ ಅಕಸ್ಮಾತ್ ಅನಿಷ್ಟ ಸಂಭವಿಸಿದರೆ ಏನು ಮಾಡಬೇಕೆಂದೂ ನಾವಂತೂ ಷರತ್ತುಗಳನ್ನು ಮಾಡಿಕೊಂಡೇ ಇದ್ದೆವಲ್ಲ. ಸ್ವಲ್ಪ ಹೊತ್ತು ಯಾರೂ ಮಾತನಾಡಲಿಲ್ಲ. ಕದಲುಮೆದಲದೆ,ಮುತ್ತಿಬರುವ ವಿಷಪ್ರಾಣಿಗಳ ಯೋಚನೆಯನ್ನು ಮನಸ್ಸಿನಿಂದ ಸರ್ವಪ್ರಯತ್ನದಿಂದಲೂ ದೂರ ಮಾಡುತ್ತ, ಸುಮಾರು ಕಾಲುಗಂಟೆಯ ಕಾಲ ಹಾಗೆಯೇ ಕಳೆದೆವು. ತಟ್ಟನೆ

ಮೂರ್ತಿಗಳು ಅಂಬಿನಂತೆ ಮೇಲಕ್ಕೆಗರಿ ನಿಂತು ಷರಟು ಪಂಚೆಗಳನ್ನು ಕೊಡವಿಕೊಂಡರು. ಹಾಸುಗೆ ಬಟ್ಟೆಗಳನ್ನು ಕಾಲಿನಿಂದ ಒದ್ದು, ಚೆಲ್ಲಾಡಿ ನಮ್ಮ ಕಡೆ ಬಂದು ಎಲ್ಲರನ್ನೂ ಎಬ್ಬಿಸಿಬಿಟ್ಟರು. 'ಏಳಿ, ಏನೋ ಮೇಲೆ ಬಿತ್ತು; ಹರಿದುಹೋಯಿತು; ಮೈಯೆಲ್ಲ ತಣ್ಣಗಾದಂತಾಯಿತು' ಎಂದರು. ಅಧಿಕಾರಿಯ ಜೋಡಿನ ಸಪ್ಪಳವನ್ನು ಕೇಳಿ ತೂಕಡಿಸುವ ಗುಮಾಸ್ತರು ಬೆಚ್ಚಿಬಿದ್ದು ಏಳುವಂತೆ ಎಲ್ಲರೂ ಎದ್ದು, ಬಟ್ಟೆಗಳಿಂದ ದೂರ ಸರಿದು ನಿಂತೆವು. ದೀಪವನ್ನು ಮೇಲೆತ್ತಿ ಒಬ್ಬರು ಹಿಡಿದುಕೊಂಡರು. ನಾವು ಮೂವರು ಸುಮ್ಮನೆ ಕಕ್ಕಾಬಿಕ್ಕಿಯಾಗಿ ನೋಡುತ್ತ ಕಿಂಕರ್ತವ್ಯ ಮೂಢರಾಗಿ ನಿಂತೆವು; ನನ್ನ ಮೈಗೂದಲು ನಿಮಿರಿನಿಂತವು; ಯಜಮಾನರು ಹತ್ತಿರವಿದ್ದ ಒಂದು ಗುಜ್ಜುಗೋಲನ್ನು ಹಿಡಿದುಕೊಂಡು ಬಂದರು. ಅದೇನೊ ಎಲ್ಲಿ ಹೋಯಿತೊ ಎಂದು ನಾಲ್ಕೂ ಕಡೆ ಹುಡುಕುವುದಕ್ಕೆ ಮೊದಲಾಯಿತು. ಯಾರಿಗೂ ಹಾಸುಗೆಗಳ ಹತ್ತಿರ ಹೋಗಿ ಅವನ್ನು ಮುಟ್ಟುವುದಕ್ಕೆ ಮಾತ್ರ ಧೈರ್ಯ ಇಲ್ಲ. ಯಜಮಾನರೇ ಮುಂದೆ ಬಂದರು. 'ಬೇಡಿ ಸಾರ್, ಸ್ವಲ್ಪ ತಾಳಿ, ಏನೊ ? ಹೇಗೊ' ಎಂದು ನಾವು ನಾಲ್ವರೂ ಹೇಳಲು ಅವರು ಹಿಂದೆ ಸರಿದು ನಿಲ್ಲಬೇಕಾಯಿತು. ನಮ್ಮ ಈ ದುಃಸ್ಥಿತಿಯ ಹುಚ್ಚು ಸಂಭ್ರಮವನ್ನು ದೂರದಿಂದ ನೋಡಿದ ಬೈರಾಗಿ ಚೆನ್ನಯ್ಯನು ಅಲ್ಲಿಗೆ ಬಂದು ಎಲ್ಲವನ್ನೂ ಹುಡುಕಿದನು. ಎಲ್ಲಿಯೂ ಯಾವುದೂ ಕಾಣಲಿಲ್ಲ. ಹಾಸುಗೆಗಳನ್ನೆಲ್ಲ ಪುನಃ ಕೊಡವಲು, ಕತ್ತಲೆಯಲ್ಲಿ ಜಾಗ್ರತೆ ಜಾಗ್ರತೆಯಾಗಿ ನನ್ನ ಕಡೆಗೇ ಹರಿದು ಕಪ್ಪಗೆ ಬರುತ್ತಿರುವ ಪ್ರಾಣಿಯೊಂದು ಕಾಣಿಸಿತು. ಚೆನ್ನಯ್ಯನು ನೋಡಿದನು. ಚೇಳೂ ಅಲ್ಲ, ಹಾವೂ ಅಲ್ಲ; 'ಏನು ಸ್ವಾಮಿ ನಿಮಗೇಕೆ ಇಷ್ಟು ಗಾಬರಿ? ಜೇಡರ ಹುಳ ಬಂದರೆ ಹೀಗೆ ಹುಚ್ಚು ಕುಣಿತ ಷುರುಮಾಡಿದ್ದೀರಲ್ಲ' ಎಂದು ಚಪ್ಪಾಳೆ ಹೊಡೆದುಕೊಂಡು ಮೊಳಕಾಲು ಬಡಿದುಕೊಂಡು ನಗುವುದಕ್ಕೆ ಪ್ರಾರಂಭಿಸಿದನು. ಬೇರೊಂದು ಸಮಯದಲ್ಲಿ ಯಾರಾದರೂ ಈ ರೀತಿ ಮಾತನಾಡಿದ್ದರೆ ಅವರಿಗೆ ಗ್ರಹಚಾರ ಬಿಡಿಸುತ್ತಿದ್ದೆವು. ಇತರರಿಗೆ ಗ್ರಹಚಾರ ಬಿಡಿಸುವ ವಿಷಯದಲ್ಲಿ ನಮ್ಮಲ್ಲಿ ಯಾರಿಗೆ ಯಾರೂ ಕಡಿಮೆಯಾದವರಲ್ಲ. ಬಂದ ಕೋಪವನ್ನು ನುಂಗಿಕೊಂಡು ಅವನ ಜೊತೆಯಲ್ಲಿ ವೀರಾಳುಗಳು ನಾವೂ ನಗುತ್ತ ನಿಂತೆವು. ರಾಯರು ಇದ್ದವರು, 'ಮೂರ್ತಿ, ಒಳ್ಳೆಯ ಕೆಲಸ ಕೊಟ್ಟಿರಿ ಕಣ್ರಿ; ಎಂಥ ದಿಗಲು ಹಚ್ಚಿಬಿಟ್ಟಿರಿ' ಎಂದರು. ಮೂರ್ತಿಗಳು 'ನಾನೇನು ಸಾರ್ ಮಾಡಲಿ; ಏನೋ ಮೇಲೆ ಬಿತ್ತು; ಎಷ್ಟೋ ಹೊತ್ತು ನೋಡೋಣ ಎಂದು ಸುಮ್ಮನೆ ಇದ್ದೆ; ಮುಲಮುಲ ಎಂದು ಮೈಮೇಲೆ ಹರಿಯಿತು. ಆಮೇಲೆ ಇದೇನು ಬಂತಪ್ಪ ಗ್ರಹಚಾರ ಇಲ್ಲಿ ಮಲಗಿದ್ದರೂ ಎಂದುಕೊಂಡವನು ಎದ್ದುಬಿಟ್ಟೆ. ಜೇಡರ ಹುಳು ಆಗೋ ಹೊತ್ತಿಗೆ ಸರಿಹೋಯಿತು! ಇನ್ನೇನಾದರೂ ಆಗಿದ್ದಿದ್ದರೆ? ಈ ಹುಳು ತಾನೆ ನೋಡಿ ಸಾರ್, ಅಷ್ಟು ದೊಡ್ಡದನ್ನು ಎಲ್ಲಿಯೂ ನೋಡಿಲ್ಲ ನಾನು' ಎಂದರು. ಯಜಮಾನರು 'ಎಲ್ಲರೂ ಸರಿಯೆ ಬಿಡಿ, ಅಸಹಾಯಶೂರರು. ನಮಗೆಲ್ಲ ಇಷ್ಟು ಧೈರ್ಯ ಇರುವ ಹೊತ್ತಿಗೇ ನಮ್ಮ ದೇಶೋದ್ಧಾರಕಾರ್ಯ ಈ ಗತಿಗೆ ಬಂದದ್ದು' ಇತ್ಯಾದಿಯಾಗಿ ಒಂದು ದೊಡ್ಡ ಉಪನ್ಯಾಸವನ್ನು ಕೊಟ್ಟರು. ಇಷ್ಟಾದ ಮೇಲೂ ನಮ್ಮ ಕಷ್ಟ ನಿವಾರಣೆಯಾಗಲಿಲ್ಲ; ನಮ್ಮ ಪಿರಿಕಿತನ ದೂರವಾಗಲಿಲ್ಲ.

'ಹಾಸುಗೇ ಗೀಸುಗೆ ಹಾಗೇ ಇರಲಿ, ಸಾರ್; ನೀವು ಯಾರೂ ಏನು ಬೇಕಾದರೂ ಮಾಡಿಕೊಳ್ಳಿ, ನಾನಂತೂ ಮಲಗಿಕೊಳ್ಳುವುದಿಲ್ಲ' ಎಂದು ವೆಂಕಟೇಶಯ್ಯನವರು ಹೇಳಿದರು.

ಯಜ– ಇನ್ನೇನು ಮಾಡುತ್ತೀರಿ, ಆದರೆ?

ವೆಂ–ಹೀಗೇ ಕೂತುಕೊಂಡೊ ನಿಂತುಕೊಂಡೊ ರಾತ್ರಿ ದಬ್ಬುತ್ತೇನೆ.


ರಾಯರು–ನನಗೂ ಹಾಗೇ ತೋರುತ್ತೆ, ಸಾರ್; ದೇವರು ಗೀವರುಎಲ್ಲ ಸಾಕು. ಚೇಳಿನ ಕೊಂಡಿಯ

ದರುಶನದಿಂದಲೇ ಮುಕ್ತಿಬಂದಿತು. ಬೆಳಗಾಗುತ್ತಲು ಇಲ್ಲಿಂದ ಹೊರಟು, ಊರಿಗೆ ಹೋಗಿ ಸೇರಿಕೊಳ್ಳೋಣ; ಇಲ್ಲಿರುವುದಕ್ಕೆ ನನ್ನ ಕೈಲಿ ಸುತರಾಂ ಆಗುವುದಿಲ್ಲ; ಮಧ್ಯಾಹ್ನ ನೋಡಿದ್ದೇ ಸಾಕು. ಈಗಲೇ ಮೂಟೆ ಕಟ್ಟಿ ಹೊರಡು ಅಂದರೂ ನಾನು ಸಿದ್ಧ.

ಆಗ ಸುಮಾರು ನಮ್ಮಲ್ಲಿ ಎಲ್ಲರಿಗೂ, ವಿಶೇಷವಾಗಿ ಐವರಲ್ಲಿ ಮೂವರಿಗೆ, ಅದೇ ಭಾವನೆ–ಒಳಗೆ ಮನಸ್ಸಿನಲ್ಲಿ; ಆದರೆ 'ಇಷ್ಟು ದೂರ ಬಂದು ಪಂಪಾ ಸರೋವರ, ವಿಟ್ಠಲಸ್ವಾಮಿ ಗುಡಿ, ಇವನ್ನು ನೋಡಿಕೊಂಡು ಹೋಗದಿದ್ದರೆ ಏನಪ್ಪ' ಎಂದು ಮುಂತಾಗಿ ಮಾತು ಬೆಳೆಯಲು, 'ಬೆಳಗಾಗಲಿ; ಯಾವುದೊಂದೂ ತೀರ್ಮಾನ ಮಾಡೋಣ, ಈಗ ಸಮಯ ಚೆನ್ನಾಗಿಲ್ಲ' ಎಂದು ಎಲ್ಲರೂ ಮನಸ್ಸು ಬಿಗಿಹಿಡಿದು ಪುನಃ ಹಾಗೂ ಹೀಗೂ ಧೈರ್ಯಮಾಡಿ ಮಲಗಿಕೊಂಡೆವು. ಭಯದ ತೀವ್ರತೆ ಕಡಮೆಯಾಗಿ, ಅದು ಮರೆತು ಹೋಗುವಂತೆ ಏನೇನೋ ಬೇರೆ ಪ್ರಸ್ತಾಪಗಳನ್ನೆತ್ತಿ ಮಾತನಾಡುತ್ತ ಒಬ್ಬೊಬ್ಬರಾಗಿ ನಿದ್ರಾವಶರಾದೆವು. ನಾನು ಕೋಳಾಲಮ್ಮನಿಗೆ ಹರಿಸಿಕೊಂಡು ನಿರ್ಭಯದಿಂದ ನಿದ್ದೆ ಮಾಡಿದೆ. ಮಧ್ಯಾಹ್ನದ ಸುತ್ತುವಿಕೆಯಿಂದ ಆಯಾಸವಾಗಿದ್ದುದರಿಂದ ಎಲ್ಲರಿಗೂ ಚೆನ್ನಾಗಿಯೇ ನಿದ್ದೆಹತ್ತಿತೆಂದು ಹೇಳಬೇಕು. ಪಂಪಾಪತಿಯ ಅನುಗ್ರಹ; ಯಾರಿಗೂ ವಿಷದ ಬಾಲ ಕುಟುಕಲಿಲ್ಲ!

ಬೆಳಗ್ಗೆ ಏಳುವ ಹೊತ್ತಿಗೆ ಏಳು ಗಂಟೆಯ ಮೇಲಾಗಿತ್ತು. ರಾತ್ರಿಯೆಲ್ಲ ಬಲವಾಗಿ ಮಳೆ ಬಂದಿದ್ದುದರ ಪ್ರಜ್ಞೆಯೇ ನಮ್ಮಲ್ಲಿ ಯಾರಿಗೂ ಇಲ್ಲ. ಎದ್ದವರು ಸ್ನಾನಾದಿಗಳನ್ನು ತೀರಿಸಿಕೊಂಡು ಬರೋಣವೆಂದು ನದಿಯ ಕಡೆ ಹೋಗಿ ನೋಡಿದರೆ ನದಿ ಐದಾರು ಅಡಿಗಳಷ್ಟು ಮೇಲೆ ಬಂದಿತ್ತು. ಪ್ರವಾಹ ಇನ್ನೂ ಹೆಚ್ಚುತ್ತಲೇ, ನದಿಯ ದಡ ಇನ್ನೂ ಕುಸಿದುಬೀಳುತ್ತಲೇ ಇತ್ತು. ಪ್ರವಾಹದ ಜೋರು ಜಾಸ್ತಿಯಾಗಿದ್ದರಿಂದ ಯಾರೂ ಅಲ್ಲಿ ಸ್ನಾನ ಮಾಡದೆ, ದೇವಸ್ಥಾನದ ಒಳಗಣ ಬಾವಿಯಲ್ಲಿಯೇ ಸ್ನಾನಾಚಮನಗಳನ್ನು ತೀರಿಸಿಕೊಂಡೆವು. ಆ ನೀರು ಎಷ್ಟು ಸೊಗಸಾಗಿ ಎಷ್ಟು ಪವಿತ್ರವಾಗಿ ಇತ್ತೋ! ನಮಗೆ ನೀರು ಸೇದುವ ಕಷ್ಟ ತಪ್ಪಲೆಂದು ನಾಲ್ಕು ಐದು ಆಳುದ್ದ ಆಳದ ಬಾವಿ ನಮ್ಮ ಕೈಗೆ ಎಟಕುವಂತೆ ಮೇಲೆ ಬಂದಿತ್ತು. ಹಂಡೆಯಿಂದ ನೀರು ತುಂಬಿಕೊಂಡು ಸ್ನಾನ ಮಾಡುವಂತೆ ನೀರನ್ನು ತುಂಬಿಕೊಂಡು ಸ್ನಾನ ಮಾಡಿದೆವು. ನಮ್ಮ ವಿಷಯದಲ್ಲಿ ನಿರ್ಜೀವ ವಸ್ತುಗಳಿಗೂ ಅಷ್ಟು ಮಮತೆ ಕರುಣೆ!

ಕೃತಿಕಾರರ ಪರಿಚಯ :



ವಿ.ಸೀ. ಎಂದೇ ಖ್ಯಾತರಾದ ಶ್ರೀ ವಿ.ಸೀತಾರಾಮಯ್ಯನವರು ೧೮೯೯ರ ಅಕ್ಟೋಬರ್ ೨ ರಂದು ಬೆಂಗಳೂರು ಜಿಲ್ಲೆಯ ಬೂದಿಗೆರೆ ಗ್ರಾಮದಲ್ಲಿ ಜನಿಸಿದರು. 'ದೀಪಗಳು', 'ನೆಳಲು–ಬೆಳಕು', 'ಹೆಜ್ಜೆ ಪಾಡು' (ಕವನ ಸಂಕಲನ); 'ಬೆಳದಿಂಗಳು', 'ಸೀಕರಣೆ' (ಲಲಿತ ಪ್ರಬಂಧ); 'ಆಗ್ರಹ', 'ಸೊಹ್ರಾಬ್ ರುಸ್ತುಮ್', 'ಪಾಪ ಪುಣ್ಯ' (ನಾಟಕ); 'ಅಶ್ವತ್ಥಾಮನ್', 'ಕವಿ ಕಾವ್ಯ ದೃಷ್ಟಿ', 'ಸಾಹಿತ್ಯಾವಲೋಕನ' (ಸಾಹಿತ್ಯ ವಿಮರ್ಶೆ)–ಇವು ಅವರ ಪ್ರಮುಖ ಕೃತಿಗಳು. ಇವರ 'ಅರಲು–ಬರಲು' ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ೧೯೫೪ರಲ್ಲಿ ಕುಮಟಾದಲ್ಲಿ ಜರುಗಿದ ೩೬ನೆಯ ಸಾಹಿತ್ಯ ಸಮ್ಮೇಳನಕ್ಕೆ ವಿ.ಸೀ.ಯವರು ಅಧ್ಯಕ್ಷರಾಗಿದ್ದರು.

'ಪಂಪಾಯಾತ್ರೆ' ಗದ್ಯಭಾಗವನ್ನು ವಿ.ಸೀ. ಯವರ 'ಪಂಪಾಯಾತ್ರೆ'ಯವರ ಪ್ರವಾಸ ಕಥನದಿಂದ ಆರಿಸಿ ಕೊಳ್ಳಲಾಗಿದೆ.

ಪದಗಳ ಅರ್ಥ:

ಅಂಬು–ಬಾಣ;

ಅಖಂಡ–ಇಡಿಯಾದ; ತುಂಡಾಗದ;

ಆಚಮನ–ಅಂಗೈಯಲ್ಲಿ ನೀರನ್ನು ಹಾಕಿಕೊಂಡು ಮಂತ್ರಪೂರ್ವಕವಾಗಿ ಸೇವಿಸುವುದು;

ಕಕ್ಕಾಬಿಕ್ಕಿ–ತಬ್ಬಿಬ್ಬಾಗಿ;

ಕದಲುಮೆದಲು–ಮಗ್ಗಲು ಬದಲಿಸದೆ, ಅಲುಗಾಡಾದಂತೆ;

ಕಿಂಕರ್ತವ್ಯಮೂಢ–ದಿಕ್ಕುತೋಚದ ಸ್ಥಿತಿ;

ಗುಜ್ಜುಗೋಲು–ಗಿಡ್ಡಾದ ಕೋಲು, ಮೋಟಾದ ಕೋಲು;

ಪಾರಾಯಣ–ಪವಿತ್ರ ಗ್ರಂಥಗಳನ್ನು ಮೊದಲಿನಿಂದ ಕಡೆಯವರೆಗೆ ಓದುವುದು;

ಪಿರಕಿತನ–ತರಲೆ, ತುಂಟತನ;

ಬೈರಿಗೆ–ಮರ ಕೊರೆಯುವ ಸಾಧನ;

ಸಾನಿಧ್ಯ–ಒಳ್ಳೆಯ ನೆಲೆ, ಆಶ್ರಯಸ್ಥಾನ;

ಸುತರಾಂ–ಪೂರ್ತಿಯಾಗಿ, ಸರ್ವಥಾ, ಖಂಡಿತವಾಗಿ.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಹಂಪೆಯ ಜನರಿಗೆ ಭಯವೇ ಇಲ್ಲವೇನೊ ಎನ್ನುವ ಭಾವನೆ ಯಾತ್ರಾರ್ಥಿಗಳ ಮನಸ್ಸಿಗೆ ಏಕೆ ಬಂದಿತು?

೨. ಮೂರ್ತಿಯು ಯಾವ ರೀತಿಯಲ್ಲಿ ಎದ್ದು ನಿಂತನು?

೩. 'ಪಂಪಾಯಾತ್ರೆ'ಯಲ್ಲಿ ನಿರೂಪಕನ ಕಡೆಗೆ ಹರಿದು ಬಂದ ಪ್ರಾಣಿ ಯಾವುದು?

೪. ವಿ.ಸೀಯವರು ನಿರ್ಭಯವಾಗಿ ನಿದ್ರೆ ಮಾಡಲು ಏನು ಮಾಡಿದರು?

೫. ನದಿಯಲ್ಲಿ ಯಾರೂ ಸ್ನಾನ ಮಾಡಲಿಲ್ಲ ಏಕೆ?

ಆ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡು ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಇಳಿದುಕೊಂಡಿದ್ದ ಮನೆಯಿಂದ ಹೊರಡುವ ಮುನ್ನ ಯಾತ್ರಾರ್ಥಿಗಳು ಹಾವು ಚೇಳುಗಳೇನು ಇಲ್ಲವೆಂದು ಹೇಗೆ ನಿಶ್ಚಯ ಮಾಡಿಕೊಂಡರು?

೨. ಚೆನ್ನಯ್ಯನು ಯಾತ್ರಾರ್ಥಿಗಳನ್ನು ಯಾವ ರೀತಿ ಅಪಹಾಸ್ಯ ಮಾಡಿದನು?

೩. ನಿರ್ಜೀವ ವಸ್ತುಗಳಿಗೂ ಮಮತೆ, ಕರುಣೆಯಿದೆ ಎಂಬ ಭಾವನೆ ವಿ.ಸೀಯವರ ಮನಸ್ಸಿಗೆ ಬಂದ ಸನ್ನಿವೇಶವನ್ನು ವಿವರಿಸಿರಿ.

ಇ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಏಳು ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಯಾತ್ರಾರ್ಥಿಗಳು ದೇವಾಲಯದ ಒಳಮಂಟಪದಲ್ಲಿ ಮಲಗುವ ಮುನ್ನ ಮಾಡಿಕೊಂಡ ಸಿದ್ಧತೆಗಳನ್ನು ಕುರಿತು ಬರೆಯಿರಿ.

೨. ಮೂರ್ತಿಯವರು ಸಹ ಯಾತ್ರಾರ್ಥಿಗಳನ್ನು ಎಬ್ಬಿಸಿದ ಸನ್ನಿವೇಶವನ್ನು ಕುರಿತು ಬರೆಯಿರಿ.

ಈ) ಕೆಳಗಿನ ಸನ್ನಿವೇಶವನ್ನು ಸ್ವಾರಸ್ಯಸಹಿತ ವಿವರಿಸಿರಿ.

೧. "ಪಂಪಪ್ಪನ್ನ ನಂಬಿ ನಿದ್ದೆ ಹೋಗಿ"

೨. "ಮೈಯೆಲ್ಲ ತಣ್ಣಗಾದಂತಾಯಿತು"

೩. "ಬೇಡಿ ಸಾರ್, ಸ್ವಲ್ಪ ತಾಳಿ, ಏನೊ–ಹೇಗೊ"

೪. "ಎಲ್ಲರೂ ಸರಿಯೆ ಬಿಡಿ, ಅಸಹಾಯ ಶೂರರು"

೫. "ತೀರ್ಮಾನ ಮಾಡೋಣ, ಈಗ ಸಮಯ ಚೆನ್ನಾಗಿಲ್ಲ"

ಭಾಷಾಭ್ಯಾಸ

ಅ) ಕೆಳಗಿನ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಗುರುತಿಸಿ, ಪ್ರತ್ಯಯದ ಹೆಸರನ್ನು ಬರೆಯಿರಿ.

ಪುಣ್ಯಸ್ಥಳದಲ್ಲಿ, ಕಾಮಲಾಪುರದ, ಚೆನ್ನಯ್ಯನು, ವಿರೂಪಾಕ್ಷೇಶ್ವರನ, ಸಂಭ್ರಮವನ್ನು, ಒಳಮಂಟಪಕ್ಕೆ, ಮನೆಯಿಂದ.

ಆ) ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ.

ಗತಿ+ಏನು, ಧೈರ್ಯ+ಅನ್ನು, ದೀಪ+ಇದೆ, ಒತ್ತು+ಒತ್ತಾಗಿ, ದೇಶ+ಉದ್ಧಾರ, ಇತಿ+ಆದಿ,

ಸ್ನಾನ+ಆಚಮನ.

ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಭಯ, ಜೀವ, ಆಯಾಸ, ಪುಣ್ಯ.

ಈ) ಕೆಳಗಿನ ಕೊಟ್ಟಿರುವ ದ್ವಿರುಕ್ತಿ, ನುಡಿಗಟ್ಟು, ಜೋಡುನುಡಿಗಳನ್ನು ವಿಂಗಡಿಸಿ ಬರೆಯಿರಿ.

ಬೈರಿಗೆ ಹಿಡಿದಂತಾಗು, ಬಟ್ಟೆಬಟ್ಟೆ, ಒಂದೊಂದು, ಮುಕಮುಕ, ಒತ್ತೊತ್ತು, ನಡುನಡುವೆ, ಕಕ್ಕಾಬಿಕ್ಕಿಯಾಗು, ಮುಲಮುಲ.

ಭಾಷಾ ಚಟುವಟಿಕೆ

ಅ) ನೀವು ನೋಡಿದ ಐತಿಹಾಸಿಕ ಸ್ಥಳದ ವಿಶೇಷತೆಯನ್ನು ಕುರಿತು ಬರೆಯಿರಿ.

ಆ) ನೀವು ಕೈಗೊಂಡ ಪ್ರವಾಸದ ಅನುಭವವನ್ನು ಪ್ರಬಂಧದ ರೂಪದಲ್ಲಿ ಬರೆಯಿರಿ.

ಇ) ಹಂಪೆಯ ಶಿಲ್ಪ ಮತ್ತು ಚಿತ್ರಗಳನ್ನು ಸಂಗ್ರಹಿಸಿ ಒಂದು ಆಲ್ಬಂ ತಯಾರಿಸಿರಿ.

ಈ) ಪಂಪಾಯಾತ್ರೆ ಗದ್ಯಭಾಗವನ್ನು ನಾಟಕರೂಪದಲ್ಲಿ ಅಭಿನಯಿಸಿರಿ.

ವ್ಯಾಕರಣ

ಭಾಗ 'ಅ'

ಅನುಕರಣಾವ್ಯಯಗಳು

ನಾಮಪದ ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ, ಏಕರೂಪವಾಗಿರುವ ಶಬ್ದಗಳೇ ಅವ್ಯಯಗಳು. ಅವ್ಯಯದಲ್ಲಿ ಅನೇಕ ವಿಧಗಳಿವೆ. ಅವುಗಳಲ್ಲಿ ಅನುಕರಣಾವ್ಯಯವೂ ಒಂದು.

ಅನುಕರಣಾವ್ಯಯಗಳು: ಅರ್ಥವಿಲ್ಲದ ಧ್ವನಿವಿಶೇಷಣಗಳನ್ನು ತಾನು ಕೇಳಿದಂತೆ ಪುನಃ ಅನುಕರಣ ಮಾಡಿ ಹೇಳುವ ಶಬ್ದಗಳೆಲ್ಲ ಅನುಕರಣಾವ್ಯಯಗಳೆನಿಸುವುವು.

ಉದಾಹರಣೆಗೆ: ನೀರು ದಬದಬ ಬಿದ್ದಿತು. ಪಟಪಟ ಮಳೆ ಸುರಿಯಿತು.

ಇಲ್ಲಿ 'ದಬದಬ ಪಟಪಟ' ಇವು ಅನುಕರಣಾವ್ಯಯಗಳು. ಇದರಂತೆ ಚಟಚಟ, ಕರಕರ, ಚುರುಚುರು, ಸಿಮಿಸಿಮಿ, ಧಗಧಗ, ತಟತಟ, ರೊಯ್ಯನೆ, ಸುಯ್ಯನೆ, ಧಿಗಿಲನೆ, ಭೋರನೆ, ಗುಳುಗುಳು, ಗುಡುಗುಡು, ದಡದಡ ಮುಂತಾದವು.

ಗಾದೆಮಾತಿನ ವಿಸ್ತರಣೆ

'ಗಾದೆ ವೇದಕ್ಕೆ ಸಮಾನ' ಎಂಬ ಮಾತಿದೆ. 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಗಾದೆಯೂ ಇದೆ. ಈ ಮಾತುಗಳು ಗಾದೆಗಳ ಮಹತ್ವವನ್ನು ತಿಳಿಸುತ್ತವೆ. ಇವು ಬದುಕಿಗೊಂದು ಊರುಗೋಲು, ದಾರಿದೀಪವಾಗಿ ಬೆಳಗಿವೆ.

ಪ್ರಾಚೀನ ಕಾಲದಿಂದಲೂ ಮಾನವನು ತನ್ನ ಮತ್ತು ಇತರರ ಬದುಕಿನಲ್ಲಿ ಕಂಡುಂಡ ನೋವು–ನಲಿವುಗಳ, ಸುಖದುಃಖಗಳ ಅನುಭವಗಳನ್ನು ಸೂತ್ರರೂಪದಲ್ಲಿ ಹೇಳಿರುವ ಮಾತುಗಳೇ ಗಾದೆಗಳು. ಗಾದೆ ಮಾತುಗಳಿಗೆ ಭಾಷಾನಿರ್ಬಂಧವಿಲ್ಲ. ಎಲ್ಲ ಭಾಷೆಗಳಲ್ಲೂ ಗಾದೆಗಳು ರೂಢಿಯಲ್ಲಿವೆ.

ಗಾದೆಯನ್ನು ವಿಸ್ತರಿಸುವ ಅಭ್ಯಾಸದಿಂದ ಭಾಷಾ ಪ್ರೌಢಿಮೆ ಬೆಳೆಯುತ್ತದೆ. ಹೀಗೆ ವಿಸ್ತರಿಸುವಾಗ ಕೆಲವು ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಒಳ್ಳೆಯದು.

- ಗಾದೆಮಾತಿನ ಮೇಲು ನೋಟಕ್ಕೆ ಕಾಣುವ ಅರ್ಥವಿವರಣೆ.
- ಗಾದೆ ಹೇಳಬಯಸುವ ಧ್ವನಿಯ ವಿವರಣೆ.
- ಗಾದೆ ಮಾತಿನ ಅರ್ಥವನ್ನು ಸ್ಪಷ್ಟಪಡಿಸುವ ಉದಾಹರಣೆಗಳೊಂದಿಗೆ ವಿಶ್ಲೇಷಣೆ.
- ಇದೇ ಗಾದೆಮಾತಿನ ಅರ್ಥವನ್ನು ಸ್ಫುರಿಸುವ ಇತರ ಗಾದೆಗಳ(ಸಿಗುವುದಾದರೆ) ಪ್ರಸ್ತಾಪ.
- ಗಾದೆ ಒಟ್ಟಾರೆಯಾಗಿ ಹೇಳುವ ನೀತಿ.

***ಉದಾಹರಣೆ:* ಆಕಳು ಕಪ್ಪಾದರೆ ಹಾಲು ಕಪ್ಪೇ?**

ಹಾಲನ್ನು ಕೊಡುವ ಪ್ರಾಣಿ ಹಸು. ಅದು ಯಾವುದೇ ಬಣ್ಣದ್ದಾಗಿದ್ದರೂ ನೀಡುವ ಹಾಲು ಬಿಳಿಯಾಗಿಯೇ ಇರುತ್ತದೆ. ಅದರ ವಿಧ ವಿಧ ಬಣ್ಣದಂತೆ ಹಾಲಿನ ಬಣ್ಣ ಇರುವುದಿಲ್ಲ. ಹಾಗೆಯೇ ಒಬ್ಬ ವ್ಯಕ್ತಿಯ ಗುಣಸ್ವಭಾವಗಳು ಅವನು ಧರಿಸುವ ಬಟ್ಟೆಬರೆಯಿಂದಾಗಲೀ, ತೊಡುವ ತೊಡುಗೆಗಳಿಂದಾಗಲೀ, ವಾಸಿಸುವ ಮನೆಯಿಂದಾಗಲೀ ತಿಳಿಯುವುದಿಲ್ಲ. ಉತ್ತಮರು ಹೇಗೇ ಇದ್ದರೂ ಅವರ ಯೋಚನೆಗಳು, ಮನಸ್ಸು, ಕಾರ್ಯಗಳು ಒಳ್ಳೆಯದೇ ಆಗಿರುತ್ತವೆ. ಕಬ್ಬು ಡೊಂಕಾದರೂ ಸಿಹಿ ಡೊಂಕಾಗಿರುವುದಿಲ್ಲ. ಅರಮನೆಯಲ್ಲಿ ಮತ್ತು ಗುಡಿಸಿಲಿನಲ್ಲಿ ಬೆಳಗುವ ದೀಪ ಒಂದೇ ತೆರನಾದ ಬೆಳಕನ್ನು ಕೊಡುತ್ತದೆ. ಅದಕ್ಕಾಗಿ ಮಾನವನ ಒಳ್ಳೆಯ ಗುಣಗಳು ವೇಷಭೂಷಣಗಳಿಂದಾಗಲೀ ಜಾತಿಮತದಿಂದಾಗಲೀ ದೇಶ ಭಾಷೆಗಳಿಂದಾಗಲೀ ವಿಕಾರವಾಗುವುದಿಲ್ಲ. ಆಕಳು ಬಣ್ಣದಲ್ಲಿ ಕಪ್ಪಗಿದ್ದರೂ ನೀಡುವ ಹಾಲು ಬಿಳಿಯಾಗಿಯೇ ಇರುವಂತೆ ಉತ್ತಮರ ಬದುಕನ್ನು ಅವರ ಹೊರ ನೋಟದ ಮೇಲೆ ಅಳೆಯುವಂತಹುದಲ್ಲ.

ಭಾಗ 'ಆ'

ಅ) ಕೆಳಗೆ ಖಾಲಿ ಇರುವ ಸ್ಥಳಗಳನ್ನು ಅನುಕರಣಾವ್ಯಯ ಪದಗಳಿಂದ ತುಂಬಿ ಹೇಳಿರಿ.

ಉದಾ: ಜೋರಾಗಿ ಗಾಳಿ ಬೀಸಿದಾಗ ಮರದಿಂದ ಹಣ್ಣುಗಳು <u>ತಪತಪನೆ</u> ಬಿದ್ದುಬಿಟ್ಟವು.

೧. ರೈಲು .... ಓಡಿತು.

೨. ಬೆಂಕಿ .... ಉರಿಯಿತು.

೩. ಗಾಜು .... ಹೊಳೆಯುತ್ತದೆ.

೪. ಕಣ್ಣಿನಿಂದ ನೀರು .... ಹರಿಯಿತು.

೫. ಗಾಡಿ .... ಚಲಿಸಿತು.

ಆ) ಇಲ್ಲಿ ಕೆಲವು ಅಪೂರ್ಣ ಗಾದೆಗಳನ್ನು ಕೊಡಲಾಗಿದೆ. ಅವುಗಳನ್ನು ಪೂರ್ಣಗೊಳಿಸಿ ಹೇಳಿರಿ.

೧. ಹಾಸಿಗೆ ಇದ್ದಷ್ಟು ....

೨. ಕೈ ಕೆಸರಾದರೆ ....

೩. ಅಕ್ಕಿ ಮೇಲೆ .... ನೆಂಟರ ಮೇಲೆ ....

೪. ಹಣದ ಗಂಟಿದ್ದರೆ .... ನಂಟರು

ಇ) ನೀವು ಕೇಳಿರುವ ಯಾವುದಾದರು ಐದು ಗಾದೆಗಳನ್ನು ಬರೆಯಿರಿ.

ದೇಶ ಸುತ್ತಿ ನೋಡು; ಕೋಶ ಓದಿನೋಡು

*****

೧೫. ಅಜ್ಜಿಯ ತೋಟ

– ಕೆ.ಸಿ. ಶಶಿಧರ

ಪ್ರವೇಶ: ನಮ್ಮದು ಕೃಷಿ ಪ್ರಧಾನ ಸಮಾಜ. ನಮಗೆ ಆಹಾರ ಕೊಡುವುದು ಕೃಷಿ. ಕೃಷಿ ನಿರಂತರವಾಗಿರಲು ನಮ್ಮ ಪರಿಸರದಲ್ಲಿ ರೈತನಿಗೆ ನೆರವಾಗುವ ಹುಳ–ಹುಪ್ಪಟೆ, ಸಾವಯವ ವಸ್ತು ಇತ್ಯಾದಿ ಅರಿತು ಕೃಷಿಮಾಡಬೇಕು. ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡಿ ಹೆಚ್ಚು ಹೆಚ್ಚು ನೈಸರ್ಗಿಕ ಗೊಬ್ಬರವನ್ನು ಉತ್ಪಾದಿಸಿ ಬಳಸಿಕೊಳ್ಳುವುದರಿಂದ ಆರೋಗ್ಯಕರವಾದ ಆಹಾರವನ್ನು ಬೆಳೆಯಬಹುದು ಎಂಬುದೇ ಈ ಪಾಠದ ಸಾರ.

ಮಕ್ಕಳು : ಅಜ್ಜಿ.. ಅಜ್ಜಿ.. ನೀ ತೋಟದಲ್ಲಿ ಇದ್ದೀಯಾ.. ನಾವು ಮನೆಯೆಲ್ಲಾ ಹುಡುಕಿ ಬಂದ್ವಿ.

ಅಜ್ಜಿ : ಓ ಊರಿಂದ ಬಂದ ಕೂಡ್ಲೆ ತೋಟಕ್ಕೆ ಬಂದ್ರಾ, ನಾನೇ ಮನೆಗೆ ಬರ್ತಿದ್ದೆ. ರಜಾ ಬಂತು ಅಂತ ಈ ಅಜ್ಜಿಯ ನೆನಪಾಯ್ತಾ.

ಮಕ್ಕಳು : ಹಾಗೇನಿಲ್ಲ, ನಿಮ್ಮ ನೆನಪು ಯಾವಾಗಲೂ ಆಗ್ತಾ ಇರುತ್ತೆ. ಬನ್ನಿ ಅಜ್ಜಿ... ಮನೆಗೆ ಹೋಗೋಣ (ಅಜ್ಜಿ ಮಕ್ಕಳ ಕೈಹಿಡಿದು ನಡೆಯುತ್ತಿರುವಾಗ) ಅಜ್ಜೀ... ತೋಟದಲ್ಲಿ ಕಾಲಿಟ್ಟರೆ ಬ್ರೆಡ್ ಮೇಲೆ ಕಾಲಿಟ್ಟ ಹಾಗೆ ಆಗುತ್ತೆ.. ಆದ್ರೆ ನಮ್ಮ ಶಾಲಾ ಮೈದಾನ ಗಟ್ಟಿ ಇರುತ್ತೆ ಯಾಕೆ?

ಅಜ್ಜಿ : ನಮ್ಮ ತೋಟ ಸಾವಯವ ತೋಟ.

ಮಕ್ಕಳು : ಅಂದ್ರೆ....

ಅಜ್ಜಿ : ಸಾವಯವ ವಸ್ತು ಜಾಸ್ತಿ ಇದ್ದರೆ ಮಣ್ಣು ಮೃದುವಾಗಿರುತ್ತೆ.

ಮಕ್ಕಳು : ಸಾವಯವ ವಸ್ತು ಅಂದ್ರೇನಜ್ಜಿ?

ಅಜ್ಜಿ : ನಮ್ಮ ಪರಿಸರದಲ್ಲಿ ಸಿಗುವ ಗಿಡಮರಗಳ ಎಲೆ, ಸೊಪ್ಪು ಬೆಳೆಯುಳಿಕೆ, ಸಗಣಿ, ಗಂಜಲ, ಪ್ರಾಣಿಗಳ ತ್ಯಾಜ್ಯ ಇತ್ಯಾದಿ ಬೆರೆತಾಗ ಮಣ್ಣು ಮೃದುವಾಗುತ್ತದೆ. ಇದರಿಂದ ಗಿಡ ಮರಗಳಿಗೆ ಉತ್ತಮ ಪೋಷಕಾಂಶ ದೊರೆಯುತ್ತದೆ. ಇಂತಹ ಮಣ್ಣು, ಮಳೆನೀರು ಭೂಮಿಯಲ್ಲಿ ಇಂಗಲು ಸಹಕಾರಿ.

ಮಕ್ಕಳು : (ಕಿಟಾರನೆ ಚೀರುತ್ತಾ) ಅಜ್ಜೀ! ಇಲ್ಲಿ ನೋಡು ಪುಟಾಣಿ ಹಾವು!!

ಅಜ್ಜಿ : ಎಲ್ಲಿ! ಅಯ್ಯೋ ಮಕ್ಕಳಾ ಅದು ಹಾವಲ್ಲ ರೈತನ ಮಿತ್ರ ಅಂತ ನೀವು ಕೇಳಿಲ್ವಾ? ಎರೆಹುಳು.. ಈ ಎರೆಹುಳು ಸಾವಯವ ವಸ್ತುಗಳನ್ನು ತಿಂದು ಹಿಕ್ಕೆ ಹಾಕುತ್ತದೆ. ಇದರ ಹಿಕ್ಕೆಯೇ ಎರೆ ಗೊಬ್ಬರ. ಎರೆಗೊಬ್ಬರ ಬೆಳೆಗಳು ಬೆಳೆಯಲು ಉತ್ತಮ ಪೋಷಕಾಂಶ ಒದಗಿಸುತ್ತೆ.

ಮಕ್ಕಳು : ಅಜ್ಜೀ... ನಿಂಗೆ ಈ ವಿಷಯ ಎಲ್ಲಾ ಹೇಗೆ ಗೊತ್ತಾಯ್ತು?

ಅಜ್ಜಿ : ಕಳೆದ ವರ್ಷ ಹಾಸನದಲ್ಲಿರುವ ಕೃಷಿವಿಜ್ಞಾನ ಕೇಂದ್ರಕ್ಕೆ ಹೋಗಿದ್ದೆ. ಅಲ್ಲಿ ನಮಗೆ ಎರೆಹುಳು ಸಾಕಣೆ, ಎರೆಗೊಬ್ಬರ ತಯಾರಿಕೆ ಮತ್ತು ಅದನ್ನು ಬಳಸುವ ಬಗ್ಗೆ ತಿಳಿಸಿದರು. ಶಿವಮೊಗ್ಗ ತಾಲ್ಲೂಕಿನ ದುಮ್ಮಳ್ಳಿ ಗ್ರಾಮದ ಶಿವಮ್ಮ ಎಂಬ ಹೆಂಗಸು ಬೆಳೆಸಿರುವ ತೋಟವನ್ನು ನೋಡಲು ನಾವು ಅನೇಕರು ಹೋಗಿದ್ದೆವು. ಅಬ್ಬಾ! ಆ ಮಹಿಳೆ ಎಷ್ಟೊಂದು ಎರೆಗೊಬ್ಬರ ತಯಾರಿಸಿದಾರೆ ಗೊತ್ತಾ?

ಮಕ್ಕಳು : ಅವರು ತುಂಬಾ ಓದಿದ್ದಾರಾ ಅಜ್ಜೀ?

ಅಜ್ಜಿ : ಅವರು ಮೂರನೆ ತರಗತಿವರೆಗೆ ಓದಿದ್ದಾರೆ. ಆದರೆ ಅವರ ಸಾಧನೆ ತುಂಬಾ ದೊಡ್ಡದು. ಅವರಿಗೆ ಕೃಷಿ ಪಂಡಿತ ಪ್ರಶಸ್ತಿ ದೊರಕಿದೆ.

ಮಕ್ಕಳು : ಅಜ್ಜಿ ನೀವೂ ಎರೆಹುಳು ಸಾಕಿದ್ದೀರಾ? ನಮಗೆ ತೋರಿಸಿ.

ಅಜ್ಜಿ : ಹೌದು, ಬನ್ನಿರಿ, (ಎರೆಹುಳು ಸಾಕುವ ತೊಟ್ಟಿಗೆ ಕೈಹಾಕಿ ಬೊಗಸೆ ತುಂಬಾ ಎರೆಹುಳು ತೆಗೆದು ಮಕ್ಕಳ ಕೈಗೆ ಹಾಕುವರು, ಮಕ್ಕಳು ಚೀರುವರು) ಭಯಬೇಡ, ಇವು ನಮ್ಮ ಮಿತ್ರರಂತೆ, ನಮಗೇನೂ ಹಾನಿ ಮಾಡುವುದಿಲ್ಲ. ಸಾವಯವ ಕೃಷಿಗೆ ಇವು ಅತಿ ಅಗತ್ಯ. ನೋಡಿ ಇಲ್ಲಿ, ಪುಟ್ಟ ಗಂಗೆ ಬಂದಳಲ್ಲ! (ಕರುವಿನ ಕಡೆ ಕೈಮಾಡಿ ತೋರಿಸಿ) ಇವಳೂ ನಮ್ಮ ಸಾವಯವ ತೋಟಕ್ಕೆ ಸಹಾಯ ಮಾಡ್ತಾಳೆ. ಹಸು, ಕರು, ಎಮ್ಮೆಗಳು ನಮಗೆ ಸಗಣಿ, ಗಂಜಲ ಕೊಟ್ಟು ತೋಟದ ಫಲವತ್ತತೆ ಹೆಚ್ಚಿಸುತ್ತವೆ.



ಮಕ್ಕಳು : ಅಜ್ಜಿ, ಇಲ್ನೋಡಿ, ಈ ಹುಳು ತೊಗರಿ ಕಾಯಿ ತಿಂತಾ ಇದೆ.

ಅಜ್ಜಿ : ಪರವಾಗಿಲ್ಲ. ಅದು ಕಾಯಿಕೊರಕ. ಒಂದೋ ಎರಡೋ ಕೀಟ ಬಂದು ತಿಂದ್ರೆ ನಷ್ಟ ಇಲ್ಲ. ಹುಳುಗಳು ಹೆಚ್ಚಾದರೆ ಮಾತ್ರ ನಿಯಂತ್ರಿಸಬೇಕು.

ಮಕ್ಕಳು : ತುಂಬಾ ಹುಳುಗಳು ಹೀಗೆ ಬಂದು ಬಿಟ್ರೆ ಏನು ಮಾಡೋದು ಅಜ್ಜಿ?

ಅಜ್ಜಿ : ಕೆಲವರು ಔಷಧಿ ಹಾಕಿಬಿಡ್ತಾರೆ, ಔಷಧಿ ಹಾಕೋ ಮೊದ್ಲು ಅದನ್ನ ಬಳಸ್ದೆ ಇರೋಕೆ ಸಾಧ್ಯಾನಾ ನೋಡಬೇಕು. ಏಕೆಂದರೆ ತೊಗರಿ ನಾವು ತಿನ್ನುವ ಆಹಾರ ಅಲ್ಲವೇ?

ಮಕ್ಕಳು : ಹಾಗಿದ್ದರೆ ಏನು ಮಾಡಬೇಕು?

ಅಜ್ಜಿ : ಕಾಯಿಕೊರಕ ತೊಂದರೆ ಕೊಡುವ ಶತ್ರುಕೀಟವಾದರೆ ಅದನ್ನು ತಿಂದು ಬದುಕಿ ನಮಗೆ ಸಹಾಯ ಮಾಡುವ ಮಿತ್ರ ಕೀಟಗಳೂ ಇರುತ್ತವೆ. ಅವುಗಳನ್ನು ಗುರುತಿಸಿ ಬೆಳೆಸಬೇಕು. ಆಗ ಶತ್ರು ಕೀಟಗಳ ಹಾವಳಿ ಕಡಿಮೆಯಾಗುತ್ತದೆ. ಶೀತ ಆದಾಗ ನಾವೇನು ಮಾಡುತ್ತೇವೆ ಹೇಳಿ ನೋಡೋಣ

ಮಕ್ಕಳು : ಅಜ್ಜಿ, ಕಷಾಯ ಕುಡಿಯುತ್ತೇವೆ.

ಅಜ್ಜಿ : ಹಾಗೆಯೇ ನಾವು ಗಿಡಮರಗಳಿಗೆ ರೋಗ ಬಂದಾಗ ಮತ್ತು ಕೀಟಗಳು ಧಾಳಿಮಾಡಿದಾಗ ನಮ್ಮ ಪರಿಸರದಲ್ಲಿ ಸಿಗುವ ಬೇವು, ತಂಬಾಕು, ಹೊಂಗೆ, ಹಿಪ್ಪೆ, ಸೀತಾಫಲ, ಬೆಳ್ಳುಳ್ಳಿ, ಬಜೆ, ಅರಿಶಿಣ ಇತ್ಯಾದಿಗಳಿಂದ ಕಷಾಯ ತಯಾರಿಸಿ ಸಿಂಪಡಿಸಿದ್ರೆ ರೋಗ ಮತ್ತು ಕೀಟಗಳನ್ನು ನಿಯಂತ್ರಿಸಬಹುದು. ಹೀಗೆ ಆಹಾರ ಬೆಳೆ ಬೆಳೆಯಲು ರಾಸಾಯನಿಕ ಬಳಸದೆ, ಪ್ರಕೃತಿಯಲ್ಲೇ ದೊರೆಯುವ ವಸ್ತು ಬಳಸಿ ಪರಿಸರಕ್ಕೆ ಮತ್ತು ನಮಗೆ ಒಳ್ಳೆಯದಾದ ಬೆಳೆ ಬೆಳೆಯೋದೇ ಈ ಅಜ್ಜಿಯ ಕೆಲಸ.

ಮಕ್ಕಳು : (ಅಲ್ಲೇ ಇದ್ದ ಪೇರಳೆ ಹಣ್ಣು ಕಿತ್ತು ತಿಂದು) ಹೀಗೆ ಹಣ್ಣು ಕಿತ್ತು ತಿನ್ನುವುದು ನಮ್ಮ ಕೆಲಸ


ಅಜ್ಜಿ : ತಿನ್ನೋದೇ ಅಲ್ಲ, ನೀವು ಮುಂದೆ ಹೀಗೆ ಸಾವಯವದ ಬೆಳೆ ಬೆಳೆದರೆ ಪರಿಸರ ಉಳಿಸಬಹುದು. ಪರಿಸರವನ್ನ ನೀವು ಅದೆಷ್ಟು ಪ್ರೀತಿಸುತ್ತೀರ ಅಂತ ತೋರಿಸಬಹುದು.

ಮಕ್ಕಳು : ಅಜ್ಜಿ ಅಜ್ಜಿ ಆಯ್ತು ಅಜ್ಜಿ

ತುಂಬಾ ಜಾ..ಣ ನೀನಜ್ಜಿ

ಮನೆಗೆ ಹೋಗೋಣ ನಡೆಯಜ್ಜಿ.

ಕೃತಿಕಾರರ ಪರಿಚಯ :



ಕೆ. ಸಿ. ಶಶಿಧರ ಅವರು ೧೯೬೪ರ ಜುಲೈ ೧೩ ರಂದು ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿ ಜನಿಸಿದರು. ಇವರು 'ಸಮಗ್ರ ಜಲಾನಯನ ಅಭಿವೃದ್ಧಿ', 'ಕುಷ್ಕಿ ಬೇಸಾಯ', 'ಹನಿ ನೀರಾವರಿ' ಮುಂತಾದ ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವರು ಈಗ ಶಿವಮೊಗ್ಗದ ಕೃಷಿ ಮಹಾವಿದ್ಯಾಲಯದಲ್ಲಿ ಕೃಷಿ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾಗಿ ಕೆಲಸಮಾಡುತ್ತಿದ್ದಾರೆ.

ಪದಗಳ ಅರ್ಥ:

ಇಂಗು– ಬತ್ತು; ಗಂಜಲ – ಗೋಮೂತ್ರ;

ಕಳಿತು– ಪಕ್ವವಾದ, ತೀರಾ ಹಣ್ಣಾದ; ನಿಯಂತ್ರಣ – ತಡೆ;

ಕಾಯಿಕೊರಕ–ಕಾಯಿ ರಂಧ್ರಮಾಡುವ ಹುಳು; ಬೆಳೆಯುಳಿಕೆ–ಕಟಾವಾದ ನಂತರ ಉಳಿಯುವ ಕೂಳೆ.

ಟಿಪ್ಪಣಿ:

ಕೃಷಿಪಂಡಿತ ಪ್ರಶಸ್ತಿ – ಕೃಷಿಯಲ್ಲಿ ಮಹತ್ತರ ಸಾಧನೆ ಮಾಡಿದವರಿಗೆ ರಾಜ್ಯ ಸರ್ಕಾರ ನೀಡುವ ಪ್ರಶಸ್ತಿ.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಸಾವಯವ ತೋಟದಲ್ಲಿ ಕಾಲಿಟ್ಟರೆ ಬ್ರೆಡ್ ಮೇಲೆ ಕಾಲಿಟ್ಟ ಹಾಗಾಗುತ್ತದೆ ಏಕೆ?

೨. ಸಾವಯವ ವಸ್ತು ಎಂದರೇನು?

೩. ದುಮ್ಮಳ್ಳಿ ಗ್ರಾಮದ ಶಿವಮ್ಮನ ಸಾಧನೆಯೇನು?

೪. ಪ್ರಾಣಿಗಳು ತೋಟದ ಫಲವತ್ತತೆಯನ್ನು ಹೇಗೆ ಹೆಚ್ಚಿಸುತ್ತವೆ?

೫. ಬೆಳೆಗಳಿಗೆ ಔಷಧಿಗಳನ್ನು ಬಳಸದೆ ಇರಲು ಸಾಧ್ಯವೇ ಎಂದು ಮೊದಲು ಯೋಜಿಸಬೇಕು ಏಕೆ?

೬. ಮಿತ್ರಕೀಟಗಳು ರೈತರಿಗೆ ಹೇಗೆ ಸಹಾಯಕವಾಗಿವೆ?

ಆ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಸಾವಯವ ವಸ್ತುಗಳಿಂದಾಗುವ ಉಪಯೋಗಗಳೇನು?

೨. ಎರೆಹುಳುವನ್ನು ರೈತನ ಮಿತ್ರ ಎಂದು ಏಕೆ ಕರೆಯುತ್ತಾರೆ?

೩. ಪರಿಸರದಲ್ಲಿ ದೊರೆಯುವ ವಸ್ತುಗಳನ್ನೇ ಬಳಸಿ ಒಳ್ಳೆಯ ಬೆಳೆಯನ್ನು ಬೆಳೆಯುವುದು ಹೇಗೆ?

ಭಾಷಾಭ್ಯಾಸ

ಅ) ಕೆಳಗಿನ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆದು ವಿಭಕ್ತಿ ಪ್ರತ್ಯಯದ ಹೆಸರನ್ನು ತಿಳಿಸಿರಿ.

೧. ತೋಟದಲ್ಲಿ–ತೋಟ+ಅಲ್ಲಿ–ಸಪ್ತಮಿ ವಿಭಕ್ತಿ


ಊರಿನಿಂದ, ಮರದಲ್ಲಿ, ವಸ್ತುಗಳನ್ನು, ರೈತನ, ತೋಟವನ್ನು, ಹುಳುವು, ತೋಟಕ್ಕೆ, ಔಷಧಿಯನ್ನು.

ಆ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಪೋಷಕಾಂಶ, ಹಾವಲ್ಲ, ಕಡಿಮೆಯಾಗು, ಇತ್ಯಾದಿ, ನಾವೇನು, ಪ್ರಕೃತಿಯಲ್ಲೆ.

ಭಾಷಾ ಚಟುವಟಿಕೆ

ಅ) ರಹೀಮ, ಸೋಮಣ್ಣ ಮತ್ತು ಡೇವಿಡ್ ಎಂಬ ಮೂವರು ರೈತರು ಈ ಸಲದ ಬೆಳೆಯಿಂದ ಖುಷಿಯಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಅವರ ನಡುವಿನ ಸಂಭಾಷಣೆ ಬರೆಯಿರಿ.



ಆ) ದೊಡ್ಡರಂಗೇಗೌಡರ ಈ ಕವನವನ್ನು ತರಗತಿಯಲ್ಲಿ ಗಟ್ಟಿಯಾಗಿ ಓದಿರಿ,

ಉಳುವೋನೆ ಲೋಕಕ್ಕೆ ಬೇಕಾದ ಗೆಳೆಯ
ಹಳ್ಳಿಗೂ ದಿಲ್ಲಿಗೂ ಕೊಡ್ತಾನೆ ಬೆಳೆಯ
ಭೂತಾಯ ಬಂಟ ಈ ನೇಗಿಲ ನಂಟ
ಇವನಿಂದ್ಲೆ ಅಳಿಯೋದು ಹಸಿವಿನಾ ಸಂಕಟ॥

ಇ) 'ರೈತ' ಸಂಬಂಧಿ ಕವನಗಳನ್ನು ಸಂಗ್ರಹಿಸಿರಿ.

ಈ) ಕೆಳಗೆ ಕೊಟ್ಟಿರುವ ಚಿತ್ರಗಳು ಕೆಲವು ಪಡೆನುಡಿ / ಗಾದೆಗಳನ್ನು ಸೂಚಿಸುತ್ತವೆ. ಪ್ರತೀ ಚಿತ್ರ ಸೂಚಿಸುವ ಪಡೆನುಡಿ / ಗಾದೆಯನ್ನು ಕಂಡುಹಿಡಿದು ಚಿತ್ರಗಳೊಂದಿಗೆ ಹೊಂದಿಸಿರಿ. ಆ ಪಡೆನುಡಿ / ಗಾದೆಗಳು ಸೂಚಿಸುವ ಅರ್ಥವನ್ನು ಅಧ್ಯಾಪಕರಿಂದ ಕೇಳಿ ತಿಳಿದು ವಾಕ್ಯದಲ್ಲಿ ಉಪಯೋಗಿಸಿರಿ.

೧. ಪಿತ್ತ ನೆತ್ತಿಗೇರು ....



೨. ಮಂತ್ರಕ್ಕೆ ಮಾವಿನಕಾಯಿ ಉದುರುವುದೇ? ....

೩. ಒಂದು ಕಾಲು ಹೊರಗೆ, ಒಂದು ಕಾಲು ಒಳಗೆ ....

೪. ಕೂತು ತಿಂದರೆ ಕುಡಿಕೆ ಹಣ ಸಾಲದು ....

೫. ಹಿತ್ತಾಳೆ ಕಿವಿ ....

೬. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ? ....

		
೧	೨	೩
		
೪	೫	೬

ಸಾವಯವ ಕೃಷಿ; ಜೀವನಕ್ಕೆ ಖುಷಿ

ವಾಕ್ಯ ರಚನೆ


ಭಾಗ–ಅ

ಪತ್ರಲೇಖನ

ಬರವಣಿಗೆ ಬೆಳೆದುಬಂದ ನಂತರದ ಕಾಲದಲ್ಲಿ ಮನುಷ್ಯ ತನ್ನ ವೈಯಕ್ತಿಕ ಅಥವಾ ವ್ಯಾವಹಾರಿಕ ವಿಷಯಗಳಿಗೆ ಸಂಬಂಧಪಟ್ಟಂತೆ ಪತ್ರ ಬರೆಯುವುದನ್ನು ಪ್ರಾರಂಭಿಸಿದ. ಈಜಿಪ್ಟ್‌ನಲ್ಲಿ “ಪ್ಯಾಪಿರಿಸ್” ಎಂಬ ಎಲೆಯನ್ನು ಬರಹಮಾಡಲು ಬಳಸಲಾಗುತ್ತಿತ್ತು ಎಂದು ಹೇಳಲಾಗುತ್ತದೆ. ಬಹಳ ಹಿಂದೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂದೇಶಗಳನ್ನು ಪಾರಿವಾಳಗಳ ಕಾಲಿಗೆ ಕಟ್ಟಿ ಕಳುಹಿಸುತ್ತಿದ್ದರು. ಈಚೆಗೆ ಮೊಬೈಲ್ ಬಂದ ನಂತರ ಪತ್ರ ವ್ಯವಹಾರ ಬಹಳ ಕಡಿಮೆಯಾಗಿದೆ. ಆದರೂ ವ್ಯವಹಾರಗಳಿಗೆ ಪತ್ರಗಳನ್ನು ಬರೆಯುವ ಆವಶ್ಯಕತೆ ಇದ್ದೇ ಇದೆ. ಹೆಚ್ಚಿನ ಮಾಹಿತಿಗಳನ್ನು ರವಾನೆ ಮಾಡಲು ವೈಯಕ್ತಿಕ ಪತ್ರಗಳೂ ಅಗತ್ಯ.

ಪತ್ರ ಬರೆಯುವುದು ಒಂದು ಕಲೆ. ಅದು ಬರೆಯುವವರ ಕುಶಲತೆಯ ಪ್ರತೀಕ. ಹೇಳಬೇಕಾದ ವಿಷಯವನ್ನು ಸಂಕ್ಷಿಪ್ತವಾಗಿ, ಸರಳವಾಗಿ, ಅಚ್ಚುಕಟ್ಟಾಗಿ ಅಭಿವ್ಯಕ್ತಿಸುವ ಕೌಶಲವನ್ನು ಈ ತರಗತಿಯ ಹಂತದಲ್ಲಿ ತಿಳಿಯಬೇಕು.

ನಮಗೆ ಲಭ್ಯವಿರುವ ಪ್ರಮುಖರ ಕೆಲವು ಉತ್ತಮ ಪತ್ರಗಳ ಮಾದರಿಗಳಲ್ಲಿ ಪಂಡಿತ್ ಜವಾಹರಲಾಲ್ ನೆಹರೂ ಅವರು ಮಗಳಿಗೆ ಬರೆದ ಪತ್ರಗಳು, ಗಾಂಧೀಜಿಯವರ ಪತ್ರಗಳು, ಸ್ವಾಮಿ ವಿವೇಕಾನಂದರು ಅಳಸಿಂಗರಿಗೆ ಬರೆದ ಪತ್ರಗಳು, ನೇತಾಜಿಯವರ ‘ಆಪ್ತ’ ಪತ್ರಗಳು ಪ್ರಮುಖವಾದವು.



ವೈಯಕ್ತಿಕ ಪತ್ರಕ್ಕೆ ಉದಾಹರಣೆ:

ದಿನಾಂಕ: ೧೩-೦೩-೨೦೧೭

ಇವರಿಂದ,
ಹೇಮಾವತಿ,
೮ನೇ ತರಗತಿ, 'ಬಿ' ವಿಭಾಗ,
ಸರ್ಕಾರಿ ಪ್ರೌಢಶಾಲೆ,
ಬೇಲೂರು.

ಪ್ರೀತಿಯ ತಂದೆಯವರಿಗೆ,

ನಿಮ್ಮ ಮಗಳು ಮಾಡುವ ನಮಸ್ಕಾರಗಳು. ನಾನು ಇಲ್ಲಿ ಕ್ಷೇಮ. ನಿಮ್ಮ ಕ್ಷೇಮ ಸಮಾಚಾರವನ್ನು ಮೇಲಿಂದ ಮೇಲೆ ತಿಳಿಸುತ್ತಿರಿ.

ನನ್ನ ಸದ್ಯದ ವಿದ್ಯಾಭ್ಯಾಸವನ್ನು ಕುರಿತು ತಿಳಿಸಲು ಈ ಪತ್ರ ಬರೆಯುತ್ತಿದ್ದೇನೆ. ನನ್ನ ವಿದ್ಯಾಭ್ಯಾಸವು ಚೆನ್ನಾಗಿ ನಡೆಯುತ್ತಿದೆ. ಶಾಲೆಯ ಗುರುಗಳೆಲ್ಲರೂ ಚೆನ್ನಾಗಿ ಪಾಠ ಮಾಡುತ್ತಾರೆ. ಕಲಿಸಿದ ವಿಷಯಗಳನ್ನು ನಾನು ಪ್ರತಿದಿವಸ ತಪ್ಪದೆ ಅಭ್ಯಾಸ ಮಾಡುತ್ತಿದ್ದೇನೆ. ಕಲಿತ ವಿಷಯಗಳನ್ನು ನನ್ನ ಗೆಳತಿಯರೊಂದಿಗೆ ಚರ್ಚಿಸುತ್ತೇನೆ. ಕಳೆದ ತಿಂಗಳ ಪರೀಕ್ಷೆಯಲ್ಲಿ ನನಗೆ ಶೇ ೮೦ ಅಂಕಗಳು ದೊರಕಿದೆ. ನೀವು ನನ್ನ ವಿದ್ಯಾಭ್ಯಾಸದ ಬಗ್ಗೆ ಚಿಂತಿಸಬೇಡಿ.

ಮನೆಯಲ್ಲಿ ಅಮ್ಮ, ಅಣ್ಣ ಹಾಗೂ ಅಕ್ಕನವರಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ. ಪುಟ್ಟ ತಂಗಿಗೆ ನನ್ನ ಪ್ರೀತಿಯ ಸವಿನೆನಪುಗಳು.

ಇತಿ ನಮಸ್ಕಾರಗಳು

ನಿಮ್ಮ ಪ್ರೀತಿಯ ಮಗಳು
ಸಹಿ/-
(ಹೇಮಾವತಿ)

ಇವರಿಗೆ,
ಶ್ರೀ ಪುರುಷೋತ್ತಮ,
ಶಾಂತಿ ನಿವಾಸ,
ಮಹಾವೀರ ಬಡಾವಣೆ,
ಬೀದರ್.

ರಜಾ ಪತ್ರ

ದಿನಾಂಕ ೧-೦೬-೨೦೧೭

ಇವರಿಂದ,

ಸನತ್ ಕುಮಾರ್ ಪಿ.

ಎಂಟನೇ ತರಗತಿ,

ಸರ್ಕಾರಿ ಪ್ರೌಢಶಾಲೆ,

೩ನೆಯ ಅಡ್ಡರಸ್ತೆ,

೫ನೆಯ ಮುಖ್ಯರಸ್ತೆ,

ಗಾಂಧೀನಗರ, ಬಳ್ಳಾರಿ.

ಇವರಿಗೆ,

ಮುಖ್ಯೋಪಾಧ್ಯಾಯರು,

ಸರ್ಕಾರಿ ಪ್ರೌಢಶಾಲೆ,

೩ನೆಯ ಅಡ್ಡರಸ್ತೆ,

೫ನೆಯ ಮುಖ್ಯರಸ್ತೆ,

ಗಾಂಧೀನಗರ,

ಬಳ್ಳಾರಿ.

ಮಾನ್ಯರೇ,

ವಿಷಯ : ಮೂರು ದಿನಗಳ ರಜೆಯನ್ನು ಕೋರುವ ಬಗ್ಗೆ.

ನಾನು ದಿನಾಂಕ ೨-೦೬-೨೦೧೭ ರಿಂದ ೪-೦೬-೨೦೧೭ ರವರೆಗೆ ಶಾಲೆಗೆ ಹಾಜರಾಗಲು ಆಗುತ್ತಿಲ್ಲ. ಏಕೆಂದರೆ ಮನೆಯಲ್ಲಿ ಅಕ್ಕನ ಮದುವೆಯಿದೆ. ಅದಕ್ಕಾಗಿ ಮೇಲೆ ತಿಳಿಸಿರುವ ಮೂರು ದಿನಗಳ ಕಾಲ ನನಗೆ ರಜೆಯನ್ನು ನೀಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಧೇಯ ವಿದ್ಯಾರ್ಥಿ

ದಿನಾಂಕ:

ಸ್ಥಳ:

ಸಹಿ/-

(ಸನತ್ ಕುಮಾರ್ ಪಿ.)

ರಜಾ ಪತ್ರ (ನಮೂನೆ)

ದಿನಾಂಕ..............................

ಇವರಿಂದ,

....

....

....

....

ಇವರಿಗೆ,

....

....

....

....

ಮಾನ್ಯರೆ,

ವಿಷಯ : ....

....

ವಂದನೆಗಳೊಂದಿಗೆ,

ತಮ್ಮ ವಿಧೇಯ ವಿದ್ಯಾರ್ಥಿ

ಸಹಿ/–

(..............................)

ದಿನಾಂಕ :

ಸ್ಥಳ:

ತಂದೆಗೆ ಪತ್ರ (ನಮೂನೆ)

ದಿನಾಂಕ..............................

ಇವರಿಂದ

....

....

....

....

ಪ್ರೀತಿಯ ತಂದೆಯವರಿಗೆ,

....

....

....

....

....

....

....

....

....

ಇತಿ ನಮಸ್ಕಾರಗಳು

ತಮ್ಮ ಪ್ರೀತಿಯ

ಸಹಿ

(..............................)

ಇವರಿಗೆ,

....

....

....

....

ಪ್ರಬಂಧ

'ಪ್ರ' ಎಂದರೆ ವಿಶೇಷವಾದ ಮತ್ತು 'ಬಂಧ' ಎಂದರೆ ಕಟ್ಟು ಎಂಬ ಅರ್ಥವಿದೆ. ಹಾಗಾಗಿ ಪ್ರಬಂಧ ಎಂದರೆ ಪದಗಳ ಅಥವಾ ವಾಕ್ಯಗಳ, ವಿಷಯಗಳ ವಿಶೇಷವಾದ ಕಟ್ಟು ಎಂದರ್ಥವಾಗುತ್ತದೆ. ನಾವು ನೋಡಿದ, ಕೇಳಿದ, ಅನುಭವಿಸಿದ ಸಂಗತಿಗಳನ್ನು ಕುರಿತಂತೆ ಸರಳವಾಗಿ, ಸುಂದರ ನುಡಿಗಳಿಂದ ಬರೆಯುವ ಒಂದು 'ಪುಟ್ಟ' ಲೇಖನವಿದು. ಕನ್ನಡ ಸಾಹಿತ್ಯದಲ್ಲಿ ಪ್ರಬಂಧ ಸಾಹಿತ್ಯ ಹೆಮ್ಮರವಾಗಿ ಬೆಳೆದಿದೆ. ಈ ಪ್ರಬಂಧದಲ್ಲಿ ಲಘು ಪ್ರಬಂಧ, ಹರಟೆ, ಸಂಶೋಧನಾತ್ಮಕ ಪ್ರಬಂಧ ಇತ್ಯಾದಿ ಅನೇಕ ಪ್ರಕಾರಗಳಿವೆ.

ನೀವು ನೋಡಿರುವ ಸ್ಥಳ, ನಿಮಗೆ ಇಷ್ಟವಾದ ಪ್ರಾಣಿ, ಪಕ್ಷಿ, ಮರ, ಗಿಡ, ತಿಂಡಿ, ವ್ಯಕ್ತಿಗಳು ಇವುಗಳನ್ನು ಕುರಿತಂತೆ ಸರಳವಾದ ಪದಗಳಲ್ಲಿ ಪುಟ್ಟ ಪ್ರಬಂಧವನ್ನು ಬರೆಯುವ ಕಲೆಯನ್ನು ಈ ತರಗತಿಯಲ್ಲಿ ಕಲಿತರೆ ಸಾಕು.

ಉದಾಹರಣೆ:

ನಾನು ಮೆಚ್ಚಿದ ಪ್ರಾಣಿ:

ನನಗೆ ಎತ್ತು ಎಂದರೆ ತುಂಬಾ ಇಷ್ಟ. ಇದು ರೈತರಿಗೆ ಪರಮ ಮಿತ್ರ. ಎತ್ತು ಹೊಲ ಗದ್ದೆಗಳಲ್ಲಿ ಅಗತ್ಯವಾದಾಗಲೆಲ್ಲಾ ದುಡಿಯುತ್ತದೆ. ಅದು ಉಳುತ್ತದೆ, ಬಂಡಿ ಎಳೆಯುತ್ತದೆ. ಗಿಡಗಳಿಗೆ ಗೊಬ್ಬರ ನೀಡುತ್ತದೆ. ಅದು ಸತ್ತನಂತರವೂ ಉಪಕಾರಿ. ಅದರ ಚರ್ಮ ದೇವಾಲಯಗಳಲ್ಲಿ ನಗಾರಿಯಾಗುತ್ತದೆ, ಮೀನುಗಾರರಿಗೆ ತೆಪ್ಪವಾಗುತ್ತದೆ, ಉಡುಗೆ ತೊಡುಗೆಯಾಗುತ್ತದೆ, ಚಪ್ಪಲಿಯಾಗುತ್ತದೆ.

ಇಂತಹ ನಿರುಪದ್ರವಿಯಾದ ಎತ್ತನ್ನು ಮನುಷ್ಯ ನೋಡಿಕೊಳ್ಳುವುದಾದರೂ ಹೇಗೆ? ಅದು ಏನನ್ನೂ ಕಾಡಿ ಕೇಳುವುದಿಲ್ಲ, ಅತ್ತು ಬೇಡುವುದಿಲ್ಲ. ನಾವಾಗಿಯೇ ಹಾಕಿದರೆ ಹುಲ್ಲು ತಿನ್ನುತ್ತದೆ, ಕೊಟ್ಟರೆ ನೀರು ಕುಡಿಯುತ್ತದೆ. ಭಾರತದ ರೈತರು ಈ ಪ್ರಾಣಿಯನ್ನು ದೇವರೆಂದು ಪೂಜಿಸುತ್ತಾರೆ. ಇಷ್ಟು ಉಪಕಾರಿಯಾದ ಈ ಎತ್ತನ್ನು ನಾವು ಪ್ರೀತಿಯಿಂದ ನೋಡಿಕೊಳ್ಳಬೇಕು, ಜಾಗರೂಕತೆಯಿಂದ ಇದಕ್ಕೆ ಆರೈಕೆ ಮಾಡಬೇಕು.

ಭಾಗ–'ಆ'

ಅ) ಬೇರೆ ಬೇರೆ ಮಾದರಿಯ ಪತ್ರಗಳನ್ನು ಸಂಗ್ರಹಿಸಿರಿ.

ಆ) ನೀವು ಮೆಚ್ಚಿದ ಸ್ಥಳ / ವ್ಯಕ್ತಿ / ಪ್ರಾಣಿ / ತಿಂಡಿ / ಅಥವಾ ಇನ್ನಾವುದೇ ವಸ್ತುವನ್ನು ಕುರಿತು ಒಂದು ಚಿಕ್ಕ ಪ್ರಬಂಧ ಬರೆಯಿರಿ.

*****

ಪೂರಕ ಅಧ್ಯಯನ

೧. ಮುಗ್ಧ ಹೂಗಳು

– ಬಿದರಹಳ್ಳಿ ನರಸಿಂಹಮೂರ್ತಿ

ಪ್ರವೇಶ: ಸ್ವಚ್ಛಂದ ಹಕ್ಕಿಗಳಂತಿರುವ ಮುಗ್ಧ ಮಕ್ಕಳು ನಂದನವನದಲ್ಲಿ ಅರಳಿದ ಸುಂದರ ಹೂಗಳಂತೆ. ಅವರ ಸಹಜವಾದ ಮುಗ್ಧತೆ, ಕ್ರಿಯಾಶೀಲತೆ, ತನ್ಮಯತೆ, ಕುತೂಹಲ, ಉಲ್ಲಾಸದ ಗುಣ, ಭಾವತೀವ್ರತೆ, ಎಲ್ಲವೂ ಚೇತೋಹಾರಿ ಗುಣಗಳು. ಸಂತೋಷದಿಂದ ಕುಣಿದು ಕುಪ್ಪಳಿಸುವ ಅವರಲ್ಲಿ ಭೇದಭಾವ ಇರುವುದಿಲ್ಲ. ಅವರ ಮುಂದೆ ಹಿರಿಯರಾದವರು ಚಿಕ್ಕವರಾಗಿಬಿಡುತ್ತಾರೆ. ಹಿರಿಯರ ಸಣ್ಣತನವನ್ನು ಗೆಲ್ಲುವ ಚೈತನ್ಯ ಕಿರಿಯರಲ್ಲಿದೆ ಎಂಬ ಭಾವನೆ ಈ ಕವನದಲ್ಲಿ ವ್ಯಕ್ತವಾಗಿದೆ.



ಚಿಕ್ಕ ಮಕ್ಕಳೆ ಸ್ವಚ್ಛಂದ ಹಕ್ಕಿಗಳೆ
ಮುಗ್ಧ ಹೂಗಳೆ ಕುತೂಹಲದ ನಕ್ಷತ್ರಗಳೆ
ನಿಮ್ಮ ಭಾವನಾ ಜೀವನ ಬಣ್ಣ ಬಣ್ಣ
ನಿಮ್ಮ ಪ್ರತಿಭೆಯ ಮುಂದೆ ನಾವೆಲ್ಲ ಸಣ್ಣ

ಎಳೆ ಬಿಸಿಲ ಹುರುಪಲ್ಲಿ
ತಿಳಿ ಹಸಿರು ನಗೆ ನಗುತ
ನೀಲಿಯಲ್ಲಾಡಿ ಮೋಡ ಹಿಡಿಯುವಿರಿ

ಜೀವ ತೊಳೆಯೊಳಗಿಂದ
ಹೊಳೆದು ಬರುವಕ್ಕರೆಯ
ಸಿಹಿಯ ಬೆರೆಸುವಿರಿ ಬೆಳೆದವರ ಕಹಿಗೆ

ಕಪ್ಪು ಹಾಳೆಯ ಕಂಡು
ಚಿಕ್ಕೆಗಳ ಮಿಂಚಿಸುತ
ಅಂಕಿ ಅಕ್ಷರಗಳನು ಕೂಡಿ ಕಳೆಯುವಿರಿ

ಲೆಕ್ಕವಿಲ್ಲದ ಪ್ರಶ್ನೆ
ನೆಟ್ಟು ಅಲ್ಲಾಡಿಸುತ
ತಟ್ಟಿ ಕದ ಸುಕ್ಕುಗಟ್ಟಿಸುವಿರೆಲ್ಲರನು

ವೇಷ ಭೂಷಣ ಬಣ್ಣ
ಜಾತಿಗಳ ಗುರುತಿಸದೆ
ಬರಿ ಹೃದಯ ಬೆಸೆಯುವಿರಿ ಹೃದಯಗಳಿಗೆ

ಚಪ್ಪರದ ಹೊರಬಿಸಿಲ
ಚಿಂದಿ ಹೊದ್ದವರನ್ನು
ಒಳಮಾಡಿಕೊಳ್ಳುವಾತಂಕ ನಿಮಗೆ

ನೂರೆಂಟು ಮಿತಿಮೇರೆ
ಅಡ್ಡ ಗೋಡೆಗಳುಂಟು
ಕಲಿಯುತ್ತ ಬಲಿತಿರುವ ನಮ್ಮ ನಡುವೆ

ಚಿಕ್ಕ ಮಕ್ಕಳೆ ಸ್ವಚ್ಛಂದ ಹಕ್ಕಿಗಳೆ
ಮುಗ್ಧ ಹೂಗಳೆ ಕುತೂಹಲಿ ನಕ್ಷತ್ರಗಳೆ
ನಿಮ್ಮ ಪ್ರತಿಭೆಯ ಮುಂದೆ ನಾವೆಲ್ಲ ಸಣ್ಣ
ನಮ್ಮ ಸಣ್ತನ ಗೆಲ್ಲಲು ನೀವೆ ಸೈಯಣ್ಣ.

ಕೃತಿಕಾರರ ಪರಿಚಯ



ಕವಿ, ಕತೆಗಾರ, ನಾಟಕಕಾರ, ಚಿಂತಕ, ಸಂಪಾದಕ ಹಾಗೂ ಅನುವಾದಕರಾದ ಬಿದರಹಳ್ಳಿ ನರಸಿಂಹಮೂರ್ತಿಯವರು ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರಿನಲ್ಲಿ ಫೆಬ್ರವರಿ ೫, ೧೯೫೦ರಂದು ಜನಿಸಿದರು. 'ಕಾಡಿನೊಳಗಿದೆ ಜೀವ', 'ಸೂರ್ಯದಂಡೆ', 'ಅಕ್ಕಿಕಾಳು ನಕ್ಕಿತಮ್ಮಾ' (ಕವಿತಾ ಸಂಕಲನಗಳು), 'ಶಿಶುಕಂಡ ಕನಸು', 'ಹಂಸೆ ಹಾರಿತ್ತು' (ಕಥಾಸಂಕಲನ), 'ಹೊಳೆಮಕ್ಕಳು'(ಕಾದಂಬರಿ), 'ಮಹಾಗಾರುಡಿ'(ನಾಟಕ), 'ಕಡಲಂತೆ ಕಾರಂತ', 'ವಿಸ್ತರಿಸುವ ವರ್ತುಲ'(ಸಾಹಿತ್ಯ ವಿಮರ್ಶೆ), ಶಿಶುನಾಳ ಶರೀಫ(ಜೀವನಚರಿತ್ರೆ) ಮುಂತಾದವು ಇವರ ಕೃತಿಗಳು. ಶ್ರೀಯುತರ ಎರಡೂ ಕಥಾಸಂಕಲನಗಳು ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಪಡೆದಿವೆ.

ಪ್ರಸ್ತುತ 'ಮುಗ್ಧಹೂಗಳು' ಕವನವನ್ನು ಬಿದರಹಳ್ಳಿಯವರ 'ಕಾಡಿನೊಳಗಿದೆ ಜೀವ' ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಪದಗಳ ಅರ್ಥ

ಕಪ್ಪು ಹಾಳೆ–ರಾತ್ರಿಯ ಆಗಸ;
ಚಿಂದಿ–ಹರಕಲು ಬಟ್ಟೆ;
ಮಿತಿ–ಎಲ್ಲೆ, ಕಟ್ಟು, ಕಟ್ಟಳೆ, ನಿಯಮ;
ಮುಗ್ಧ–ಕಪಟ ತಿಳಿಯದ, ಸರಳ ಸ್ವಭಾವದ;
ಮೇರೆ–ಎಲ್ಲೆ, ಗಡಿ;
ಸಣ್ತನ–ಸಣ್ಣತನ;
ಸೈ–ಸರಿಯಾದುದು, ತಕ್ಕುದು;
ಸ್ವಚ್ಛಂದ–ಕಟ್ಟುಪಾಡುರಹಿತ, ಮನ ಬಂದಂತೆ ನಡೆದುಕೊಳ್ಳುವ, ಮುಕ್ತ.

ಅಭ್ಯಾಸ

ಅ) ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನು ಬರೆಯಿರಿ.

೧. ಬಿದರಹಳ್ಳಿ ನರಸಿಂಹ ಮೂರ್ತಿಯವರು ತಮ್ಮ ಕವನದಲ್ಲಿ ಚಿಕ್ಕ ಮಕ್ಕಳನ್ನು ಏನೆಂದು ಸಂಬೋಧಿಸಿದ್ದಾರೆ?

೨. 'ಮುಗ್ಧ ಹೂಗಳು' ಕವನದಲ್ಲಿ ಯಾವುದು ಬಣ್ಣ ಬಣ್ಣವಾಗಿದೆ?

೩. ಚಿಕ್ಕಮಕ್ಕಳ ಎಣೆಯಿಲ್ಲದ ಉತ್ಸಾಹ 'ಮುಗ್ಧ ಹೂಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ?

೪. ಬಿದರಹಳ್ಳಿ ಅವರು ತಮ್ಮ ಕವನದಲ್ಲಿ ಚಿಕ್ಕಮಕ್ಕಳು ಎಲ್ಲರನ್ನೂ ಹೇಗೆ ಸುಕ್ಕುಗಟ್ಟಿಸುತ್ತಾರೆ ಎಂದಿದ್ದಾರೆ?

೫. ಚಿಕ್ಕಮಕ್ಕಳಲ್ಲಿ ಭೇದಭಾವವಿಲ್ಲ ಎಂಬ ಅಭಿಪ್ರಾಯ 'ಮುಗ್ಧ ಹೂಗಳು' ಕವನದಲ್ಲಿ ಹೇಗೆ ಮೂಡಿಬಂದಿದೆ?

೬. 'ಮುಗ್ಧ ಹೂಗಳು' ಕವನದಲ್ಲಿ ವ್ಯಕ್ತವಾಗಿರುವಂತೆ ಚಿಕ್ಕ ಮಕ್ಕಳಲ್ಲಿ ಇರುವ ಆತಂಕ ಯಾವುದು?

೭. 'ಮುಗ್ಧ ಹೂಗಳು' ಕವನದಲ್ಲಿ ಹೇಳಿರುವಂತೆ ಚಿಕ್ಕ ಮಕ್ಕಳಿಗಿಂತ ದೊಡ್ಡವರು ಭಿನ್ನ ಹೇಗೆ?

೮. 'ಚಿಕ್ಕ ಮಕ್ಕಳ ಮುಂದೆ ದೊಡ್ಡವರು ಚಿಕ್ಕವರಾಗಿ ಬಿಡುತ್ತಾರೆ' ಎಂಬ ಭಾವನೆ 'ಮುಗ್ಧ ಹೂಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ?

*****

೨. ಉದ್ಯಾನಶಿಲ್ಪಿ ಜಿ.ಎಚ್. ಕೃಂಬಿಗಲ್

–ಸಂಗ್ರಹ

ಪ್ರವೇಶ: "ಕೈ ಮುಗಿದು ಒಳಗೆ ಬಾ, ಇದು ಸಸ್ಯಕಾಶಿ" ಎಂಬ ಆಹ್ವಾನ ಫಲಕವನ್ನು ಹೊತ್ತ ಬೆಂಗಳೂರಿನ ಲಾಲ್‌ಬಾಗ್ ಎಲ್ಲರಿಗೂ ಪರಿಚಿತ. ಬೆಂಗಳೂರಿಗೆ ಉದ್ಯಾನ ನಗರಿಯೆಂಬ ಬಿರುದು ಬರಲು, ಈ ಸಸ್ಯಧಾಮವೂ ಮುಖ್ಯ ಕಾರಣ. ಲಾಲ್‌ಬಾಗ್ ದೇಶವಿದೇಶಗಳ ಅಪರೂಪದ ವರ್ಣರಂಜಿತ ತರು ಲತೆ, ಫಲ–ಪುಷ್ಪಗಳಿಂದ ಕಂಗೊಳಿಸುವ ಸಸ್ಯೋದ್ಯಾನ. ಇದರ ಸೌಂದರ್ಯವನ್ನು ತಮ್ಮ ಕಲ್ಪನಾಶಕ್ತಿಯಿಂದ ದ್ವಿಗುಣಗೊಳಿಸಿದವರು ಜರ್ಮನಿಯ ಭೂದೃಶ್ಯ ವಾಸ್ತುಶಿಲ್ಪಿ ಕೃಂಬಿಗಲ್ ಅವರ ಕಿರುಪರಿಚಯ ಈ ಲೇಖನದಲ್ಲಿದೆ.



ಜಗದ್ವಿಖ್ಯಾತ ಮೈಸೂರಿನ ಬೃಂದಾವನ ಮತ್ತು ಬೆಂಗಳೂರಿನ ಸಸ್ಯಕಾಶಿ ಲಾಲ್‌ಬಾಗ್‌ನ ಸೌಂದರ್ಯಕ್ಕೆ ಮಾರುಹೋಗದೆ ಇರುವವರು ಯಾರು? ಕವಿಗಳಿಗೂ ಪ್ರಕೃತಿಪ್ರಿಯರಿಗೂ ರಸಿಕರಿಗೂ ಸಸ್ಯವಿಜ್ಞಾನಿಗಳಿಗೂ ಇವು ಅಚ್ಚುಮೆಚ್ಚಿನ ತಾಣಗಳು. ಇವುಗಳ ಚೆಲುವನ್ನು ಸವಿಯಲು ಪ್ರತಿನಿತ್ಯ ಸಾವಿರಾರು ಜನ ಹರಿದುಬರುತ್ತಾರೆ. ಕರ್ನಾಟಕದ ಇಂತಹ ಅನೇಕ ಸಸ್ಯೋದ್ಯಾನಗಳ ಅನುಪಮ ಚೆಲುವಿಗೆ ಕಾರಣಕರ್ತರಾದವರು ಉದ್ಯಾನವಿನ್ಯಾಸಗಾರ ಜಿ. ಹೆಚ್. ಕೃಂಬಿಗಲ್‌ರವರು.

ಇವರ ಪೂರ್ಣ ಹೆಸರು ಗುಸ್ತವ್ ಹರ್ಮನ್ ಕೃಂಬಿಗಲ್. ಮೂಲತಃ ಜರ್ಮನಿಯವರು. ಜರ್ಮನಿಗೂ ಕರ್ನಾಟಕಕ್ಕೂ ಹಳೆಯ ಸಂಬಂಧಗಳಿವೆ. ಕನ್ನಡಕ್ಕೆ ಮೊದಲ ನಿಘಂಟು ಕೊಟ್ಟ ಕಿಟ್ಟೆಲ್ ಹಾಗೂ ಕನ್ನಡದ ಮೊದಲ ಸುದ್ದಿಪತ್ರಿಕೆ 'ಮಂಗಳೂರು ಸಮಾಚಾರ' ಪ್ರಕಟಿಸಿದ ಮೊಗ್ಲಿಂಗ್ ಜರ್ಮನಿಯವರು. ಇವರ ನಂತರ ಬಂದ ಸಸ್ಯೋದ್ಯಾನ ಮತ್ತು ಭೂದೃಶ್ಯ(ಲ್ಯಾಂಡ್‌ಸ್ಕೇಪ್)ವಾಸ್ತುಶಿಲ್ಪಿ ಕೃಂಬಿಗಲ್ ಕರ್ನಾಟಕವನ್ನು ಸುಂದರ ಉದ್ಯಾನವನಗಳಿಂದ ಅಲಂಕರಿಸಿದರು.

ಕೃಂಬಿಗಲ್, ಜರ್ಮನಿಯ ಲಾಹ್ಮೆನ್‌ನಲ್ಲಿ ೧೮೬೫ರ ಡಿಸೆಂಬರ್ ೧೮ರಂದು ಜನಿಸಿದರು. ಜರ್ಮನಿಯಲ್ಲೇ ಆಲಂಕಾರಿಕ ತೋಟಗಾರಿಕೆಯ ಶಿಕ್ಷಣ ಪೂರೈಸಿದ ಅವರು ಮುಂದೆ ಲಂಡನ್ನಿನಲ್ಲಿ ಉನ್ನತ ತರಬೇತಿ ಪಡೆದರು. ಅವರಿಗೆ ಜರ್ಮನಿಗೆ ಹಿಂತಿರುಗಲು ಆಸಕ್ತಿ ಇರಲಿಲ್ಲ. ಇಂಗ್ಲೆಂಡ್ ಆಳ್ವಿಕೆ ಇರುವ ದೇಶಗಳಲ್ಲಿ ಕೆಲಸ ಮಾಡುವ ಬಯಕೆಯಿತ್ತು. ಇದೇ ಸಂದರ್ಭದಲ್ಲಿ ತಮ್ಮ ರಾಜ್ಯದ ಉದ್ಯಾನಗಳ ಅಭಿವೃದ್ಧಿಯ ಸಲುವಾಗಿ ಸಮರ್ಥ ತಜ್ಞರೊಬ್ಬರನ್ನು ಕಳಿಸಿಕೊಡಬೇಕೆಂದು ಬರೋಡಾದ ಸಯ್ಯಾಜಿರಾವ್ ಮಹಾರಾಜರು ಲಂಡನ್ನಿನ ಅಧಿಕಾರಿಗಳಿಗೆ ಪತ್ರ ಬರೆದರು. ತೋಟಗಾರಿಕೆಯಲ್ಲಿ ಹೊಸ ಸಾಹಸಗಳನ್ನು ಮಾಡಲು ಕಾತರಿಸುತ್ತಿದ್ದ ಯುವಕ ಕೃಂಬಿಗಲ್ ಅವರನ್ನು ಲಂಡನ್ ಅಧಿಕಾರಿಗಳು ಬರೋಡಾಗೆ ಕಳುಹಿಸಿಕೊಟ್ಟರು.

ಕೃಂಬಿಗಲ್ ತಮ್ಮ ಸಸ್ಯಜ್ಞಾನ ಮತ್ತು ಪ್ರತಿಭೆಯಿಂದ ಬರೋಡಾ ರಾಜ್ಯದಲ್ಲಿ ಅನೇಕ ಸುಂದರ ಉದ್ಯಾನವನಗಳನ್ನು ನಿರ್ಮಿಸಿ, ದೇಶದ ಗಮನ ಸೆಳೆದರು. ಊಟಿಯ 'ವುಡ್‌ಸ್ಟಾಕ್ ಎಸ್ಟೇಟ್', ಜಮ್‌ಷೆಡ್‌ಪುರದ ಮೊಘಲ್ ಗಾರ್ಡನ್, ಕೋಲಾರದ ಸಿಲ್ವರ್ ಜ್ಯೂಬಿಲಿ ಉದ್ಯಾನವನದ ವಿನ್ಯಾಸ, ದೆಹಲಿಯ ಚಾರ್‌ಬಾಘ್ ಹಾಗೂ ರಾಜ್‌ಘಾಟ್ ಉದ್ಯಾನವನ, ಜಮ್‌ಷೆಡ್‌ಪುರದ ಬಾಗ್ ಕುಡ್‌ಲೇಕ್–ಇವು ಅವರ ಕೈಚಳಕದ ಫಲಗಳಾಗಿವೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ವಿಶಾಲ ಆವರಣವು ಸಸ್ಯಸಂಪತ್ತಿನಿಂದ ನಳನಳಿಸುವಂತೆ ಮಾಡುವುದರಲ್ಲೂ ಅವರ ಪಾತ್ರವಿದೆ.

ಕೃಂಬಿಗಲ್‌ರವರು ಬರೋಡಾದ ಮುಮ್ಮಡಿ ಸಯ್ಯಾಜಿರಾವ್, ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್, ಮುಂಬೈನ ಜೆ. ಎಂ ಟಾಟಾ ಮುಂತಾದವರೊಂದಿಗೆ ಆಪ್ತ ಗೆಳೆತನವನ್ನು ಹೊಂದಿದ್ದರು. ನಾಲ್ವಡಿಯವರ ಆಸಕ್ತಿಯಿಂದ ಕೃಂಬಿಗಲ್ ಅವರ ಕಲಾಪ್ರತಿಭೆ ಮೈಸೂರು ರಾಜ್ಯಕ್ಕೂ ದೊರಕಿತು. ೧೯೦೮ರಲ್ಲಿ ಮೈಸೂರು ಸರ್ಕಾರವು ಉದ್ಯಾನವನಗಳ ನಿರ್ವಹಣೆಗಾಗಿ 'ಸರ್ಕಾರಿ ತೋಟಗಳ ಇಲಾಖೆ' ಎಂಬ ಇಲಾಖೆಯನ್ನು ಸ್ಥಾಪಿಸಿ, ಅದರ ಪ್ರಥಮ ನಿರ್ದೇಶಕರಾಗಿ ಕೃಂಬಿಗಲ್ ಅವರನ್ನು ನೇಮಿಸಿತು. ನಂತರ ಕೃಂಬಿಗಲ್ ಬೆಂಗಳೂರಿನ ಲಾಲ್‌ಬಾಗ್ ಸಸ್ಯೋದ್ಯಾನದ ಕ್ಯುರೇಟರಾಗಿ ನೇಮಕಗೊಂಡರು. ಲಾಲ್‌ಬಾಗ್‌ನಲ್ಲಿ ಆಕರ್ಷಕವಾದ ಕಾಲುಹಾದಿಗಳನ್ನು ನಿರ್ಮಿಸಿ ಅದರ ಉದ್ದಕ್ಕೂ ವರ್ಷಪೂರ್ತಿ ಹೂಬಿಡುವ ಗಿಡಗಳನ್ನು ಅವರು ನೆಡಿಸಿದರು. ಅಲ್ಲಿರುವ ಗಾಜಿನಮನೆಯ ಮುಂಭಾಗದ ವಾಯುವಿಹಾರ ತಾಣದಲ್ಲಿ ಕಂಗೊಳಿಸುತ್ತಿರುವ ಮನಮೋಹಕ ಕಾರಂಜಿ, ಬ್ಯಾಂಡ್‌ಸ್ಟ್ಯಾಂಡ್, ಮಣ್ಣಿನ ಕುಂಡ, ದೀಪದ ಕಂಬ– ಮೊದಲಾದ ಅದ್ಭುತ ವಿನ್ಯಾಸಗಳು ಅವರ ಕಲಾಪ್ರಜ್ಞೆಯನ್ನು ಸಾರುತ್ತಿವೆ. ನೊಬೆಲ್ ಪ್ರಶಸ್ತಿವಿಜೇತ ರವೀಂದ್ರನಾಥ ಟಾಗೂರ್ ಅವರನ್ನು ಸನ್ಮಾನಿಸಲು ಕೃಂಬಿಗಲ್ ರೂಪಿಸಿದ ಲಾಲ್‌ಬಾಗನ್ನು ಆರಿಸಿಕೊಳ್ಳಲಾಯಿತು.

ಕೃಂಬಿಗಲ್ ಅವರಿಗೆ ತೋಟಗಾರಿಕಾ ರೈತರ ಬಗ್ಗೆ ಅಪಾರ ಕಳಕಳಿಯಿತ್ತು. ಈ ಕ್ಷೇತ್ರದಲ್ಲಿ ಅವರು ಹಲವು ಮೈಲಿಗಲ್ಲುಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಮುಖ್ಯವಾದ ಕೆಲವು ಇಂತಿವೆ :

- ಲಾಲ್‌ಬಾಗ್‌ನಲ್ಲಿ ಹಣ್ಣಿನ ತೋಟವನ್ನು ಸ್ಥಾಪಿಸಿ, ಹೂವು, ಹಣ್ಣು, ಸಸ್ಯ ಹಾಗೂ ಬೀಜಗಳ ಮಾರಾಟ ಮತ್ತು ವಿನಿಮಯಕ್ಕೆ ಅವಕಾಶ ಕಲ್ಪಿಸಿಕೊಟ್ಟರು.
- ದೇಶ ವಿದೇಶಗಳಿಂದ ಸಸ್ಯಗಳನ್ನು ಆಮದು ಮಾಡಿಕೊಂಡು ನೂರಾರು ಹೊಸ ಪ್ರಭೇದ ಮತ್ತು ತಳಿಗಳನ್ನು ನಾಡಿನ ಕೃಷಿಕರಿಗೆ ಪರಿಚಯಿಸಿದರು.
- ರೈತರಿಗೆ ತರಬೇತಿ ನೀಡುವ ಸಲುವಾಗಿ 'ತೋಟಗಾರಿಕೆ ತರಬೇತಿ ಶಾಲೆ'ಯನ್ನು ಸ್ಥಾಪಿಸಿದರು.
- ಅಪರೂಪದ ಸಸ್ಯ ಪ್ರಭೇದಗಳನ್ನು ಪರಿಚಯಿಸುವ ವಿವರಣಾ ಫಲಕಗಳನ್ನು ಅವುಗಳ ಕೆಳಗೆ ನೆಡಿಸಿದರು.
- ರೈತರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಗುವಂತೆ ತೋಟಗಾರಿಕಾ ಬೆಳೆಗೆ ವಾಣಿಜ್ಯರೂಪ ಕೊಟ್ಟರು.
- ಗಾಜಿನ ಕಂಟೈನರ್‌ಗಳನ್ನು ಬಳಸಿ ಹಣ್ಣುಗಳನ್ನು ಸಂರಕ್ಷಿಸುವ ಮತ್ತು 'ಸನ್ ಡ್ರೈಯಿಂಗ್' ವಿಧಾನಗಳನ್ನು ತಿಳಿಸಿಕೊಟ್ಟರು. ಮೈಸೂರು ರಾಜ್ಯದ ಹೂವು, ಹಣ್ಣು ಹಾಗೂ ತರಕಾರಿಗಳ ರಫ್ತು ವಹಿವಾಟನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸಿದರು.
- ಲಾಲ್‌ಬಾಗ್‌ನಲ್ಲಿ ಏರ್ಪಡಿಸುತ್ತಿದ್ದ ಸುಂದರ ಫಲಪುಷ್ಪ ಪ್ರದರ್ಶನಗಳಲ್ಲಿ ರೈತರು ಭಾಗವಹಿಸುವಂತೆ ಪ್ರೋತ್ಸಾಹಿಸಿದರು.
- ಮೈಸೂರು ರಾಜ್ಯದಲ್ಲಿ ೨೦೦ಕ್ಕೂ ಹೆಚ್ಚಿನ ಹಣ್ಣಿನ ತೋಟಗಳನ್ನು ಬೆಳೆಸಲು ಪ್ರೋತ್ಸಾಹಿಸಿದರು.
- ಬೆಂಗಳೂರಿನಲ್ಲಿ 'ಮೈಸೂರು ಉದ್ಯಾನ ಕಲಾಸಂಘ'ವೆಂಬ ಹವ್ಯಾಸಿ ಸಂಸ್ಥೆಯನ್ನು ಸ್ಥಾಪಿಸಿದರು. ಈಗ ಲಾಲ್‌ಬಾಗ್‌ನಲ್ಲಿ ಪ್ರತಿವರ್ಷ ನಡೆಯುವ ಫಲಪುಷ್ಪ ಪ್ರದರ್ಶನದ ಹಿಂದೆ ಕೃಂಬಿಗಲ್ ಅವರ ದೂರದೃಷ್ಟಿಯಿದೆ.

ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರು ಕೃಂಬಿಗಲ್ ಅವರನ್ನು ಮೈಸೂರು ರಾಜ್ಯದ ಪ್ರಧಾನ ವಾಸ್ತುಶಿಲ್ಪಿಗಳಾಗಿ ನೇಮಕ ಮಾಡಿದರು. ಬೆಂಗಳೂರಿನ ಮಹಾನಗರ ಪಾಲಿಕೆಯ ಮುಖ್ಯ ಕಟ್ಟಡವು ಆಗ ರೂಪು

ತಳೆಯಿತು. ಕೃಂಬಿಗಲ್ ಅವರು ಬೆಂಗಳೂರಿನ ಸರ್ಕಾರಿ ಮ್ಯೂಸಿಯಂನ ಮೇಲ್ವಿಚಾರಕರಾಗಿದ್ದರು.ಮೈಸೂರು ರಾಜ್ಯದ ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಬೆಂಗಳೂರಿನ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅತಿಥಿ ಪ್ರಾಧ್ಯಾಪಕರಾಗಿ ವಾಸ್ತುಶಿಲ್ಪಶಾಸ್ತ್ರ, ನಗರಯೋಜನೆ(ಟೌನ್‌ಪ್ಲಾನಿಂಗ್) ಹಾಗೂ ಕಟ್ಟಡ ವಿನ್ಯಾಸ ವಿಷಯಗಳನ್ನು ಬೋಧಿಸಿದರು. ರಾಜ್ಯದ ಅತಿಥಿಗೃಹ, ಅರಮನೆ ಹಾಗೂ ಸಾರ್ವಜನಿಕ ಉದ್ಯಾನಗಳು ಅವರ ಕೈಚಳಕದಿಂದ ಸುಂದರಗೊಂಡು ನಳನಳಿಸಿದವು. ಇಂದು ಬೆಂಗಳೂರು 'ಉದ್ಯಾನ ನಗರಿ' ಎನಿಸುವಲ್ಲಿ ಕೃಂಬಿಗಲ್ ಅವರ ಮಹತ್ವದ ಪಾತ್ರವಿದೆ.

ಚಿತ್ರಕಲೆ, ಸಂಗೀತ ಹಾಗೂ ಸಾಹಿತ್ಯಗಳಲ್ಲಿ ಅಭಿರುಚಿ ಹಾಗೂ ಆಸಕ್ತಿಯನ್ನು ಹೊಂದಿದ್ದ ಕೃಂಬಿಗಲ್ ಹಲವಾರು ಭಾಷೆಗಳನ್ನು ಬಲ್ಲವರಾಗಿದ್ದರು. ಕರ್ನಾಟಕವನ್ನೇ ತಮ್ಮ ತಾಯ್ನಾಡೆಂಬಂತೆ ಪ್ರೀತಿಸಿದ ಅವರು ೧೯೫೬ರ ಫೆಬ್ರವರಿ ೮ರಂದು ನಿಧನರಾದರು. ಅವರ ಪುಸ್ತಕ, ಸ್ಕೆಚ್ ಹಾಗೂ ದಾಖಲೆಗಳನ್ನು ಲಾಲ್‌ಬಾಗ್‌ನ ಭೂದೃಶ್ಯ ವಿಭಾಗದಲ್ಲಿ ಸಂಗ್ರಹಿಸಿಡಲಾಗಿದೆ. ಅವರ ಸೇವೆಯನ್ನು ಗುರುತಿಸಿ, ಬೆಂಗಳೂರು ಮಹಾನಗರ ಪಾಲಿಕೆ, ಲಾಲ್‌ಬಾಗಿನ ಪಕ್ಕದ ರಸ್ತೆಗೆ 'ಕೃಂಬಿಗಲ್ ರಸ್ತೆ' ಎಂದು ನಾಮಕರಣ ಮಾಡಿ ಗೌರವ ಸಲ್ಲಿಸಿದೆ.

ಪದಗಳ ಅರ್ಥ

ತಾಣ–ಸ್ಥಳ, ಜಾಗ;

ಪರಿಣತ–ಪರಿಪಕ್ವನಾದವನು, ನಿಪುಣ, ನಿಷ್ಣಾತ;

ಪುತ್ಥಳಿ–ಪ್ರತಿಮೆ, ವಿಗ್ರಹ, ಬೊಂಬೆ;

ಮೈಲಿಗಲ್ಲು–ಪ್ರಮುಖವಾದ ಘಟ್ಟ, ಹಂತ;

ರಸಿಕ–ಹಾಸ್ಯಮನೋಭಾವವುಳ್ಳವನು, ಶೃಂಗಾರದಲ್ಲಿ ಆಸಕ್ತಿಯುಳ್ಳವನು.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಸೂಕ್ತ ಉತ್ತರ ಬರೆಯಿರಿ.

೧. ಲಾಲ್‌ಬಾಗ್ ಸಸ್ಯೋದ್ಯಾನದ ಅನುಪಮ ಚೆಲುವಿಗೆ ಕಾರಣಕರ್ತರಾದ ಭೂದೃಶ್ಯ ವಾಸ್ತುಶಿಲ್ಪಿ ಯಾರು?

೨. ಲಾಲ್‌ಬಾಗ್‌ಗೆ ಪ್ರತಿನಿತ್ಯ ಸಾವಿರಾರು ಜನ ಹರಿದುಬರುತ್ತಾರೆ ಏಕೆ?

೩. ಕೃಂಬಿಗಲ್ ಯಾರು? ಅವರ ಪೂರ್ಣ ಹೆಸರೇನು?

೪. ಕನ್ನಡನಾಡಿಗೆ ಜರ್ಮನರ ಕೊಡುಗೆಗಳೇನು?

೫. ಕನ್ನಡದ ಮೊದಲ ಪತ್ರಿಕೆ ಯಾವುದು?

೬. ಕೃಂಬಿಗಲ್‌ರವರು ಬರೋಡಾಗೆ ಏಕೆ ಬಂದರು?

೭. ಕರ್ನಾಟಕದ ತೋಟಗಾರಿಕಾ ಕ್ಷೇತ್ರಕ್ಕೆ ಕೃಂಬಿಗಲ್ ಅವರ ಕೊಡುಗೆಗಳೇನು?

೮. ಕೃಂಬಿಗಲ್‌ರವರ ಮೇರು ವ್ಯಕ್ತಿತ್ವಕ್ಕೆ ಯಾವುದು ಕನ್ನಡಿ ಹಿಡಿದಂತಿದೆ?

೯. ಕೃಂಬಿಗಲ್‌ರವರ ಅನುಪಮ ಸೇವೆಗೆ ಯಾವರೀತಿ ಗೌರವ ಸಲ್ಲಿಸಲಾಗಿದೆ?

*****

೩. ಸಾವೇ

– ರಂಜಾನ ದರ್ಗಾ

ಪ್ರವೇಶ: ಹುಟ್ಟಿದ ಎಲ್ಲ ಜೀವಿಗಳು ಒಂದಿಲ್ಲೊಂದು ದಿನ ಮರಣ ಹೊಂದುವುದು ಸಹಜ. ಇದು ನಿಸರ್ಗದ ಧರ್ಮ ಕೂಡ. ಸಾವಿನ ಚಿಂತನೆ ಬದುಕನ್ನು ತೀವ್ರವಾಗಿ ಪ್ರೀತಿಸಲು ಪ್ರೇರಿಸುತ್ತದೆ. 'ಕಾಲನಿದಿರೊಳ್ ಉಲ್ಲಾಸವೇ ಧರ್ಮ' ಎಂಬ ಕವಿ ನುಡಿಯಿದೆ. ಆದರೆ ಸಹಜಸಾವು ಬರುವುದಕ್ಕೆ ಮುನ್ನ ಜನರನ್ನು ತಮ್ಮ ದುಷ್ಟತನದಿಂದ ಕೊಲ್ಲುವ ಶಕ್ತಿಗಳೂ ಸಮಾಜದಲ್ಲಿವೆ. ಆಗ ಸಾವು ಕ್ರೂರವೆನಿಸುತ್ತದೆ. ಪ್ರಪಂಚದ ಸುಖ ಸೌಂದರ್ಯವನ್ನು ಜನ ಸಾಯುವ ಮುನ್ನ ಸವಿಯಬೇಕು. ಆದರೆ ಹಾಗೆ ಸವಿಯಬೇಕಾದರೆ ಜನರ ಅಕಾಲಿಕ ಸಾವಿಗೆ ಕಾರಣವಾಗುವ ಸಂಗತಿಗಳನ್ನು ವಿರೋಧಿಸಬೇಕು. ಅವನ್ನು ನಾಶಮಾಡಬೇಕು. ಆಗ ಮಾತ್ರ ಬದುಕನ್ನು ಪ್ರೀತಿಸುವುದಕ್ಕೆ ಅರ್ಥ ಬರುತ್ತದೆ ಎಂಬ ಭಾವನೆಯನ್ನು ಈ ಕವನವು ಒಳಗೊಂಡಿದೆ.



ಸಾವೇ!
ನಿನ್ನ ನೆನಪಾದಾಗಲೆಲ್ಲ
ಬೆಳೆಯುವ ಮಕ್ಕಳು
ಹಸಿರೊಡೆಯುವ ಚಿಗುರೆಲೆಗಳು
ನೆನಪಾಗುತ್ತವೆ.

ಸಾವೇ!
ನಿನ್ನ ನೆನಪಾದಾಗಲೆಲ್ಲ
ಪೃಥ್ವಿಯ ಪ್ರತಿಭಾಗವೂ
ಸುಂದರವಾಗಿ ಕಾಣುತ್ತದೆ.
ಪ್ರತಿಕ್ಷಣವೂ ಮಹತ್ವದ್ದೆನಿಸುತ್ತದೆ.

ಸಾವೇ!
ನಿನ್ನ ನೆನಪಾದಾಗಲೆಲ್ಲ
ತಾರಾಮಂಡಲದ ತುಂಬ ಸುಳಿದಾಡುವ
ಜನರ ಕನಸುಗಳನ್ನೆಲ್ಲ ಹಿಡಿಹಿಡಿದು
ಭೂಮಿಗೆ ತರಬೇಕೆನ್ನಿಸುತ್ತದೆ.

ಸಾವೇ!

ನಿನ್ನ ನೆನಪಾದಾಗಲೆಲ್ಲ

ಅಸಮಾನತೆಯ ಪ್ರತಿಪಾದಿಸುತ್ತ

ಕೊಲ್ಲುವ ವಿಷಾತ್ಮರನ್ನೆಲ್ಲ ಕಲೆಹಾಕಿ

ನಿನ್ನ ಕೈಯಲ್ಲಿ ಕೊಡಬೇಕೆನ್ನಿಸುತ್ತದೆ.

ಸಾವೇ!

ನಿನ್ನ ನೆನಪಾದಾಗಲೆಲ್ಲ

ವಿಶ್ವದ ಮದ್ದು ಗುಂಡುಗಳನ್ನೆಲ್ಲ

ಎಂದೆಂದಿಗೂ ಹೊರ ಬರದಂತೆ ಹೂತು

ಹೊಸ ಯುಗವ ಹುಟ್ಟಿಸಬೇಕೆನ್ನಿಸುತ್ತದೆ.

ಕೃತಿಕಾರರ ಪರಿಚಯ:



ಕವಿ, ಚಿಂತಕ ಹಾಗೂ ಪತ್ರಕರ್ತರಾದ ರಂಜಾನ್ ದರ್ಗಾರವರು ಜೂನ್ ೨೦, ೧೯೫೨ರಲ್ಲಿ ಜನಿಸಿದರು. ಇವರ ಊರು ವಿಜಯಪುರ. 'ಕಾವ್ಯ ಬಂತು ಬೀದಿಗೆ', 'ಹೊಕ್ಕಳಲ್ಲಿ ಹೂವಿದೆ' (ಕವನ ಸಂಕಲನ) 'ಸಾಹಿತ್ಯ ಮತ್ತು ಸಮಾಜ', 'ಅಮೃತ ಮತ್ತು ವಿಷ', 'ಬಸವಪ್ರಜ್ಞೆ', 'ಶರಣರ ಸಮಗ್ರ ಕ್ರಾಂತಿ', 'ಮೂರ್ತ ಮತ್ತು ಅಮೂರ್ತ' (ಲೇಖನಗಳ ಸಂಗ್ರಹ), 'ನೆಲ್ಸನ್ ಮಂಡೇಲಾ', 'ಸಜ್ಜಾದ ಜಾಹೀರ್' 'ಗುರುಪೀರಾ ಖಾದ್ರಿ' (ಜೀವನಚರಿತ್ರೆ), 'ತಲಾಖ್ ಕೊಟ್ಟರೆ ಬಾರೇಟು ಶಿಕ್ಷೆ' (ಚಿಂತನೆ) ಮುಂತಾದವು ಇವರ ಪ್ರಮುಖ ಕೃತಿಗಳು.

ಶರಣ ಸಾಹಿತ್ಯದ ಬಗ್ಗೆ ವಿಶಿಷ್ಟವಾದ ಚಿಂತನೆ ಮಾಡಿರುವ ಶ್ರೀ ದರ್ಗಾ ಅವರು, ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಬಸವಪ್ರಶಸ್ತಿ ಪುರಸ್ಕೃತರು.

ಪ್ರಸ್ತುತ 'ಸಾವೇ' ಕವನವನ್ನು 'ಹೊಕ್ಕಳಲ್ಲಿ ಹೂವಿದೆ' ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಪದಗಳ ಅರ್ಥ:

ತಾರಾಮಂಡಲ–ನಕ್ಷತ್ರಗಳ ಲೋಕ.

ಪೃಥ್ವಿ–ಭೂಮಿ.

ವಿಷಾತ್ಮ–ದುಷ್ಟತನವುಳ್ಳ ಜನ.

ಹೂತು – ಹುಗಿದು.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಸೂಕ್ತ ಉತ್ತರ ಬರೆಯಿರಿ.

೧. ದರ್ಗಾ ಅವರಿಗೆ ಸಾವಿನ ನೆನಪಾದಾಗ ಬೆಳೆಯುವ ಮಕ್ಕಳೊಡನೆ ಯಾವುದು ನೆನಪಾಗುತ್ತದೆ?

೨. ದರ್ಗಾ ಅವರಿಗೆ ಪ್ರತಿಕ್ಷಣವೂ ಮಹತ್ವದ್ದೆನಿಸುವುದು ಯಾವಾಗ ಮತ್ತು ಏಕೆ?

೩. ದರ್ಗಾ ಅವರಿಗೆ ಏನನ್ನು ಭೂಮಿಗೆ ಹಿಡಿದು ತರಬೇಕು ಎನಿಸುತ್ತದೆ?

೪. ಕವಿ ದರ್ಗಾ ಅವರಿಗೆ ಸಾವಿನ ಕೈಗೆ ಏನನ್ನು ಕೊಡಬೇಕು ಎನಿಸುತ್ತದೆ?

೫. ರಂಜಾನ ದರ್ಗಾ ಅವರು ಎಂತಹ ಹೊಸ ಯುಗ ಹುಟ್ಟಿಸಬೇಕೆಂದು ಆಶಿಸುತ್ತಾರೆ?

*****

೪. ಬಿಳಿದಾಳೆ ಆನೆಗಳು

– ಪಾರ್ವತೀಶ್

ಪ್ರವೇಶ: ಕಾಡು ಪ್ರಾಣಿಗಳ ಆಕಸ್ಮಿಕ ದರ್ಶನ ಮನುಷ್ಯರಿಗೆ ಕುತೂಹಲ, ಸಂತಸ, ರೋಮಾಂಚನ. ಆದರೆ, ಮನುಷ್ಯರ ದರ್ಶನ ಕಾಡು ಪ್ರಾಣಿಗಳಿಗೆ ಆತಂಕ ಮತ್ತು ಭಯ. ಕಾಡು ಪ್ರಾಣಿಗಳಲ್ಲಿ ಆನೆಯನ್ನು ಕಂಡರೆ ಮನುಷ್ಯರಿಗೆ ಏನೋ ಒಂದು ರೀತಿಯ ಆಪ್ತಭಾವ, ಅಕ್ಕರೆ. ಆದರೆ ಆನೆಗಳಿಗೂ ಮನುಷ್ಯರಿಗೂ ಸಂಘರ್ಷದ ಸಂಬಂಧವೂ ಇದೆ. ಕಾಡಲ್ಲಿರುವ ಆನೆಗಳು ನಾಡನ್ನು ಪ್ರವೇಶಿಸಿದರೆ ಆಗಬಹುದಾದ ಅವಾಂತರ–ರೋಚಕತೆಗಳನ್ನು ಈ ಲೇಖನವು ಒಳಗೊಂಡಿದೆ.

ದಿನಕ್ಕೆ ಮೂರು ಸಾರಿ ಬಸ್ ಬಂದು ಹೋಗುವಂತೆ ಈಗ ವಾರಕ್ಕೆ ಮೂರು ದಿನ ಆನೆಗಳೂ ನಮ್ಮೂರಿಗೆ ಬಂದು ಹೋಗುವುದು ಮಾಮೂಲಾಗಿ ಹೋಗಿದೆ. ಈ ಗದ್ದಲದಲ್ಲಿ ನಾನು ಬೇಸಾಯ ಹೂಡಿ ಗೆಲ್ಲುವುದುಂಟೆ ಅಂತ ಯೋಚನೆಯಾಗಿದೆ. ಅದಿರಲಿ ಬಿಡಿ. ನಾನು ಊರಲ್ಲಿದ್ದ ಎರಡು ದಿನದಲ್ಲಿ ಈ ಆನೆ– ಮನುಷ್ಯರ ಮುಖಾಮುಖಿಯ ಕೆಲವು ಘಟನೆಗಳ ಬಗ್ಗೆ ಹುಣಸನಹಳ್ಳಿಯ ರೈತ ಮಿತ್ರ ರಾಜಣ್ಣ ಹಾಗೂ ಶಿಕಾರಿ ಶಿವ ಹೇಳಿದರು. ನನಗವು ತಮಾಷೆಯಾಗಿ ಕಂಡದ್ದರಿಂದ ನಿಮಗೂ ಹೇಳುತ್ತಿದ್ದೇನೆ.

ಬಿಳಿದಾಳೆಯ ಅನತಿ ದೂರದಲ್ಲಿ ಕೆಸ್ತೂರೆಂಬ ಹಳ್ಳಿಯಿದೆ. ಬನ್ನೇರುಘಟ್ಟದಿಂದ ಶುರುವಾಗುವ ನಮ್ಮೂರ ಕಾಡು ಒಂದು ಕಡೆ ತಮಿಳುನಾಡಿನ ಸೇಲಂ, ಕೃಷ್ಣಗಿರಿ, ಡೆಂಕಣಿಕೋಟೆ, ಅಂಚೆಟ್ಟಿ, ಹೊಗೇನಕಲ್ ಕಡೆಗೆ ಹಬ್ಬುತ್ತಾ ಹೋಗುತ್ತದೆ. ಮತ್ತೊಂದೆಡೆ ತಳಿ, ಜವಳಗಿರಿ, ಗಟ್ಟಿಗುಂದ, ಬಿಳಿದಾಳೆ, ಬ್ಯಾಲಪಟ್ಟಿ, ಕೆಸ್ತೂರು, ಹೀಗೆ ಹರಡುತ್ತಾ ಕಾವೇರಿ ನದಿ ದಾಟಿ ಮಲೈಮಹದೇಶ್ವರ ಬೆಟ್ಟದ ಕಡೆಗೆ ಸಾಗುತ್ತದೆ. ಈ ಕೆಸ್ತೂರಿನಲ್ಲಿ ಕಳೆದ ವಾರ ರೈತನೊಬ್ಬನಿಗೆ ಆನೆ ಮರಿಯೊಂದು ಲಾತ ಕೊಟ್ಟ ಕತೆ ಇದು.

ಎಂದಿನಂತೆ ಕಾಡಿಗೆ ಮೇಯಲು ಹೋಗಿದ್ದ ಅವನ ಎಮ್ಮೆಗಳು ಸಂಜೆ ದೊಡ್ಡಿಗೆ ವಾಪಸ್ ಬಂದವು. ಊರಂಚಿನ ದನದ ಕೊಟ್ಟಿಗೆ ಬಳಿ ಇಳಿಸಂಜೆಯ ವೇಳೆ ತನ್ನ ಎಮ್ಮೆಗಳಿಗೆ ಕಾಯುತ್ತಾ ಇವನು ನಿಂತಿದ್ದಾನೆ. ಅದೋ..... ಎಮ್ಮೆಗಳೂ ಗುಂಪಾಗಿ ಕದಲುತ್ತಾ ಬರುತ್ತಿವೆ. ಇನ್ನೇನು ದೊಡ್ಡಿ ಬಾಗಿಲು ಹತ್ತಿರಾದಂತೆ ಗುಂಪಿನ ಒಂದು ಮೂಲೆಯಿಂದ ಒಂದು ಪ್ರಾಣಿ ಹೊರಟು ಸೀದಾ ರೈತನ ಹತ್ತಿರಕ್ಕೆ ಬಂತು. ನೋಡಿದರೆ ಆನೆ ಮರಿ!


ಕಾಡಿನಲ್ಲಿ ಮೇಯುತ್ತಾ ಇದ್ದ ಎಮ್ಮೆಗಳಿಗೆ ಈ ಆನೆಮರಿ ಅದ್ಹೇಗೆ ಜೊತೆಯಾಯಿತೋ ಏನೋ ಸಂಜೆ ಅವುಗಳ ಜೊತೆಗೇನೆ ಊರಿಗೆ ಬಂದು ಬಿಟ್ಟಿತ್ತು ಆ ಪುಟಾಣಿ ಆನೆ. ಸೊಂಡಿಲು ಆಡಿಸುತ್ತಾ ತಲೆ ಬಗ್ಗಿಸಿಕೊಂಡು ಎಮ್ಮೆಗಳೊಂದಿಗೆ ಹೊರಟು ಬಂದ ಆನೆ ಮರಿಗೆ ಊರ ಬಾಗಿಲು ಹತ್ತಿರಾದಾಗ ಒಬ್ಬ ಮನುಷ್ಯನೂ ಮನೆಗಳೂ ಕಂಡಿವೆ. ಅದಕ್ಕೆ ಗಾಬರಿಯಾಯಿತೋ ಏನೋ ಸೀದಾ ಅವನ ಹತ್ತಿರ ಬಂದು ಸೊಂಡಿಲಿನಿಂದ ತಳ್ಳಿ ಬೀಳಿಸಿ ಕಿರುಚಿಕೊಂಡು ಕಾಡಿಗೆ ಓಡಿ ಹೋಗಿದೆ. ನಮ್ಮೂರ ಜನರಿಗೆ ಇದೀಗ ಹರಟೆಯ ಸುದ್ದಿಯಾಗಿದೆ.

ಕಳೆದ ತಿಂಗಳು ತಾನೇ ಅದೇ ಬನ್ನೇರುಘಟ್ಟ ರಕ್ಷಿತಾರಣ್ಯದ ತೇರು ಬೀದಿಯ ಹತ್ತಿರ ಕಾಡಿನಲ್ಲಿ ಒಂದು ನ್ಯೂಬಾರ್ನ್ ಆನೆ ಮರಿ ಅರಣ್ಯ ಇಲಾಖೆಗೆ ಸಿಕ್ಕಿತು. ಅಮ್ಮನಿಂದ ಬೇರೆಯಾಗಿದ್ದ ಅದು ಕಾಡಿನಲ್ಲೆಲ್ಲೊ ಅಳುತ್ತಾ ಇದ್ದಾಗ ಗಮನಿಸಿದ ಜನ ಇಲಾಖೆಗೆ ತಿಳಿಸಿದಾಗ, ಅವರು ನ್ಯಾಷನಲ್ ಪಾರ್ಕ್‌ಗೆ ತಲುಪಿಸಿದರು. ಅದೇ ತರಹ ಇನ್ನೊಂದು ಘಟನೆ ಬಿಳಿದಾಳೆಯ ಸಮೀಪದ ಉಡುಬುರಾಣಿ ಎಂಬಲ್ಲೂ ಆಗಿದೆ.

ಆಡು ಮೇಯಿಸಲು ಕಾಡಿಗೆ ಹೋಗಿದ್ದ ಕೆಲವರಿಗೆ ಪುಟ್ಟ ಆನೆಮರಿಯೊಂದು ಕಂಡಿದೆ. ಅದನ್ನು ನೋಡಿ ಖುಷಿಯಾದ ಅವರು ಸೀದಾ ಊರಿಗೆ ಕರೆದುಕೊಂಡು ಬಂದರು. ಸರಿ, ಊರಿಗೆ ಬಂದ ಅತಿಥಿಗೆ ತಿನ್ನಲು, ಕುಡಿಯಲು ಏನಾದರೂ ಕೊಡಬೇಕಲ್ಲ ಎಂದು ಮನೆಮನೆಗೂ ಹೋಗಿ ಹಾಲು ಸಂಗ್ರಹಿಸಿಕೊಂಡು ಬಂದರು. ಹೀಗೆ ಹಸು, ಎಮ್ಮೆ, ಆಡಿನ ಹಾಲನ್ನೆಲ್ಲಾ ತಂದು ಒಂದು ದೊಡ್ಡ ಬಾಂಡಲಿಗೆ ಹೊಯ್ದು ಆನೆಮರಿಯ ಹತ್ತಿರ ಇಟ್ಟರೆ ಅದು ಸೊಂಡಿಲಿಳಿಸಿ ಒಂದೇ ಸಾರಿಗೆ ಎಲ್ಲವನ್ನೂ ಹೀರಿ ಎಲ್ಲರತ್ತ ಪಿಳಿಪಿಳಿ ನೋಡುತ್ತಾ ನಿಂತಿತಂತೆ!

ಈ ಆನೆಮರಿಗೆ ಹಾಲು ಪೂರೈಸುವ ಕೆಲಸ ನೆನೆದು ಹೆದರಿ ಹೋದ ಹಳ್ಳಿಗರು, ಅರ್ಜೆಂಟಾಗಿ ಬರುವಂತೆ ಫಾರೆಸ್ಟ್‌ನವರಿಗೆ ಹೇಳಿ ಕರೆಸಿಕೊಂಡಿದ್ದಾರೆ. ಅವರು ಬಂದು ಬೆಳಗ್ಗೆ ಮರಿ ಕರೆದುಕೊಂಡು ಹೋಗಿ ಅದು ಎಲ್ಲಿ ಸಿಕ್ಕಿತೋ ಆ ಕಾಡಿಗೆ ಬಿಟ್ಟರು. ಮರಿ 'ಅಮ್ಮ ಬೇಕು' ಎನ್ನುವಂತೆ ಕೂಗಲು ಶುರುಮಾಡಿತು. ಅವತ್ತು ಸಂಜೆ ಹೊತ್ತಿಗೆ ಅದೆಲ್ಲಿತ್ತೋ ಅಮ್ಮ ಆನೆ ಬಂದವಳೇ ಮಗು ಕರೆದುಕೊಂಡು ಕಾಡೊಳಗೆ ಕಣ್ಮರೆಯಾಗಿದ್ದಾಳೆ.

ನಮ್ಮೂರಾದ ಬಿಳಿದಾಳೆಯಲ್ಲಿ ಆನೆ ಕಾಣಿಸಿಕೊಂಡರೆ ಊರೆಲ್ಲಾ ಗದ್ದಲವೋ ಗದ್ದಲ, ಆನೆಗಳನ್ನು ಹೊಲ ತೋಟಗಳಾಚೆಗೆ ಕಾಡಿಗೆ ಓಡಿಸಲು ಪಟಾಕಿ ಹಚ್ಚುವುದೇನು, ಬಿಟ್ಟೂಬಿಡದೆ ತಮಟೆ ಬಾರಿಸುತ್ತಾ ಗದ್ದಲವೆಬ್ಬಿಸುವುದೇನು, ಜೊತೆಗೆ ಜನರ ಮಾತು, ಕೂಗಾಟ, ಕೋರಸ್‌ನಂತೆ ಡಜನ್‌ಗಟ್ಟಲೆ ನಾಯಿಗಳ ಬೊಗಳಾಟ, ಯಾರಾದರೂ ಕಳ್ಳಕೋವಿ ಇಟ್ಟಿರುವವರು ಗಾಳಿಯಲ್ಲಿ ಗುಂಡು ಹಾರಿಸುವುದೇನು..... ಒಟ್ಟಿನಲ್ಲಿ ಅದೆಂತಹ ಗಂಡುಗಲಿ ಆನೆ ಇದ್ದರೂ ರೇಜಿಗೆ ಬಿದ್ದು ಕಾಡಿನೊಳಗೆ ಓಡಿಬಿಡಬೇಕು, ಹಾಗಿರುತ್ತದೆ ನಮ್ಮೂರಿನವರ 'ಆಪರೇಷನ್ ಆನೆ' ಕಾರ್ಯಾಚರಣೆ.



ಒಮ್ಮೆ ಏನಾಯಿತೆಂದರೆ ಒಂದು ಹಿಂಡಾನೆ ಇಳಿಸಂಜೆ ಹೊತ್ತಲ್ಲಿ ಊರಿನ ಬಳಿ ಕಾಣಿಸಿಕೊಂಡ ಸುದ್ದಿ ಹರಡಿತು. ಜನ ತಕ್ಷಣ ಗುಂಪು ಸೇರಿ ಗಲಾಟೆ ಆರಂಭಿಸಿದರು. ಆನೆಗಳಿಗೆ ಆ ಸೀಜನ್‌ನಲ್ಲಿ ವಿಶೇಷವಾಗಿ ತಿನ್ನಲು ಏನೂ ಸಿಗುತ್ತಿರಲಿಲ್ಲ. ಜೊತೆಗೆ ಗಲಾಟೆ ಬೇರೆ, ಅದು ಗೊತ್ತಾಗಿಯೋ ಏನೋ ಆನೆ ಹಿಂಡು ಮುಂದಕ್ಕೆ ಹೋಯಿತು. ಆದರೆ ಒಂದು ಆನೆ ಮಾತ್ರ ಹೆಜ್ಜೆ ಮುಂದಿಡಲಿಲ್ಲ. ಕಾಡಿನತ್ತ ತಿರುಗಿಯೂ ನೋಡದೆ ತಮಟೆ, ಪಟಾಕಿ ವೀರರತ್ತ ನೋಡುತ್ತಾ ನಿಂತೇ ಇತ್ತು. ಜನರಿಗೂ ಪರಮಾಶ್ಚರ್ಯ, ಇದೆಂಥಾ ಆನೆ? ಇದೇನು ಕಿವುಡ ಆನೆ ಇರಬಹುದಾ ಅಥವಾ ಕುರುಡು? ನಮ್ಮ ಸದ್ದುಗದ್ದಲ ಕೇಳಿ ಓಡಿ ಹೋಗುತ್ತಿಲ್ಲ ಯಾಕೆ ಅಂತ ಅವರಿಗೆ ಡೌಟು.

ಜನ ಎಷ್ಟು ಹೊತ್ತು ಅಂತ ರಾತ್ರಿ ವೇಳೆ ಗಲಾಟೆ ನಡೆಸುತ್ತಾ ಇರಲು ಸಾಧ್ಯ. ಶಿಕಾರಿ ಶಿವ ಸೇರಿದಂತೆ ಊರಿನವರೆಲ್ಲ ಸುಸ್ತಾಗಿ ಮನೆಗೆ ವಾಪಸ್ ಹೋಗಿದ್ದಾರೆ. ಮಾರನೇ ಬೆಳಗ್ಗೆ ಎದ್ದು ನೋಡಿದಾಗ ಆನೆ ಅಲ್ಲಿರಲಿಲ್ಲ. ಆದರೂ ಜನರಿಗೆ ಸೋಜಿಗ. ಇದೆಂತಾ ವಿಚಿತ್ರ ಆನೆ, ಪಟಾಕಿ, ತಮಟೆ ಸದ್ದಿಗೆ ಹೆದರಲಿಲ್ಲವಲ್ಲ ಎಂಬ ಕುತೂಹಲ ಅವರಿಗೆ. ಅದಾದ ಕೆಲ ದಿನಗಳ ಮೇಲೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವನೊಬ್ಬ ಅತ್ತ ಬಂದ. ಅವನಿಗೆ ಪಟಾಕಿಗೆ ಹೆದರದ ಆ ಆನೆಯ ಬಗ್ಗೆ ಗೊತ್ತಿತ್ತು.

ಜನ "ಏನ್ ಸ್ವಾಮಿ ಈ ಆನೆ ಇಂಗೆ?" ಅಂದರು.


"ಊ... ಅದು ಪಟಾಕಿಗೆ, ಡೋಲು ತಮಟೆಗೆ ಹೆದರೋ ಆನೆ ಅಲ್ಲ, ಈ ಶಬ್ದ ಎಲ್ಲಾ ಅದಕ್ಕೆ ಉತ್ಸವ, ಮೆರವಣಿಗೆ ಮಾಡಿದಂಗೆ" ಅಂದ ಅವ.

"ಅದೇ ಯಾಕೆಂತ!?

"ರೀ ಅದು ತಮಿಳುನಾಡಿನ ಯಾವ್ದೋ ದೇವಸ್ಥಾನದಲ್ಲಿದ್ದ ಆನೆ ಕಂಣ್ರೀ...!"

ದೇವಸ್ಥಾನದಲ್ಲಿ ಬಂಡಿಗಟ್ಟಲೇ ಅನ್ನ, ಸೊಪ್ಪು ತಿಂದುಕೊಂಡು ದೇವರ ಉತ್ಸವ ಮೆರವಣಿಗೆಗಳಲ್ಲಿ ಓಡಾಡಿಕೊಂಡಿದ್ದ ಆ ಆನೆಗೆ ನಮ್ಮೂರ ಜನರ ಪಟಾಕಿ, ತಮಟೆಯ ಶಬ್ದಗಳೆಲ್ಲಾ 'ವೆಲ್‌ಕಂ' ಅನ್ನುವಂತೆ ಕೇಳಿಸುತ್ತಿತ್ತೇನೋ!

ಕೃತಿಕಾರರ ಪರಿಚಯ:



ಸಾಮಾಜಿಕ ಕಾರ್ಯಕರ್ತರೂ ಪತ್ರಕರ್ತರೂ ಆದ ಪಾರ್ವತೀಶ್ ಅವರು ಜನಿಸಿದ್ದು ೧೯೬೭ ಏಪ್ರಿಲ್ ೨೦ರಲ್ಲಿ. ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಬಿಳಿದಾಳೆ ಗ್ರಾಮ ಇವರ ಸ್ವಂತ ಸ್ಥಳ. 'ಚೆಕ್‌ಪೋಸ್ಟ್', 'Some ಪದ', 'ಕಾಮೆಂಟರಿ', 'ಬಿಡಿ ಚಿತ್ರಗಳು ಭಾಗ–೧ ಹಾಗೂ ಭಾಗ–೨' 'ಮಲೆನಾಡಿನ ನಕ್ಷತ್ರಗಳು' 'ಈ ನರಕ, ಈ ಪುಲಕ' 'ಅಲ್ಲಿ ಕಂಡ ಮುಖ' ಇವರ ಪ್ರಕಟಿತ ಕೃತಿಗಳು.

ಪ್ರಸ್ತುತ ಲೇಖನವನ್ನು 'ಬಿಡಿ ಚಿತ್ರಗಳು' ಅಂಕಣ ಬರಹಗಳ ಸಂಗ್ರಹದಿಂದ ಆರಿಸಿಕೊಳ್ಳಲಾಗಿದೆ.

ಪದಗಳ ಅರ್ಥ

ದೊಡ್ಡಿ– ಹಸು ಕುರಿ ಮುಂತಾದವನ್ನು ಕೂಡುವ ಕೊಟ್ಟಿಗೆ;
ಮಿತ್ರ–ಗೆಳೆಯ, ಸ್ನೇಹಿತ;
ಮುಖಾಮುಖಿ–ಪ್ರತ್ಯಕ್ಷ ಭೇಟಿ, ನೇರ ಭೇಟಿ, ಸಂದರ್ಶನ;
ಲಾತ– ಹೊಡೆತ, ಏಟು, ಒದೆತ;
ಸೀದಾ–ನೇರವಾಗಿ, ನೆಟ್ಟಗೆ;
ಶಿಕಾರಿ–ಬೇಟೆ;
ಹಿಂಡು–ಗುಂಪು, ಸಮೂಹ.

ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಸೂಕ್ತ ಉತ್ತರ ಬರೆಯಿರಿ.

೧. ಪಾರ್ವತೀಶ್ ಅವರಿಗೆ ತಮಾಷೆಯಾಗಿ ಕಂಡ ಪ್ರಸಂಗಗಳಾವುವು?

೨. ಪಾರ್ವತೀಶ್ ಹೇಳಿರುವಂತೆ ಬಿಳಿದಾಳೆ ಗ್ರಾಮದವರಿಗೆ ಯಾವ ಘಟನೆ ಹರಟೆಗೆ ವಸ್ತುವಾಗಿದೆ?

೩. ಉಡುಬುರಾಣಿ ಎಂಬಲ್ಲಿ ಸಂಭವಿಸಿದ ಆನೆಯ ಪ್ರಸಂಗ ಯಾವುದು?

೪. ಲೇಖಕರ ಹಳ್ಳಿಯವರು ಶೀಘ್ರವಾಗಿ ಬರುವಂತೆ ಫಾರೆಸ್ಟ್‌ನವರಿಗೆ ಹೇಳಿ ಕರೆಸಿದ್ದೇಕೆ?

೫. ಲೇಖಕರ ಊರಿನ ಸಮೀಪದ ಕಾಡು ಎಲ್ಲಿಂದ ಎಲ್ಲಿಯವರೆಗೆ ಹಬ್ಬಿದೆ?

೬. ಬಿಳಿದಾಳೆಯವರ 'ಆಪರೇಷನ್ ಆನೆ' ಕಾರ್ಯಾಚರಣೆ ಹೇಗಿರುತ್ತದೆ?

೭. ಬಿಳಿದಾಳೆಗೆ ಬಂದಿದ್ದ ಆನೆಯು ಪಟಾಕಿಗೆ ಹೆದರಲಿಲ್ಲ ಏಕೆ?

*****